
ಬೆಳ್ಳಿ ಮಾಲಿಕೆ



# ಮೈಸೂರು ಜಿಲ್ಲೆಯ
# ಜನಪದ ಕಲಾವಿದರು

ಮಹೇಶ ಎಮ್



ಮೈಸೂರು ಜಿಲ್ಲೆಯ

# ಜನಪದ ಕಲಾವಿದರು

ಮಹೇಶ ಎಂ.

ಕರ್ನಾಟಕ ಜಾನಪದ ಅಕಾಡೆಮಿ-ಬೆಂಗಳೂರು

**MYSURU JILLA JANAPADA KALAVIDARU**
Written by **Mahesha M.**

Published by: Dr. S. Prasadaswamy
Registrar
Karnataka Janapada Academy
Kannada Bhavan, J.C. Road
Bangalore - 02

Page : xiv + 114
Price: Rs. 60/-
Rights: Author
ಪ್ರತಿಗಳು: 500

ಪ್ರಕಾಶಕರು: ಡಾ. ಎಸ್. ಪ್ರಸಾದಸ್ವಾಮಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ: 080-22215509

ಮುದ್ರಕರು

ಧಾತ್ರಿ ಮುಸ್ತಕ, ನಂ. 170, 3ನೇ ಸಿ ಅಡ್ಡರಸ್ತೆ,
9ನೇ ಬ್ಲಾಕ್, ವಿನಾಯಕ ಬಡಾವಣೆ, ನಾಗರಬಾವಿ
2ನೇ ಹಂತ, ಬೆಂಗಳೂರು - 72 ಫೋ: 080-23586717

# ಅಧ್ಯಕ್ಷರ ನುಡಿ

ಅಕಾಡೆಮಿ ಈ ಅವಧಿಯಲ್ಲಿ ಮಹತ್ವದ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಾನಪದದ ಬೌದ್ಧಿಕ ಅಧ್ಯಯನ ಹಾಗೂ ಪ್ರದರ್ಶನ, ಸಂರಕ್ಷಣೆಗಳು ಈ ಯೋಜನೆಯ ಹಿನ್ನೆಲೆಯಾಗಿವೆ. ಪ್ರಕಟಣೆಗೆ ಒತ್ತುನೀಡುವ ಅಗತ್ಯ-ಸಂದರ್ಭಗಳ ಕಾರಣದಿಂದ ತ್ರೈಮಾಸಿಕ, ಮಹಾಪ್ರಬಂಧ, ಅಪ್ರಕಟಿತ ಲೇಖನ ಸಂಗ್ರಹಗಳ ಪ್ರಕಟಣೆಯ ಜೊತೆ ಜಾನಪದಕ್ಕಾಗಿ ದುಡಿವ, ಬದುಕನ್ನು ಮುಡಿಪಾಗಿಟ್ಟಿರುವ ಕಲಾವಿದರ ಪರಿಚಯದ ಕೃತಿಗಳು ಈ ದಿಸೆಯಲ್ಲಿ ಮುಖ್ಯವಾದುವು.

'ಜಾನಪದ ತಲೆಮಾರು' ಮಾಲಿಕೆಯ ಐದನೆ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ. ಇದರೊಡನೆ ಕ್ನನಡ, ಇಂಗ್ಲಿಷ್‌ನಲ್ಲಿ ಜಾನಪದ ಕುರಿತ ಗ್ರಂಥವೊದಂರ ಪ್ರಕಟಣೆಯ ಯೋಜನೆಯಿದೆ.

ಮೈಸೂರು ಜಿಲ್ಲೆಯ ಕಲಾವಿದರ ಪರಿಚಯದ ಈ ಕೃತಿ ಮಾಹಿತಿಯುಕ್ತ. ಸರಳತೆ, ಸ್ಪಷ್ಟತೆ ಇದರ ಗುಣ. ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಈ ಪ್ರಯತ್ನ ಜನಪದರ ಅಸ್ತಿತ್ವದ ಗುರುತೂ ಹೌದು. 'ಬೆಳ್ಳಿಮಾಲಿಕೆ''ಯ ಈ ಕೃತಿಯನ್ನು ರೂಪಿಸಿದ ಶ್ರೀ ಎಂ.ಮಹೇಶ ಅವರಿಗೆ, ಸಹಕರಿಸುವ ಅಕಾಡೆಮಿ ಸದಸ್ಯರಿಗೆ, ರಿಜಿಸ್ಟ್ರಾರ್ ಅವರಿಗೆ, ಕಚೇರಿ ಸಿಬ್ಬಂದಿಗೆ ಮತ್ತು ಓದುಗರಿಗೆ ಕೃತಜ್ಞತೆಗಳು.

**ಗೊ.ರು.ಚನ್ನಬಸಪ್ಪ**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು

# ಕೆಲಮಾತು

ಅಕಾಡೆಮಿಗೆ ಇಪ್ಪತ್ತೈದು ವರ್ಷ ತುಂಬಿದ ನೆನಪಿನ 'ಬೆಳ್ಳಿ ಮಾಲಿಕೆ'ಯಲ್ಲಿ ಈಗಾಗಲೇ ಹತ್ತು ಪುಸ್ತಕ ಹೊರಬಂದಿವೆ. ಈಗಿನ ನಾಲ್ಕು ಸೇರಿದಲ್ಲಿ ಹದಿನಾಲ್ಕು.

ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಅಕಾಡೆಮಿ ಮಹತ್ವದ ಹೆಜ್ಜೆಗುರುತುಗಳನ್ನು ದಾಖಲಿಸಿದೆ. ಈ ಹಿಂದಿನ ಅಧ್ಯಕ್ಷರು ಒಂದೊಂದು ಆಯಾಮ ಜೋಡಿಸಿ ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಬಹುಮುಖಿ ಹಾಗೂ ಜನಮುಖಿತ್ವಗಳನ್ನು ಕಲ್ಪಿಸಿರುವುದು ವೇದ್ಯ.

ಮಾನ್ಯ ಗೊ.ರು.ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಅಕಾಡೆಮಿ ಇನ್ನಷ್ಟು ಕ್ರಿಯಾಶೀಲವಾಗಿದೆ. 'ಜನಪದ ಜಗಲಿ', 'ಜಾನಪದ ಸಂಭ್ರಮ', 'ಗ್ರಾಮೀಣ ಚಿತ್ರಕಲಾ ಪ್ರದರ್ಶನ' ಮೊದಲಾದ ಹಲವು ಹತ್ತು ಯೋಜನೆಗಳು ಕಾರ್ಯಗತವಾಗುತ್ತಲಿವೆ. ಅಂತೆಯೇ 'ಜಾನಪದ ತಲೆಮಾರು' ಮಾಲಿಕೆಯ ಐದನೇ ಸಂಪುಟದ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾ ಕಲಾವಿದರ ಪರಿಚಯ ಮಾಲಿಕೆ ಯೋಜನೆ ಕಾರಣಾಂತರಗಳಿಂದ ಸ್ಥಗಿತಗೊಂಡಿತ್ತು. ಗ್ರಾಮೀಣ ಪ್ರತಿಭೆಗಳ ಅನಾವರಣಕ್ಕೆ, ಪರಿಚಯಕ್ಕೆ ಉತ್ತಮ ವೇದಿಕೆಯಾಗಿರುವ ಈ ಯೋಜನೆಗೆ ಅಕಾಡೆಮಿ ಮರುಚಾಲನೆ ನೀಡಿದೆ.

'ಬೆಳ್ಳಿ ಮಾಲಿಕೆ'ಯ ಸರಣಿಗೆ ಈ ಕೃತಿ ಹೊಸ ಸೇರ್ಪಡೆ. ಮೈಸೂರು ಜಿಲ್ಲೆಯ ಜಾನಪದ ಕಲಾವಿದರನ್ನು ಕುರಿತ ಈ ಕೃತಿ ಮಾಹಿತಿಗಳ ತೌರಾಗಿದೆ. ಕನ್ನಡ ಸಂಸ್ಕೃತಿ ಪರಂಪರೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುತ್ತಿರುವ ಈ ಅಪೂರ್ವ ಕಲಾವಿದರ ಮಾಹಿತಿ ನೀಡುವ ಈ ಕೃತಿ ಅಕಾಡೆಮಿಯ ಹೆಮ್ಮೆಯ ಪ್ರಕಟಣೆಯಾಗಿದೆ.

ಈ ಕಲಾವಿದರ ಮಾಹಿತಿಯನ್ನು ಕಲೆಹಾಕಿ, ಸಂಗ್ರಹಗೊಳಿಸಿ, ಸೂಕ್ತ ಪ್ರಸ್ತಾವನೆ ನೀಡಿರುವ ಶ್ರೀ ಎಂ.ಮಹೇಶ ಅವರಿಗೆ, ಅಂತೆಯೇ ಅಕಾಡೆಮಿ ಸದಸ್ಯರಿಗೆ ಮತ್ತು ಸ್ಥಾಯಿಸಮಿತಿ ನೀಡಿದ ಸಹಕಾರಕ್ಕಾಗಿ ವಿಶೇಷ ನೆನೆಕೆಗಳು.

ಅಕಾಡೆಮಿಯ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್.ಜಯರಾಮರಾಜೇ ಅರಸು

ಅವರಿಗೆ, ಆಗಾಗ ಸೂಕ್ತ ಸಲಹೆಗಳ ಮೂಲಕ ಅಕಾಡೆಮಿಯ ಕಾರ್ಯಗಳಿಗೆ ನಿರ್ದಿಷ್ಟತೆಯನ್ನು ಒದಗಿಸಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೆ ವಂದನೆಗಳು.

ಅಕಾಡೆಮಿಯ ಸಿಬ್ಬಂದಿಗಳಾದ ಪ್ರಕಾಶ್, ನಾಗರತ್ನ, ಶಿವಲಿಂಗಯ್ಯ, ಕಲ್ಪನಾ ಅವರ ಸಹಕಾರ ಅಪೂರ್ವವಾದುದು.

ಈ ಕೃತಿಯ ಕರಡು ತಿದ್ದಿ, ಪುಸ್ತಕದ ಸೊಗಸಿಗೆ ಕಾರಣರಾಗಿರುವ ಸಂಗ್ರಹಕಾರರಾದ ಶ್ರೀ ಎಂ.ಮಹೇಶ ಅವರಿಗೆ, ಸುಂದರವಾಗಿ ಮುದ್ರಿಸಿರುವ ಬೆಂಗಳೂರಿನ ಧಾತ್ರಿ ಪುಸ್ತಕದವರಿಗೆ, ಓದುವ ಸಹೃದಯರಿಗೆ ಅನಂತ ನಮನಗಳು.

**ಡಾ. ಎಸ್. ಪ್ರಸಾದಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅರಿಕೆ

ಒಬ್ಬನೇ ಒಬ್ಬ ದೇವನೆಂದರೆ ಜ್ಞಾನ, ಒಂದೇ ಒಂದು ಕೆಡುಕು ಎಂದರೆ ಅಜ್ಞಾನ. ಹೀಗೆಂದವನು ಡಯೋಜಿನಿಸ್ ಲಯಾರ್ಟಿಸ್. ಜನಪದರ ಜೀವನವನ್ನು ಮೇಲಿನ ಮಾತುಗಳು ಪ್ರತಿನಿಧಿಸುತ್ತವೆ. ಜನಪದರು ಅಜ್ಞಾನವನ್ನು ದೂರವಿಟ್ಟವರು. ತಮ್ಮದೇ ದೇವರು, ಧರ್ಮ, ಸಂಸ್ಕೃತಿ, ಜಾತಿ, ಆಚಾರ–ವಿಚಾರ ಮತ್ತು ನಂಬಿಕೆಗಳ ಮೂಲಕ ಜ್ಞಾನದ ಹಾದಿಯಲ್ಲಿ ನಡೆದವರು.

ಜನಪದ ಕಲಾವಿದರ ಭೇಟಿ ಮತ್ತು ಸಂದರ್ಶನ ನಿಜಕ್ಕೂ ನೋವಿನ ಸಂಗತಿ; ಕ್ಷೇತ್ರ ಕಾರ್ಯದಲ್ಲಿ ಆಗುವ ಅನುಭವಗಳೇ ಭಿನ್ನ. ಜನಪದ ಕಲಾವಿದರಲ್ಲಿ ಅನೇಕರಿಗೆ ವಾಸಿಸಲು ಮನೆಯೇ ಇಲ್ಲ ಅವರು ಮುರುಕು ಗುಡಿಸಲು, ಮಾರಿಗುಡಿ, ಬೇರೆಯವರ ಮನೆಗಳ ಪಡಸಾಲೆ ದೇವಾಲಯಗಳಲ್ಲಿ ಮಲಗುತ್ತಾರೆ. ಬಹಳಷ್ಟು ಮಂದಿ ಕಲಾವಿದರಿಗೆ ಮಾಸಾಶನ ಬರುವುದಿಲ್ಲ. ಅನೇಕರಿಗೆ ಮಕ್ಕಳಿಲ್ಲದ ಕಾರಣ ಆಶ್ರಯವೇ ಇಲ್ಲ. ಅನೇಕರು ಭಿಕ್ಷಾಟನೆ ಮಾಡಿ ಜೀವನ ನಡೆಸುತ್ತಾರೆ. ಹೀಗಾಗಿ ಕರ್ನಾಟಕದ ಅನೇಕ ಮೂಲಮಿಡಿತದ ಜನಪದ ಕಲಾ ಪ್ರಕಾರಗಳು ಕಣ್ಮರೆಯಾಗುತ್ತಿವೆ.

ಕಲಾವಿದರಲ್ಲಿ ಅನೇಕರು ತಾಯಿಯ ಹೆಸರನ್ನು ಹೇಳಲು, ದಾಖಲಿಸಲು ಇಚ್ಛಿಸುವುದಿಲ್ಲ. ಇತ್ತೀಚೆಗೆ ಕಲಾವಿದರು ಕಲಾ ಸಂಘಗಳನ್ನು ನಿರ್ಮಿಸಿಕೊಂಡು ಆ ಮೂಲಕ ಸಾಂಘಿಕವಾಗಿ ಪ್ರದರ್ಶನಗಳನ್ನು ನೀಡಲು ಪ್ರಯತ್ನಿಸುತ್ತಿದ್ದಾರೆ. ಇದೊಂದು ಆಶಾದಾಯಕ ಬೆಳವಣಿಗೆಯಾಗಿದೆ. ಯುವಕರು ಜನಪದ ಕಲೆಗಳನ್ನು ಆಸಕ್ತಿಯಿಂದ ಕಲಿಯುತ್ತಿರುವರು. ಬುಡಕಟ್ಟು ಜನಾಂಗದವರ ಸಾಹಿತ್ಯ ಮತ್ತು ಕಲೆಗಳ ಅಧ್ಯಯನ ಮತ್ತು ಸಂಗ್ರಹ ಕಾರ್ಯ ಇನ್ನೂ ನಡೆಯಬೇಕಾಗಿದೆ. ಕಾಡಿನ ಹಾಡಿಗಳಲ್ಲಿ ವಾಸಿಸುವ ಜನಾಂಗಗಳು ತಮ್ಮದೇ ಸಂಸ್ಕೃತಿ, ಪರಂಪರೆಗಳೊಡನೆ ಜೀವಿಸುತ್ತಿರುವರು. ಅವರ ಜನಪದ ಸಾಹಿತ್ಯ-ಕಲೆಗಳ ಅಧ್ಯಯನ ಮತ್ತು ಸಂಗ್ರಹ ಕಾರ್ಯವನ್ನು ಗಂಭೀರವಾಗಿ ಮಾಡಬೇಕಾಗಿದೆ. ಎರವಜನಾಂಗದ ವಿಶಿಷ್ಟ ನೃತ್ಯವಾದ ಚೀನಿದುಡಿ ನೃತ್ಯಕಲೆಯ ಹಾಡು–ಕುಣಿತಗಳ ದಾಖಲೆಯನ್ನು ಇನ್ನೂ ಮಾಡದಿರುವುದು ವಿಷಾದನೀಯ ಸಂಗತಿ.

ಮೈಸೂರು ಜಿಲ್ಲೆಯ ಜನಪದ ಕಲಾವಿದರು–ಸಂಬಂಧಿತ ನನ್ನ ಕ್ಷೇತ್ರಕಾರ್ಯ ಅಪೂರ್ಣವೆಂದೇ ನನ್ನ ಭಾವನೆ. ಇನ್ನೂ ಸಾವಿರಾರು ಜನಪದ ಸಾಹಿತ್ಯ–ಕಲಾ ಪರಂಪರೆಯನ್ನು ನಾವಿನ್ನೂ ಅಧ್ಯಯನ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ವೈಯಕ್ತಿಕವಾಗಿ ಪ್ರಯತ್ನಿಸುವ ಆಶಯವಿದೆ.

ನನಗೆ ಈ ಕ್ಷೇತ್ರಕಾರ್ಯ ಮಾಡಲು ಅವಕಾಶ ನೀಡಿದ ಕರ್ನಾಟಕ ಜಾನಪದ ಅಕಾಡೆಮಿಗೆ, ರಿಜಿಸ್ಟ್ರಾರ್ ಡಾ. ಎಸ್. ಪ್ರಸಾದಸ್ವಾಮಿಯವರಿಗೆ ನನ್ನ ಶರಣಾರ್ಥಿಗಳು.

**ಮಹೇಶ ಎಂ.**

# ಪರಿವಿಡಿ


1. ಎರವ ಜನಪದ ಕಲಾವಿದರು– ಚೀನಿದುಡಿ ನೃತ್ಯ / 1
2. ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ / 4
   ಕಂಸಾಳೆ ಮೇಳ ಕಲಾವಿದ, ಬೀಸುಕಂಸಾಳೆ /
3. ಶಿವಮ್ಮ–ತತ್ವಪದ / 7
4. ಬೆಟ್ಟದ ಬೀಡು ಸಿದ್ಧಶೆಟ್ಟಿ–ಕಂಸಾಳೆ ಮೇಳ ಕಲಾವಿದ / 8
5. ಉಡಿಗಾಲದ ಮಹಾದೇವಪ್ಪ –ನಂದಿಧ್ವಜ / 11
6. ಪಾರ್ವತಮ್ಮ–ತತ್ವಪದ / 12
7. ಗಾಡಿಜೋಗಿ ಹುಂಡಿ ಹುಚ್ಚಮ್ಮ–ತತ್ವಪದ / 13
8. ಕುಕ್ಕರ ಹಳ್ಳಿ ಮರಿಸಿದ್ದಮ್ಮ–ತತ್ವಪದ / 14
9. ಗವಿಸಿದ್ಧಮ್ಮ–ತತ್ವಪದ / 16
10. ಕಂಸಾಳೆ ಮಹಾದೇವಯ್ಯ–ಬೀಸುಕಂಸಾಳೆ, ಕಂಸಾಳೆ ಮೇಳ ಕಲಾವಿದ / 17
11. ಸಿದ್ಧರಾಮಯ್ಯ–ಪೂಜಾಕುಣಿತ /19
12. ಮರೀಗೌಡ–ಕಂಸಾಳೆಮೇಳ ಕಲಾವಿದ, ಬೀಸುಕಂಸಾಳೆ / 20
13. ಸಿದ್ಧಮ್ಮ–ತತ್ವಪದ / 22
14. ಮಾದಶೆಟ್ಟಿ–ಕಂಸಾಳೆ ನೀಲಗಾರ ಮೇಳ, ಬೀಸುಕಂಸಾಳೆ
    ಮರಗಾಲು ಬೀಸುಕಂಸಾಳೆ / 23
15. ರಾಜು ಜೆ.ಡಿ–ಕೋತಿಕುಣಿತ / 24
16. ಲಿಂಗರಾಜು ಜೆ.ಆರ್.–ಕೋಲಾಟ / 25
17. ಸೋಮಯ್ಯ–ಹುಲಿಕುಣಿತ / 27

18. ಮಾದಪ್ಪ .ಪಿ– ಕಂಸಾಳೆ ಮೇಳ / 27
19. ಕಂಸಾಳೆ ಕುಮಾರ ಸ್ವಾಮಿ–ಬೀಸುಕಂಸಾಳೆ, ಕಂಸಾಳೆ ಮೇಳ / 28
20. ತಂಬೂರಿ ನಂಜೇಗೌಡ–ತಂಬೂರಿ ಮೇಳ, ವೃತ್ತಿಗಾಯಕ / 30
21. ಚಿಕ್ಕತಾಯಮ್ಮ–ತತ್ವಪದ / 31
22. ಚಂದ್ರಪ್ಪ ವೈ.ಎಸ್–ಪೂಜಾಕುಣಿತ / 32
23. ಬಸವಣ್ಣ ಹಲ್ಲರೆ–ವೀರಗಾಸೆ, ಸೂತ್ರದ ಗೊಂಬೆ ಕಲಾವಿದ / 33
24. ನಿಂಗಮ್ಮ–ತತ್ವಪದ / 34
25. ಮಹದೇವಶೆಟ್ಟಿ–ಬೀಸುಕಂಸಾಳೆ, ಮರಗಾಲು ಬೀಸು ಕಂಸಾಳೆ / 35
26. ಮಹದೇವಯ್ಯ ಪಿ.ಆರ್–ಡೋಲು / 36
27. ಯು.ಎಸ್. ರಾಮಣ್ಣ / 37
ಬೀಸುಕಂಸಾಳೆ, ಮೂಡಲಪಾಯಿ ಯಕ್ಷಗಾನ, ಕರಪಾಲಮೇಳ / 37
28. ಮಾದನಾಯಕ ಟಿ.ಎಸ್.–ಕೋಲಾಟ / 39
29. ಕಾಳಮ್ಮ–ತತ್ವಪದ / 40
30. ಕೃಷ್ಣನಾಯಕ–ಕೋಲಾಟ / 41
31. ನರಸಿಂಹನಾಯಕ ಟಿ.ಎಸ್.–ಕೋಲಾಟ, ದೊಣ್ಣೆವರಸೆ, ತತ್ವಪದ / 42
32. ಸಂಪತನಾಯಕ ಟಿ.ಎಸ್.–ಕೋಲಾಟ / 44
33. ನಂಜನಗೂಡು ನಾಗರಾಜು–ಗಾರುಡಿಗೊಂಬೆ / 45
34. ಚಿಕ್ಕಮರಿಯಪ್ಪ–ಬೀಸುಕಂಸಾಳೆ / 46
35. ಗೂಳಿಮಾದಶೆಟ್ಟಿ–ಮರಗಾಲು ಬೀಸು ಕಂಸಾಳೆ / 47
36. ಮಾರಶೆಟ್ಟಿ–ಮರಗಾಲು ಬೀಸು ಕಂಸಾಳೆ / 48
37. ಕುಮಾರ ಜೆ–ಮರಗಾಲು ಬೀಸು ಕಂಸಾಳೆ / 49
38. ಸ್ವಾಮಿ–ಮರಗಾಲು ಬೀಸುಕಂಸಾಳೆ / 50
39. ಪುಟ್ಟಶಿವರಾಜು–ಬೀಸುಕಂಸಾಳೆ / 51
40. ನಾರಾಯಣಶೆಟ್ಟಿ – ಮರಗಾಲು ಬೀಸುಕಂಸಾಳೆ, ಬೀಸುಕಂಸಾಳೆ,
ಕೀಲುಕುದುರೆ ಕುಣಿತ / 52

41. ಮಾದೇವಶೆಟ್ಟಿ–ಮರಗಾಲು ಬೀಸುಕಂಸಾಳೆ / 53

42. ಕಿರಾಳುನಾಗಪ್ಪ ಮಹೇಶ–ವೀರಭದ್ರಕುಣಿತ / 54

43. ವೆಂಕಟಸ್ವಾಮಯ್ಯ–ತಂಬೂರಿ ಪದ / 55

44. ದೊಡ್ಡಮಾದಶೆಟ್ಟಿ–ಮರಗಾಲು ಬೀಸುಕಂಸಾಳೆ, ಕಂಸಾಳೆ ಮೇಳ / 56

45. ಗೋವಿಂದರಾಜು ಹೆಚ್.ಜೆ.–ಕೊಳಲು, ನಾದಸ್ವರ, ಪಿಟೀಲು / 57

46. ಪ್ರಭುಸ್ವಾಮಿ–ವೀರಗಾಸೆ / 59

47. ಬಸವನಾಯ್ಕ–ಜನಪದ ರಂಗಭೂಮಿ / 60

48. ಚಲುವಚಾರ್ ಡಿ.ಎನ್–ಯಕ್ಷಗಾನ, ರಂಗಭೂಮಿ 61

49. ಸಣ್ಣಶೆಟ್ಟಿ ಕೆ.ಪಿ.–ರಂಗಭೂಮಿ / 62

50. ಶಿವಣ್ಣ–ರಂಗಭೂಮಿ / 63

51. ಅಪ್ಪಣ್ಣಾಚಾರ್–ರಂಗಭೂಮಿ / 64

52. ಬಸವಯ್ಯ ಸಿ.–ರಂಗಭೂಮಿ / 65

53. ವೀರಭದ್ರಯ್ಯಚಾರ್ಯ–ರಂಗಭೂಮಿ / 66

54. ಕೃಷ್ಣಶೆಟ್ಟಿ ಹೆಚ್.ಆರ್.–ರಂಗಭೂಮಿ / 67

55. ಗೋವಿಂದದಾಸ ಹೆಚ್.ಎನ್.–ರಂಗಭೂಮಿ, ಹರಿಕಥೆ / 68

56. ಚಿಕ್ಕೇಗೌಡ–ರಂಗಭೂಮಿ / 69

57. ಮಹದೇವು–ರಂಗಭೂಮಿ / 70

58. ಮಲ್ಲಯ್ಯಬೆಟ್ಟದೂರು–ಘಟಂ, ತಬಲ / 71

59. ರಾಜುಹೊನ್ನಿಕುಪ್ಪೆ –ರಂಗಭೂಮಿ / 72

60. ಬಸವಯ್ಯ ಕೊಳಗಟ್ಟಹಳ್ಳಿ–ರಂಗಭೂಮಿ / 73

61. ಜವರಾಯಿ–ತತ್ವಪದ, ರಂಗಭೂಮಿ / 74

62. ಗುರುಸ್ವಾಮಪ್ಪ–ರಂಗಭೂಮಿ / 75

63. ಲಕ್ಷ್ಮಣಮೂರ್ತಿ .ವಿ–ರಂಗಭೂಮಿ / 76

64. ನಾರಾಯಣಚಾರ್ ಬಿ.ಎಸ್.–ರಂಗಭೂಮಿ / 77

65. ಶಿವಣ್ಣನಾಯಕ ವೈ.ಡಿ.–ರಂಗಭೂಮಿ / 78

66. ರಾಮಯ್ಯ–ರಂಗಭೂಮಿ / 79

67. ಸೋಮಣ್ಣ ಎಂ.ಡಿ.–ರಂಗಭೂಮಿ / 80

68. ಮೂರ್ತಿ ಕೆ.ಆರ್.–ರಂಗಭೂಮಿ / 81

69. ಜವರಯ್ಯ–ರಂಗಭೂಮಿ / 82

70. ಬಸವರಾಜು ನಾಯ್ಕ–ರಂಗಭೂಮಿ / 83

71. ನಾಗಣ್ಣಾಚಾರ್ಯ–ರಂಗಭೂಮಿ / 84

ಅನುಬಂಧ 85–114

# ಎರವರ ಚೀನಿದುಡಿ ನೃತ್ಯ ಜನಪದ ಕಲಾವಿದರು

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ಡಿ.ಬಿ.ಕುಪ್ಪೆ ಗ್ರಾಮದ ಸಮೀಪದ ಗೋಳೂರು ಹಾಡಿಯ ಹಣ್ಣಿನ ತೋಟದಲ್ಲಿ ಎರವಜನಾಂಗದ ಚೀನಿದುಡಿ ಜನಪದ ಕಲಾವಿದರ ತಂಡಗಳಿವೆ. ನಾಗರಹೊಳೆ ಕಾಡಿನ ನಡುವೆ ಇರುವ ಹಾಡಿಗಳಲ್ಲೂ ಎರವ ಜನಾಂಗಕ್ಕೆ ಸೇರಿದ ಜನಪದ ಕಲಾವಿದರ ತಂಡಗಳಿವೆ.

ಇಲ್ಲಿ ಎರವರು, ಜೇನುಕುರುಬರು, ಕಾಡುಕುರುಬರು, ಬೆಟ್ಟಕುರುಬರು, ಫಣಿಯರು ಮತ್ತು ಸೋಲಿಗರಿದ್ದಾರೆ. ಇಲ್ಲಿ ಎರವರು ಚೀನಿದುಡಿ ಕಲಾವಿದರು. ಕಾಡಿನ ನಡುವೆ ವಾಸಿಸುವ ಇವರು ಆಧುನಿಕತೆಯ ಸಂಪರ್ಕವಿದ್ದರೂ ತಮ್ಮ ಮೂಲ ಸಂಪ್ರದಾಯಗಳನ್ನು ತ್ಯಜಿಸಿಲ್ಲ. ಹೊರಗಿನವರು ಹಾಡಿಯನ್ನು ಪ್ರವೇಶಿಸಿದರೆ ದೇವರಿಗೆ ಬಟ್ಟಕ್ಕಿ – ಅಂದರೆ ದೇವರಿಗೆ ನಮಸ್ಕರಿಸಿ ಹೊರಗಿನವರಿಂದ ಯಾವುದೇ ತೊಂದರೆ ಬರದಿರಲೆಂದು ಪ್ರಾರ್ಥಿಸಿ ಅನಂತರ ಮಾತುಕತೆಗೆ ಕೂರುವರು.

ಇಲ್ಲಿ ಹೆಚ್ಚಿನ ಸಂಖ್ಯೆಯ ಚೀನಿದುಡಿ ಕಲಾವಿದರನ್ನು ಕಾಣಬಹುದು. ಚೀನಿದುಡಿ ಕಲಾವಿದರ ತಂಡದಲ್ಲಿ ತೊಲಯ್ಯ(70ವ) (ಕ್ಷೇತ್ರಾಧ್ಯಕ್ಷ), ಬಸವಯ್ಯ (45ವ), ಕಾಳಯ್ಯ (60ವ) ಚಾಮಯ್ಯ (60ವ), ಜವನಪ್ಪ(35ವ), ಮಾರ (40ವ), ಕಾಳ(45ವ), ಮರಿಕಾಳ(40ವ), ಕುಂಜಿಲ(35ವ), ಕುಳಿಮಾರಯ್ಯ (40ವ), ಮಾದ (25ವ), ಮಾದಬಸವ(30ವ), ಕುಳಿಯ (25ವ), ಕುಳಿಯನನಂಜಯ್ಯ (25ವ), ರಾಜು (25ವ), ನಾರಾಯಣ(28ವ) ಮೊದಲಾದವರಿದ್ದಾರೆ.

ಎರವ ಭಾಷೆಯಲ್ಲಿ ಹಾಡಿ ಕುಣಿವ ಇವರು ಗುಂಪಿನಲ್ಲೂ, ಏಕಾಕಿಯಾಗಿಯೂ ಪ್ರದರ್ಶನಗಳನ್ನು ನೀಡಬಲ್ಲರು. ಕುಣಿಯುವಾಗ ಕಟ್ಟಿ ಕುಣಿಯುವ ಪರಿಕರಗಳಿವೆ. ಜೊತೆಗೆ ಚೀನಿ, ದುಡಿ, ಬುಂಡೆ, ಗೆಜ್ಜೆ, ಬಾಳುಗಳನ್ನು ಹೊಂದಿರುತ್ತಾರೆ. ಇದುವರೆಗೂ ಅವರ ಜನಾಂಗದ ಸಂಪ್ರದಾಯಗಳ ಒಂದು ಭಾಗವಾಗಿದ್ದ ಚೀನಿದುಡಿ ನೃತ್ಯವು ಈಗೀಗ ಸಾರ್ವಜನಿಕ ಪ್ರದರ್ಶನಕಲೆಯಾಗಿಯೂ ಬೆಳೆದಿದೆ.



ಚೀನಿದುಡಿ ಹಿರಿಯ ಕಲಾವಿದರು (ಎರವ ಜನಾಂಗ)

ಎರವರು ಮರಣದ ದಿನಕಳೆದು ಮೂರನೆಯ ತಿಥಿಮಾಡುವಾಗ ಚೀನಿ ದುಡಿ ನುಡಿಸುವರು. ಮದುವೆಯ ಸಂದರ್ಭದಲ್ಲಿ ದುಡಿ ಮಾತ್ರ ನುಡಿಸುವರು.

ಮೂವತ್ತೂ್ಮರು ಹಾಡಿಗಳ ಯಜಮಾನರುಗಳ ಕೂಡಿ ಎರವ ಜನಾಂಗದ ಚೀನಿದುಡಿ ನೃತ್ಯವನ್ನು ಪ್ರದರ್ಶನಕಲೆಯಾಗಿ ಬೆಳೆಸಲು ತೀರ್ಮಾನಿಸಿದ ಅನಂತರ ಇದು ಹೊರಜಗತ್ತಿಗೆ ತಿಳಿದುಬಂದಿತು. ಜಾನಪದ ಪರಂಪರೆಯಿಂದ ಬಂದ ಚೀನಿದುಡಿ ನೃತ್ಯದ ಹಾಡುಗಳು ಇದುವರೆಗೂ ದಾಖಲಾಗಿಲ್ಲ. ಇವರ ಹಾಡು, ಕುಣಿತಗಳಲ್ಲಿ ವೈವಿಧ್ಯವಿದೆ. ಈ ನೃತ್ಯ ತಂಡದಲ್ಲಿ ಪುರುಷರು ಇರುತ್ತಾರೆ. ಗದ್ದಿಗೆ ಹಾಡು, ಕೈಯಾಟದ ಹಾಡು, ಕುಳಿತೆರೆ ಕಟ್ಟುವಾಗ ಹಾಡುವ ಹಾಡು, ಮದುವೆ ಸಂದರ್ಭದ ಹಾಡುಗಳು ಇವೆ. ಪೂಜೆ, ಕುಣಿತ, ಹಾಡುಗಳು ಒಟ್ಟಾಗಿ ನಡೆಯುವವು.

ಎರವರು ಸಮಯಕೂಟ, ದೇಶದ ಮಾರಿ, ಚಾಮುಂಡಿ, ಮಹದೇಶ್ವರ, ಸಿದ್ದಪ್ಪಾಜಿ, ಚಿಕ್ಕಮ್ಮದೇವತೆ, ನಂಜುಂಡೇಶ್ವರ, ದೇವೀರಮ್ಮ ಮುಂತಾದ ದೇವತೆಗಳನ್ನು




ಚೀನಿದುಡಿ ಹಿರಿಯ ಕಲಾವಿದರು (ಎರವ ಜನಾಂಗ)

ಪೂಜಿಸುವರು; ಕಾಡಿನ ದೇವತೆಗಳನ್ನೂ ಆರಾಧಿಸುವರು. ತಮ್ಮ ಕಲೆ, ಸಂಸ್ಕೃತಿ, ಸಾಹಿತ್ಯ ಸಮೂಹಮಾಧ್ಯಮಗಳಲ್ಲಿ ಪ್ರಚಾರಗೊಳ್ಳಬೇಕೆಂದು ಎರವ ಜನಪದ ಕಲಾವಿದರು ಬಯಸುವರು. ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಎರವಜನಾಂಗದ ಚೀನಿದುಡಿನೃತ್ಯ ಪ್ರದರ್ಶಿತವಾಗಿದೆ.

"ನಾವು ಕಾಡು ಬಿಟ್ಟು ನಾಡಿನ ಕಡೆಗೆ ಬರುವುದಿಲ್ಲ. ನಮಗೆ ನಮ್ಮದೇ ಆದ ಜೀವನವಿದೆ. ನಮ್ಮ ಸಂಸ್ಕೃತಿ, ಕಲೆ ಮತ್ತು ಸಾಹಿತ್ಯ ಪ್ರಚಾರ ಪಡೆಯಬೇಕು. ಹಾಡಿಗಳಲ್ಲಿ ಶಾಲೆಗಳಿವೆ. ಇದರಿಂದಾಗಿ ನಮ್ಮ ಮಕ್ಕಳು ವಿದ್ಯಾವಂತರಾಗುತ್ತಿದ್ದಾರೆ. ಅವರು ಆತ್ಯಾಧುನಿಕ ಜೀವನಕ್ಕೆ ಕಾಲಿಡುತ್ತಾರೆ. ಆ ಬಗ್ಗೆ ನಮಗೆ ಸಂತೋಷವಿದೆ."

–ಎಂದು ಗೂಳೂರು ಹಾಡಿಯ ಯಜಮಾನ ಮತ್ತು ಕ್ಷೇತ್ರಾಧ್ಯಕ್ಷ ತೊಲಯ್ಯ ಅಭಿಪ್ರಾಯ ಪಡುವರು.



ಕಂಸಾಳೆ ಮಹಾದೇವಯ್ಯ

## ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ

ಕ್ಯಾತಮಾರನಹಳ್ಳಿ ಕಂಸಾಳೆ ಮಹಾದೇವಯ್ಯ ಅವರು ಮೈಸೂರಿನ ಕ್ಯಾತಮಾರನಳ್ಳಿಯ ಕಂಸಾಳೆ ಮೇಳ ಕಲಾವಿದರು. ತಂದೆ ಮಾದಯ್ಯ, ತಾಯಿ ಮಾದಮ್ಮ, ಗುರು ಮಾದಯ್ಯ. ತಂದೆ ಮಾದಯ್ಯನವರೇ ಕಂಸಾಳೆ ಮಹಾದೇವಯ್ಯ ಅವರ ಗುರುಗಳು.

ಎಪ್ಪತ್ತೂರು ವರ್ಷ ವಯಸ್ಸಿನ ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರು ಅರ್ಧಶತಮಾನಕ್ಕೂ ಹೆಚ್ಚು ಕಾಲ ಕಂಸಾಳೆ ಹಾಡುಗಾರಿಕೆಯಲ್ಲಿ ಪಳಗಿದವರು. ಇವರ ತಂಡದಲ್ಲಿ ನಾಗಯ್ಯ, ಪುಟ್ಟಮಾದಯ್ಯನ, ಕುಳ್ಳಪ್ಪ, ನಂಜುಂಡ, ಜವರಪ್ಪ, ಸ್ವಾಮಿ ಮೊದಲಾದವರಿದ್ದಾರೆ.

ದೇವಗುಡ್ಡರಾದ ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರು ಗಂಗಾಮತಸ್ಥ ಜನಾಂಗಕ್ಕೆ ಸೇರಿದವರು. ಬೀಸುಕಂಸಾಳೆ ಹಾಗೂ ಮೇಳ ಕಲಾವಿದರಾದ ತಂದೆ ಮಾದಯ್ಯ ಅವರಿಂದ ಕಲೆಯನ್ನು ಕರಗತ ಮಾಡಿಕೊಂಡರು. ತಂದೆಯವರು ಹಾಡುವಾಗ ಅವರಿಂದ ಪ್ರಭಾವಿತರಾಗಿ ಮಹಾದೇವಯ್ಯ ಬಾಯಿಪಾಠದಿಂದಲೇ ಹಾಡುವುದನ್ನು ಕಲಿತರು. ಬಾಲ್ಯದಲ್ಲಿಯೇ ಜನಪದ ಮಹಾಕಾವ್ಯಗಳು ಮನದಲ್ಲಿ ನೆಲೆ ನಿಂತವು; ಕಂಸಾಳೆ, ತಾಳ, ದಮ್ಮಡಿಗಳಲ್ಲೂ ಪರಿಣಿತರಾದರು. ಮುಂದೆ ಪರಿಣಿತ ಜನಪದ ಕಲಾವಿದರ ಸಹವಾಸದಿಂದ ಇನ್ನೂ ಹೆಚ್ಚಿನ ಸಾಧನೆಯನ್ನು ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಮಾಡಿದರು.

ಬಾಲ್ಯದಿಂದಲೂ ದೇವರ ಗುಡ್ಡರಾಗಿ ಊರೂರು ಅಲೆದು ಭಿಕ್ಷೆ ಸ್ವೀಕರಿಸಿ ತಮ್ಮ ಕಲಿತ ಕಲೆಯನ್ನು ಲೋಕದೊಳಗೆ ಸಾದರ ಪಡಿಸಿದರು. ಮುಂದೆ ಹೊಸಕೋಟೆ ಕೀಣಯ್ಯ, ಶಿಳ್ಯಯ್ಯ ಅವರ ಬೀಸುಕಂಸಾಳೆಯಿಂದ ಆಕರ್ಷಿತರಾದ ಮಹಾದೇವಯ್ಯ ಬೀಸುಕಂಸಾಳೆಯಲ್ಲೂ ಪರಿಣತಿಯನ್ನು ಸಾಧಿಸಿದರು. ಆ ವೇಳೆಗೆ ಬಂಡಿಕೇರಿ ಕಂಸಾಳೆ ಮಹಾದೇವಯ್ಯ ಅವರು ಬೀಸುಕಂಸಾಳೆಯಲ್ಲಿ ಸಾಕಷ್ಟು ಹೆಸರನ್ನು ಸಂಪಾದಿಸತೊಡಗಿದ್ದರು. ಇದರಿಂದಾಗಿ ಮುಂದೆ ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರು ಮೇಳ ಕಲಾವಿದರಾಗಿ ಮುಂದುವರಿದರು; ಹಾಡುಗಾರಿಕೆ ಉಸಿರಾಯಿತು.

ಕ್ಯಾತಮಾರನಹಳ್ಳಿ ಕಂಸಾಳೆ ಮಹಾದೇವಯ್ಯ ಅವರಿಗೆ ಅದ್ಭುತವಾದ ಸ್ಮರಣಶಕ್ತಿ ಇದೆ. ಇವರು ಮಲೆ ಮಹದೇಶ್ವರ ಕಾವ್ಯವನ್ನು ಏಳು ರಾತ್ರಿಯವರೆಗೆ ಹಾಡಬಲ್ಲರು. ಸಿದ್ಧಪ್ಪಾಜಿ ಚರಿತ್ರೆ, ಬಸವಣ್ಣನವರ ಚರಿತ್ರೆ, ನಾರಾಯಣ ಸ್ವಾಮಿ ಚರಿತ್ರೆ, ಮುಡುಕುತೊರೆ ಮಲ್ಲಪ್ಪಚರಿತ್ರೆ, ಸಾರಂಗ ರಾಮ, ಭಕ್ತಸಿರಿಯಾಳ, ಚನ್ನಿಗರಾಯನಕಥೆ, ಬಾಣಾಸುರ, ರಾಜಾವಿಕ್ರಮ, ನಳಚಕ್ರವರ್ತಿಕಥೆ, ಸತ್ಯವ್ರತ, ಧರ್ಮಪಾಲ, ಜೋಗಿ ಹಾಡು, ಲವಕುಶರ ಕಾಳಗ, ಗಂಗೆ-ಗೌರಿ ಜಗಳ, ಬಾಲನಾಗಮ್ಮ, ಘನಪಟೆ ಮಹಾರಾಜನ ಕೋಟೆಗೆ ಕನ್ನಹಾಕಿದ ಪ್ರಸಂಗ, ಚಾಮುಂಡಿ, ಪಿರಿಯಾಪಟ್ಟಣ ಕಾಳಗ ಮುಂತಾದ ಇಪ್ಪತ್ತೈದಕ್ಕೂ ಹೆಚ್ಚು ಕಾವ್ಯಗಳನ್ನು ಹಾಡುವರು.

ಬೆಂಗಳೂರು, ಹಾಸನ, ಕೊಡಗು, ಚಾಮರಾಜನಗರ, ಮಹದೇಶ್ವರನ ಬೆಟ್ಟ ಮುಂತಾದ ಕಡೆಗಳಲ್ಲಿ ಹಲವು ಬಾರಿ ಮಹಾದೇವಯ್ಯ ಕಥೆ ಮಾಡಿದ್ದಾರೆ. ಶ್ರಾವಣ ಶನಿವಾರಗಳಲ್ಲಿ ಶನಿದೇವರ ಮಹಾತ್ಮೆಯನ್ನೂ ಹಾಡುತ್ತಾರೆ. ಕಾರ್ತಿಕ ಸೋಮವಾರಗಳಲ್ಲಿ ಊರೂರು ಸುತ್ತಿ ಕಥೆಗಳನ್ನು ನಡೆಸಿಕೊಡುತ್ತಾರೆ. ಮುಖ್ಯವಾಗಿ


ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರು ಹಲವಾರು ಶಿಷ್ಯರನ್ನು ತಯಾರು ಮಾಡಿ ಜನಪದ ಪರಂಪರೆಯನ್ನು ಉಳಿಸಿ-ಬೆಳೆಸಿದ್ದಾರೆ.

ಹಿರಿಯ ಜಾನಪದ ವಿದ್ವಾಂಸರಾದ ಡಾ.ಪಿ.ಕೆ.ರಾಜಶೇಖರ ಅವರು ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರಿಂದ ಬೆಟ್ಟದ ಚಾಮುಂಡಿ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ (1971). ಡಾ.ಪಿ.ಕೆ ರಾಜಶೇಖರ ಅವರು ಪ್ರಕಟಿಸಿರುವ ಮಲೆಯ ಮಹದೇಶ್ವರ ಮಹಾಕಾವ್ಯದಲ್ಲಿ ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರ ಪಾಠಗಳದ್ದೇ ಸಿಂಹಪಾಲು, ಡಾ.ಪಿ.ಕೆ.ಆರ್. ಪ್ರಕಟಿಸಿರುವ ಜನಪದ ರಾಮಾಯಣದ ಲವಕುಶರ ಕಾಳಗ, ಜನಪದ ಬಸವ ಪುರಾಣದ ಮಡಿವಾಳ ಮಾಚಯ್ಯ ಭಾಗಗಳು ಮಹಾದೇವಯ್ಯ ಅವರ ಪಾಠಗಳೇ ಆಗಿವೆ. ಡಾ.ಪಿ.ಕೆ.ಆರ್ ಅವರು ಮಹಾದೇವಯ್ಯ ಅವರಿಂದ ಜನಪದ ಕಾವ್ಯಗಳನ್ನು ಸಂಗ್ರಹಿಸಿದ್ದಾರೆ. ಸಾವಿರಾರು ಪುಟಗಳ ಕಾವ್ಯಗಳು ಮುದ್ರಣ ಕಾಣಬೇಕಾಗಿದೆ.

ಕರ್ನಾಟಕದ ಜನಪದ ವಿದ್ವಾಂಸರುಗಳಾದ ಶ್ರೀಯುತರಾದ ದೇಜಗೌ, ಹಾ.ಮಾ.ನಾ, ಡಾ.ಪಿ.ಕೆ.ರಾಜಶೇಖರ, ಡಾ.ಸಿ.ಪಿ.ಕೆ, ಸುಧಾಕರ, ಡಾ.ಹಿ.ಶಿ. ರಾಮಚಂದ್ರೇಗೌಡ ಮುಂತಾದವರು ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ ಅವರ ಕಾವ್ಯಗಳನ್ನು ಕೇಳಿ ಸಂಗ್ರಹಿಸಿ ಮೆಚ್ಚಿದ್ದಾರೆ. ಅವರನ್ನು ಗೌರವಿಸಿ ಸನ್ಮಾನಿಸಿದ್ದಾರೆ.

ಕ್ಯಾತಮಾರನಹಳ್ಳಿ ಕಂಸಾಳೆ ಮಹಾದೇವಯ್ಯ ಅವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ (2000-01) ಕಲಾವಿದ ಪ್ರಶಸ್ತಿ, ರತ್ನ ಪ್ರಶಸ್ತಿ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ-ಗೌರವಗಳು ದೊರಕಿದೆ.

"ನನ್ನ ಕಡೇ ಉಸ್ರು ಇರೋವರ್ಗೂ ಆಡ್ತಾನೇ ಇರ್ತೀನಿ" ಎನ್ನುವ ಕ್ಯಾತಮಾರನಹಳ್ಳಿ ಕಂಸಾಳೆ ಮಹಾದೇವಯ್ಯ ಅವರು ಜನಪದ ಲೋಕದ ಶ್ರೇಷ್ಠ ಕಲಾವಿದರು.



## ಶಿವಮ್ಮ


ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಶ್ಯಾನುಭೋಗನಹಳ್ಳಿಯ ಶಿವಮ್ಮ ಜನಪದ ಗೀತೆಗಳನ್ನು, ತತ್ತ್ವಪದಗಳನ್ನು ಹಾಡುವರು. ತಂದೆ ಮುನಿ ವೆಂಕಟಯ್ಯ. ಜಾತಿ ದಲಿತರು. ತಾಯಿ: ಸುಂಕಮ್ಮ, ಗುರು ಜ್ಞಾನಾನಂದರು.

ಅರವತ್ತಾರು ವರ್ಷ ವಯಸ್ಸಿನ ಶಿವಮ್ಮ ಸುಮಾರು ನಲವತ್ತೈದು ವರ್ಷಗಳಿಂದಲೂ ಜಾನಪದ ತಂಬೂರಿ ಮತ್ತು ಗುರುತತ್ವಭಜನೆ ಪದಗಳನ್ನು ಹಾಡುತ್ತಾ ಬಂದಿರುವರು. ಇವರದೇ ಆದ ತಂಡದಲ್ಲಿ ವೆಂಕಟಸ್ವಾಮಯ್ಯ (45 ವ.), ರಾಜಮ್ಮ (50 ವ.), ಈರಮ್ಮ (45 ವ.), ವೆಂಕಟೇಶಯ್ಯ (35 ವ.) ಮತ್ತು ಶಂಕರ (28 ವ.) ಎಂಬುವವರಿದ್ದಾರೆ.

ಶಿವಮ್ಮ ಅವರ ತಂಡವು ಅನೇಕ ಕಾರ್ಯಕ್ರಮಗಳನ್ನು ನೀಡಿದೆ. ವಿಭಾಗೀಯ ಮಟ್ಟದ ದಲಿತರ ಹಾಗೂ ಹಿಂದುಳಿದವರ ಸಾಂಸ್ಕೃತಿಕ ಹಿನ್ನೆಲೆ ಕಲಾಮೇಳದಲ್ಲಿ ವಿಶೇಷ ಪ್ರಶಸ್ತಿ ಪತ್ರ ಮತ್ತುಮೆಚ್ಚುಗೆಯನ್ನು ಗಳಿಸಿದೆ.

ಶಿವಮ್ಮ ಅವರು ಯಾವುದೇ ಪ್ರತಿಫಲಾಪೇಕ್ಷೆಗಳಿಲ್ಲದೆ ಗ್ರಾಮಾಂತರ ಪ್ರದೇಶಗಳ ಕಾರ್ಯಕ್ರಮಗಳಲ್ಲಿ ಜನಪದ ಗೀತೆಗಳನ್ನು ಹಾಡುತ್ತಾ ಬಂದಿದ್ದಾರೆ. ಮದುವೆ, ಸಮಾರಂಭಗಳು, ಜಾತ್ರೆ ಮತ್ತು ಸಾವಿನ ಮನೆಗಳಲ್ಲಿ ಹಾಡಿವರು.

"ಜನಪದ ಕಲಾವಿದರು ಉಳಿದಾಗ ಜನಪದ ಸಂಸ್ಕೃತಿಯೂ ಉಳಿಯುತ್ತದೆ. ಆದುದರಿಂದ ಹಳೆಯ ಜನಪದ ಕಾವ್ಯಗಳು ಉಳಿಯಬೇಕಾದರೆ ಅವುಗಳನ್ನು ಸಂಗ್ರಹಿಸುವ ಕೆಲಸವಾಗಬೇಕೆಂದು" ಶಿವಮ್ಮ ಅಭಿಪ್ರಾಯ ಪಡುವರು. ಜನಪದ ಸಂಸ್ಕೃತಿ ಉಳಿದು-ಬೆಳೆಯಬೇಕೆಂದು ಇವರು ಆಶಿಸುವರು.



ಜನಪದ ಗಾಯಕರತ್ನ ಬೆಟ್ಟದಬೀಡು ಸಿದ್ದಶೆಟ್ಟಿ

## ಜನಪದ ಗಾಯಕರತ್ನ ಬೆಟ್ಟದಬೀಡು ಸಿದ್ದಶೆಟ್ಟಿ

ಮೈಸೂರು ಜಿಲ್ಲೆ ನಂಜನಗೂಡು, ತಾಲ್ಲೂಕಿನ ಹೊರಳ್ಳಿ ಗ್ರಾಮದ ಸಿದ್ಧಶೆಟ್ಟಿ ಜನಪದ ಕಲಾವಿದರು. ತಂದೆ ಗುಂಡುಮಾದಯ್ಯ, ತಾಯಿ ಸಿದ್ಧಮ್ಮ. ಗುರುಗಳು ಉದ್ದೂರಿನ ಮಾದಪ್ಪಶೆಟ್ಟಿ ಮತ್ತು ಮಧೂನಹಳ್ಳಿ ನಂಜಪ್ಪಶೆಟ್ಟಿ

ಸಿದ್ಧಶೆಟ್ಟರು ಚಿಕ್ಕಹಲಗೂರು ಸಿದ್ಧಪ್ಪಾಜಿಯ ಆಶೀರ್ವಾದದಿಂದ ಜನಿಸಿದವರು. ತಂದೆ ಗುಂಡುಮಾದಯ್ಯ ಜನಪದ ಕಲಾವಿದರು. ತತ್ತ್ವಪದ, ಪುರಾಣ ಪುಣ್ಯಕಥೆಗಳನ್ನು ಕಂಸಾಳೆಯೊಡನೆ ಹಾಡುತ್ತಿದ್ದರು.

ಸಿದ್ಧಶೆಟ್ಟರು ಕೂಲಿ ಮಠದಲ್ಲಿ ಎರಡನೆಯ ತರಗತಿಯವರೆಗೆ ಓದಿದರು. ಮುಂದೆ ಓದಲಾಗಲಿಲ್ಲ. ಆ ವೇಳೆಗೆ ತಂದೆ ತೀರಿಕೊಂಡರು. ತಾಯಿ ಸಿದ್ಧಮ್ಮ ಕೃಷಿ ಕಾರ್ಮಿಕಳಾಗಿ ಮಗನನ್ನು ಸಾಕಿದರು.

ಸಿದ್ಧಶೆಟ್ಟರ ದೊಡ್ಡಪ್ಪ ದೊಡ್ಡಮಾದಯ್ಯ ನೀಲಗಾರರು ಇವರು ಭಜನೆ, ತತ್ತ್ವಪದ, ಪುರಾಣ ಪುಣ್ಯಕಥೆಗಳನ್ನು ತಂಬೂರಿ ಹಿಡಿದು ಹಾಡುತ್ತಿದ್ದರು. ಇವರ ಪ್ರಭಾವ ಸಿದ್ಧಶೆಟ್ಟರ ಮೇಲಾಯಿತು.

ಮುಂದೆ ಉದ್ದೂರಿನ ದೇವರ ಗುಡ್ಡ ಮಾದಪ್ಪಶೆಟ್ಟರನ್ನು ಗುರುವಾಗಿ ಸ್ವೀಕರಿಸಿದ ಸಿದ್ಧಶೆಟ್ಟರು ಅವರಿಂದ ಮಂಟೇಸ್ವಾಮಿ ವಚನ ಮತ್ತು ಮಾದೇಶ್ವರನ ಕಥೆಗಳನ್ನು ಕಲಿತರು. ಸಿದ್ಧಶೆಟ್ಟರ ಕಂಠಸಿರಿ ಮಧುರವಾಗಿತ್ತು. ಸಿದ್ಧಶೆಟ್ಟರು ನೀಲಗಾರ ದೀಕ್ಷೆ ಪಡೆದವರಾದರೂ ಗುರುದೆಸೆಯಿಂದ ಮಾದೇಶ್ವರನ ದೇವರ ಗುಡ್ಡ ಸಂಪ್ರದಾಯವನ್ನೂ ಅನುಸರಿಸಿದರು.

ಸಿದ್ಧಶೆಟ್ಟರು ಗುರು ಮಾದಪ್ಪಶೆಟ್ಟರಿಂದ ಧರೆಗೆ ದೊಡ್ಡವರ ಕಥೆ, ಮಲೆಯ ಮಾದೇಶ್ವರನ ಕಥೆ, ಬಸವಪುರಾಣದ ಕಥೆ, ಚಾಮುಂಡಿ ಕಥೆ, ಚನ್ನಿಗರಾಮನ ಕಥೆ, ಮೈದಾಳರಾಮನ ಕಥೆಗಳನ್ನು ಕಲಿತರು. ಹದಿನಾರು ವರ್ಷದ ಹುಡುಗನಾಗಿರುವಾಗಲೇ ಕಥೆ ಮಾಡುತ್ತಿದ್ದರು.

ಮಧೂನಹಳ್ಳಿ ನಂಜಪ್ಪಶೆಟ್ಟರಿಂದ ರಾಮಾಯಣ, ಮಹಾಭಾರತ, ಎಲ್ಲಮ್ಮನ ಕಥೆ, ಗಾದೆ, ಒಗಟು, ತತ್ವದಪದ, ಜನಪದ ಲೆಕ್ಕಗಳು, ಪುರಾಣ ಕಥೆಗಳು, ಐತಿಹ್ಯಗಳು, ಹನ್ಯದ ಕಥೆಗಳನ್ನು ಸಿದ್ಧಶೆಟ್ಟರು ಕಲಿತರು.

ಸಿದ್ಧಶೆಟ್ಟರು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಥೆ ಮಾಡಿದರು. ಹೆಗ್ಗಡ ದೇವನಕೋಟೆ ತಾಲ್ಲೂಕಿಗೆ ಸೇರಿರುವ ಬೆಟ್ಟದಬೀಡು ಗ್ರಾಮದಲ್ಲಿ ಪಟೇಲ್ ನೀಲೇಗೌಡರ ಅಭಿಮಾನದಿಂದ ಅಲ್ಲಿನ ನಂಜಯ್ಯಶೆಟ್ಟರ ಕಿರಿಮಗಳು ಸುಬ್ಬಮ್ಮನನ್ನು ವಿವಾಹವಾದರು.

ಸಿದ್ಧಶೆಟ್ಟರಿಗೆ ಸಿದ್ಧಶೆಟ್ಟಿ, ಮಾದಶೆಟ್ಟಿ, ಮಾದಮ್ಮ, ಸಿದ್ಧಮ್ಮ ಮತ್ತು ಸುಬ್ಬಮ್ಮ ಎಂಬ ಮಕ್ಕಳಾದರು.


ಒಮ್ಮೆ ಮೂಲತಃ ನೀಲಗಾರರಾದ ಸಿದ್ಧಶೆಟ್ಟರು ತಮ್ಮ ತಂಬೂರಿಯನ್ನು ಶಿಷ್ಯನೊಬ್ಬನಿಗೆ ಕೋರಿಕೆಯ ಮೇರೆಗೆ ದಾನಮಾಡಿದರು. ಅನಂತರ ಅವರು

ಕಂಸಾಳೆಯನ್ನು ಬಳಸಲು ಆರಂಭಿಸಿದರು. 'ಕಥೆ ಮಾಡುವಾಗ ತಂಬೂರಿನಾದಚಂದ; ಹಾಡುಗಳ ನಡುವೆ ವಚನ ಬಂದಾಗ ಕಂಸಾಳೆಯೇ ಸರಿ' ಎಂದು ಅವರು ಹೇಳುತ್ತಿದ್ದರು.

ಸಿದ್ಧಶೆಟ್ಟರು ಜನಪದ ವೈದ್ಯರು ಆಗಿದ್ದರು; ಹಾವುಕಚ್ಚಿದಕ್ಕೆ, ಬೆನ್ನುಫಣಿ, ಅಂಗಾಲು ಫಣಿ, ಸರ್ಪಸುತ್ತು, ಹೆಂಗಸರ ಕಾಯಿಲೆಗಳು, ಮಕ್ಕಳ ಫಲ ಮುಂತಾದವುಗಳಿಗೆ ಔಷಧಿ ನೀಡುತ್ತಿದ್ದರು. ಅವರು ಪಶುವೈದ್ಯ ಚಿಕಿತ್ಸೆಯನ್ನೂ ಮಾಡುತ್ತಿದ್ದರು.

ಸಿದ್ಧಶೆಟ್ಟರನ್ನು ಪವಾಡ ಪುರುಷರು ಎಂದು ನಂಬಿದ್ದೂ ಉಂಟು; ಅವರ ಜೀವನದಲ್ಲಿ ಆ ಬಗೆಯ ಘಟನೆಗಳು ನಡೆದಿದ್ದವು. ಸಿದ್ಧಶೆಟ್ಟರಿಗೆ ಮೂವತ್ತು ವರ್ಷ ವಯಸ್ಸಾಗಿದ್ದಾಗ ಅರಮನೆಯಲ್ಲೂ ಹಾಡಿದ್ದರು. ಆಗ ಅವರಿಗೆ ಮಹಾರಾಜರಿಂದ 25 ಬೆಳ್ಳಿ ರೂಪಾಯಿ, ನೀಲಗಾರರ ಪೇಟ, ಜೋಳಿಗೆ, ಬೆತ್ತ, ಅಕ್ಕಿ, ಬೇಳೆ ಬೆಲ್ಲದ ಸನ್ಮಾನ ಆಗಿತ್ತು. ತಾವು ಸಂಪಾದಿಸಿದ್ದನ್ನು ಎಲ್ಲರಿಗೂ ಹಂಚುವ ಗುಣ ಸಿದ್ಧಶೆಟ್ಟರಿಗೆ ಇತ್ತು. ಅವರು ಬೆಳದಿಂಗಳ ರಾತ್ರಿಗಳಲ್ಲಿ ಎಲ್ಲರನ್ನೂ ಕೂರಿಸಿಕೊಂಡು ಪುರಾಣ ಪುಣ್ಯಕಥೆಗಳನ್ನು ಹೇಳುತ್ತಿದ್ದರು.

ಜಾನಪದ ವಿದ್ವಾಂಸರಾದ ಡಾ.ಪಿ.ಕೆ ರಾಜಶೇಖರ ಅವರು ಸಿದ್ಧಶೆಟ್ಟರಿಗೆ ಆತ್ಮೀಯರು. ಸಿದ್ಧಶೆಟ್ಟರಿಂದ 'ಜನಪದ ಮಹಾಭಾರತ'ವನ್ನು ಡಾ.ಪಿ.ಕೆ.ಆರ್. ಸಂಗ್ರಹಿಸಿದರು. ಇಂಥ ಮಹಾನ್ ಜನಪದ ಗಾಯಕ ಸಿದ್ಧಶೆಟ್ಟರು 1989ರಲ್ಲಿ ನಿಧನರಾದರು. ಡಾ. ಪಿ.ಕೆ.ಆರ್. ಸಿದ್ಧಶೆಟ್ಟರ ಬಹುಕಾಲದ ಒಡನಾಡಿ.



# ಉಡಿಗಾಲದ ಮಹಾದೇವಪ್ಪ

ನಂದಿಧ್ವಜ ಜನಪದ ಕಲಾವಿದರಾದ ಉಡಿಗಾಲದ ಮಹಾದೇವಪ್ಪ ಮೈಸೂರಿನವರು. ತಂದೆ ಲಿಂಗಪ್ಪ. ಗುರು ಶಿವನಂಜಪ್ಪ. ಜನನ 1947 ನವೆಂಬರ್ 20.

ಉಡಿಗಾಲದ ಮಹಾದೇವಪ್ಪ ಅವರು ಶ್ರೀಗೌರಿಶಂಕರ ನಂದಿಧ್ವಜ ಸಂಘ(ರಿ)ವನ್ನು ಕಟ್ಟಿದ್ದಾರೆ. ಈ ಸಂಘಕ್ಕೆ ಅವರೇ ಅಧ್ಯಕ್ಷರು. ಸಿ.ನಟರಾಜು ಉಪಾಧ್ಯಕ್ಷರು. ವಿ.ಶಿವಲಿಂಗ ಕಾರ್ಯದರ್ಶಿಗಳು, ಇವರಲ್ಲದೆ ಶ್ರೀಕಾಂತ, ವೀರೇಂದ್ರಸ್ವಾಮಿ, ವಿ. ನಾಗರಾಜು, ಉಮಾಪತಿ ಮುಂತಾದ ಸದಸ್ಯರಿದ್ದಾರೆ.

ಇವರು ಸತತವಾಗಿ ನಲವತ್ತು ವರ್ಷಗಳಿಂದ ಮೈಸೂರು ದಸರ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾರೆ. ನಂದಿಧ್ವಜ ಕುಣಿತವನ್ನು ಉಳಿಸಿ-ಬೆಳೆಸುವ ಅದಮ್ಯವಾ ಆಕಾಂಕ್ಷೆಯಿಂದ ಕಲಾಸೇವೆಯಲ್ಲಿ ನಿರತರಾಗಿದವರು.

ಎಲ್.ಉಡಿಗಾಲದ ಮಹಾದೇವಪ್ಪ ಅವರ ಸಂಘಕ್ಕೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕನ್ನಡ ಸಾಹಿತ್ಯ ಪರಿಷತ್‌ನ ಗೌರವ ಲಭಿಸಿದೆ.

ಜನಪದ ಕಲೆಗಳಿಗೆ ಸಾಂಸ್ಕೃತಿಕ, ಸಾಮಾಜಿಕ, ದೇಶೀಯ ಹಾಗೂ ಪರಂಪರಾತ್ಮಕ ಆಧ್ಯಾತ್ಮಿಕ ಹಿನ್ನೆಲೆ ಇದೆ. ಇವು ಉಳಿದು-ಬೆಳೆಯಬೇಕು. ಇದಕ್ಕೆ ಜನಪದರು ಹಾಗೂ ಸರ್ಕಾರದ ಸರ್ವರೀತಿಯ ನೆರವು ಅತ್ಯಗತ್ಯವೆಂದು ಉಡಿಗಾಲದ ಮಹಾದೇವಪ್ಪ ಅಭಿಪ್ರಾಯ ಪಟ್ಟಿದ್ದಾರೆ.



# ರತ್ನಮ್ಮ, ರಾಜಮ್ಮ, ಪಾರ್ವತಮ್ಮ, ಲಕ್ಷ್ಮಮ್ಮ

ಮೈಸೂರು ಜಿಲ್ಲೆ ತಿರುಮಕೊಡಲು ನರಸೀಪುರ ತಾಲ್ಲೂಕಿನ ಮಾದಿಗಹಳ್ಳಿಯ ಅರವತ್ತು ವಯಸ್ಸಿನ ಪಾರ್ವತಮ್ಮ ಜನಪದ ಹಾಡುಗಾರ್ತಿ. ಇವರ ತಂಡದಲ್ಲಿ ರತ್ನಮ್ಮ (30 ವ.), ರಾಜಮ್ಮ (35 ವ.) ಮತ್ತು ಲಕ್ಷ್ಮಮ್ಮ (45 ವ.) ಇದ್ದಾರೆ. ಗ್ರಾಮಾಂತರ ಪ್ರದೇಶಗಳ ಸಭೆ-ಸಮಾರಂಭಗಳು, ಹಬ್ಬ-ಹರಿದಿನಗಳಲ್ಲಿ ಇವರು ಗಾಯನ ಕಾರ್ಯಕ್ರಮಗಳನ್ನು ನಡೆಸಿಕೊಡುವರು. ಇವರು ಸೋಬಾನೆ ಪದಗಳು, ಭಕ್ತಿಗೀತೆಗಳು, ಮದುವೆಯ ಹಾಡುಗಳು ಮತ್ತು ಮಲೈ ಮಹದೇಶ್ವರ, ಸಿದ್ಧಪ್ಪಾಜಿ ಸಂಬಂಧಿತ ಹಾಡುಗಳನ್ನು ಹಾಡುವರು

ಕಳೆದ ಮೂವತ್ತು ವರ್ಷಗಳಿಂದಲೂ ಪಾರ್ವತಮ್ಮ ಹಾಡುತ್ತಾ ಬಂದಿದ್ದಾರೆ. ತಂದೆ ಮಾಳಗಯ್ಯ ಮತ್ತು ತಾಯಿ ಕಾಳಮ್ಮ ಅವರ ಮಗಳಾಗಿ ತಂದೆ-ತಾಯಿಯಿಂದಲೇ ಜನಪದ ಹಾಡುಗಳನ್ನು ಕಲಿತಿರುವರು. ದಸರಾವಸ್ತುಪ್ರದರ್ಶನ, ಆಕಾಶವಾಣಿ, ಕಲಾಮಂದಿರ, ಸ್ಥಳೀಯ ದೇವಾಲಯಗಳ ಜಾತ್ರಾ ಮಹೋತ್ಸವಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ.

ಕಾರ್ಯಕ್ರಮಗಳಲ್ಲಿ ಹಾಡಲು ಅವಕಾಶ ನೀಡಿ ತಮ್ಮನ್ನು ಪ್ರೋತ್ಸಾಹಿಸಬೇಕೆಂದು ಪಾರ್ವತಮ್ಮ ಬಯಸುತ್ತಾರೆ. ಸರ್ಕಾರದಿಂದ ತಮ್ಮ ಮಾಸಾಶನ ದೊರೆಯಬೇಕೆಂದು ಹೇಳುವರು. ತಮ್ಮ ಹಾಡುಗಾರಿಕೆಯ ಬಗ್ಗೆ ಇವರಿಗೆ ಅಪಾರ ಪ್ರೀತಿ ಇದೆ.




## ಹುಚ್ಚಮ್ಮ, ಸಿದ್ಧಮ್ಮ, ಮಣಿ, ಮಾದೇವಮ್ಮ

ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕಿನ ಗಾಡಿ ಜೋಗಿ ಹುಂಡಿಯ ಹುಚ್ಚಮ್ಮ ಜನಪದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವರು. ತಂದೆ ಮುತ್ತಯ್ಯ, ಗುರು ಸಿದ್ಧಮ್ಮ.

ಅರವತ್ತೈದು ವರ್ಷದ ಹುಚ್ಚಮ್ಮ ತಮ್ಮ ತಂಡದವರಾದ ಸಿದ್ಧಮ್ಮ (55 ವ.), ಮಣಿ (35 ವ.) ಮತ್ತು ಮಾದೇವಮ್ಮ (40 ವ.)ರವರೊಡನೆ ಅನೇಕ ಗೀತಗಾಯನ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಕಳೆದ ಸು. ಮೂವತ್ತು ವರ್ಷಗಳಿಂದ ಸೋಬಾನೆ ಪದಗಳು, ದೇವರ ಹಾಡುಗಳು, ಸಾವಿನ ಪದಗಳು ಮತ್ತು ಲಾವಣಿಗಳನ್ನು ಹಾಡುಗಳನ್ನು ಹಾಡುತ್ತಾ ಬಂದಿದ್ದಾರೆ.

ಗ್ರಾಮಾಂತರ ಪ್ರದೇಶಗಳ ಜಾತ್ರಾ ಮಹೋತ್ಸವ, ವಿಶ್ವವಿಖ್ಯಾತ ದಸರಾ ವಸ್ತು ಪ್ರದರ್ಶನ, ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಹುಚ್ಚಮ್ಮ ಅವರ ತಂಡ ಭಾಗವಹಿಸಿ ಮೆಚ್ಚುಗೆಯನ್ನು ಗಳಿಸಿದೆ. ಹುಚ್ಚಮ್ಮ ಅವರ ತಂಡಕ್ಕೆ ಸೂಕ್ತ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು ದೊರೆತರೆ ಇವರ ಕಲೆ ಹಾಗೂ ಜೀವನಕ್ಕೆ ಇನ್ನಷ್ಟು ಮಾನ್ಯತೆ ಬರುವುದು. ತಮಗೆ ಸರ್ಕಾರದಿಂದ ದೊರೆಯತಕ್ಕ ಸೌಲಭ್ಯಗಳು ಹಾಗೂ ಮಾಸಾಶನ ದೊರೆಯಬೇಕೆಂದು ಹುಚ್ಚಮ್ಮ ಆಶಿಸುತ್ತಾರೆ. ತಮ್ಮ ಗಾಯನ ಕಲೆಯನ್ನು ಪ್ರೀತಿಸುವ ಹಾಗೂ ಗೌರವಿಸುವ ಹುಚ್ಚಮ್ಮ ಅವರು ನಿರಂತರ ಹಾಡುಗಾರಿಕೆಯಲ್ಲಿ ಜೀವನೋತ್ಸಾಹವನ್ನು ಉಳಿಸಿಕೊಂಡಿದ್ದಾರೆ.



## ಕುಕ್ಕರಹಳ್ಳಿ ಮರಿಸಿದ್ಧಮ್ಮ

ಜನಪದ ಕಲಾವಿದೆ ಮರಿಸಿದ್ಧಮ್ಮ ಮೈಸೂರಿನ ಕುಕ್ಕರಹಳ್ಳಿ ಗ್ರಾಮವಾಸಿ. ಆರು–ಏಳನೇ ವಯಸ್ಸಿನಿಂದಲೇ ಜನಪದ ಹಾಡುಗಳನ್ನು ಹಾಡಲು ಪ್ರಾರಂಭಿಸಿದರು. ಈಗ ಇವರಿಗೆ ಸು. ಅರವತ್ತು ವರ್ಷಕ್ಕೂ ಹೆಚ್ಚು ವಯಸ್ಸಾಗಿದೆ. ತಂದೆ ಕಾಳಯ್ಯ, ತಾಯಿ ಅಂಕಮ್ಮ. ಬಡದಲಿತ ಕುಟುಂಬದಲ್ಲಿ ಜನಿಸಿದ ಮರಿಸಿದ್ಧಮ್ಮ ಆರನೆಯ ವಯಸ್ಸಿನಲ್ಲಿ ಕುಕ್ಕರ ಹಳ್ಳಿಯ ನೀರು ಪೂರೈಕೆ ಇಲಾಖೆಯ ನೌಕರ ಹನುಮಂತಯ್ಯ ಅವರನ್ನು ವಿವಾಹವಾದರು.

ಹಾಡುವವರ ಮುಂದೆ ಕುಳಿತು ಹಾಡುಗಳನ್ನು ಕೇಳಿ ಕಂಠ ಪಾಠ ಮಾಡಿಕೊಂಡು ಮಠಗಳಲ್ಲಿ ಹಾಡುವ ರೂಢಿ ಬಂತು. ಅಕ್ಷರ ಜ್ಞಾನವಿಲ್ಲದ ಮರಿಸಿದ್ಧಮ್ಮ ಸೋದರತ್ತೆ ಹಾಡುತ್ತಿದ್ದ ಸೋಬಾನೆ ಪದಗಳನ್ನು ಮನವಿಟ್ಟು ಕೇಳಿ ಕರಗತ ಮಾಡಿಕೊಂಡರು. ಮುಂದೆ ಚನ್ನಾರೂಢಮಠದಲ್ಲಿ ದೀಕ್ಷೆ ಪಡೆದರು. ಮೈಸೂರಿನ ಸುಮಾರು ಇಪ್ಪತ್ತೈದು ಮಠಗಳಲ್ಲಿ ತತ್ತ್ವಪದಗಳನ್ನು ಹಾಡಲು ಪ್ರಾರಂಭಿಸಿದರು. ಅದ್ಭುತ ನೆನಪಿನ ಶಕ್ತಿ ಇರುವ ಮರಿಸಿದ್ಧಮ್ಮ 800 ರಿಂದ 1000 ದವರೆಗೆ ಹಾಡುಗಳನ್ನೂ ಹಾಡಬಲ್ಲರು. ಹಾಡುಗಾರಿಕೆಯಲ್ಲಿ ಐವತ್ತು ವರ್ಷಗಳ ಅನುಭವವಿದೆ. ಜ್ಞಾನಪ್ರಕಾಶ ಹೊಂಬಾಳಾರ್ಯರು ಮೊದಲ ಗುರು.

ಮರಿಸಿದ್ಧಮ್ಮ ಅವರಿಗೆ ಆರು ಜನ ಗಂಡು ಮಕ್ಕಳು, ಮೂರು ಹೆಣ್ಣುಮಕ್ಕಳು, ಮಕ್ಕಳಿಗೆ ಜನಪದ ಹಾಡುಗಳ ಬಗ್ಗೆ ಒಲವಿಲ್ಲ. ತತ್ತ್ವಪದ, ಸೋಬಾನೆ ಪದ, ಗೇಲಿಪದ, ಜೋಗುಳ ಹಾಡುಗಳನ್ನು ನಿರಂತವಾಗಿ ಹಾಡಬಲ್ಲ ಮರಿಸಿದ್ಧಮ್ಮ ಯಾರಾದರೂ ಮರಣ ಹೊಂದಿದರೆ ರಾತ್ರಿಯಿಂದ ಬೆಳಗಿನವರೆಗೆ ಸಾವಿನ ಪದ ಹಾಡುತ್ತಾರೆ.

ಮರಿಸಿದ್ಧಮ್ಮ ಅವರು ಶಾಲೆ-ಕಾಲೇಜುಗಳಲ್ಲಿ ತಮ್ಮ ಹಾಡುಗಾರಿಕೆಯಿಂದಾಗಿ ಪ್ರಸಿದ್ಧರು. ಯುವ ಪೀಳಿಗೆಯಲ್ಲಿ ಜನಪದ ಒಲವುಗಳನ್ನೂ ಮೂಡಿಸಿ ಸಾಂಸ್ಕೃತಿಕ ಒಳಎಚ್ಚರವನ್ನುಂಟು ಮಾಡುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಜಾನಪದ ಎಂ.ಎ., ವಿದ್ಯಾರ್ಥಿಗಳಿಗೆ ಒಂದು ತಿಂಗಳು ಪಾಠ ಹೇಳಿದ ಅನುಭವ ಇವರಿಗಿದೆ.


ಮರಿಸಿದ್ಧಮ್ಮ ಆಶು ಕವಯತ್ರಿಯೂ ಹೌದು; ಮದುವೆ ಸಮಾರಂಭಗಳಲ್ಲಿ ಸ್ಥಳದಲ್ಲೇ ಗೇಲಿ ಪದಗಳನ್ನು ಕಟ್ಟಿ ಹಾಡುತ್ತಾರೆ. ಸೊಗಸಾಗಿ ಹಾಡುವ ಮತ್ತು ಮಾತನಾಡುವ ಮರಿಸಿದ್ಧಮ್ಮ ಮೈಸೂರಿನ ಜನಪದ ಸಿರಿ ಎನ್ನಲು ಅಡ್ಡಿ ಇಲ್ಲ.

ಇವರಿಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ದಿ.ಡಾ.ಎಚ್.ಎಲ್. ನಾಗೇಗೌಡ ಪ್ರಶಸ್ತಿ ಮತ್ತು ಜಾನಪದರತ್ನ ಪ್ರಶಸ್ತಿಗಳು ಬಂದಿದೆ.



## ಪಾರ್ವತಮ್ಮ, ಮಂಚಮ್ಮ, ಗವಿಸಿದ್ಧಮ್ಮ, ಮರಿನಿಂಗಮ್ಮ

ಜನಪದ ಕಲಾವಿದೆ ಗವಿಸಿದ್ಧಮ್ಮ ಮೈಸೂರಿನ ಕುಕ್ಕರ ಹಳ್ಳಿಯಲ್ಲಿ ಜನಿಸಿದರು. ತಂದೆ ಮರಿಜೋಗಯ್ಯ, ತಾಯಿ ದುಂಡಮ್ಮ ಅರವತ್ತೈದು ವರ್ಷದ ಗವಿಸಿದ್ಧಮ್ಮ ಬಾಲ್ಯದಿಂದಲೂ ಹಾಡುಗಾರಿಕೆಯನ್ನು ರೂಢಿಸಿಕೊಂಡವರು. ಅಜ್ಜಿ ದೊಡ್ಡಮಂಚಮ್ಮನೇ ಮೊದಲ ಗುರು. ಹಿರಿಯ ವೃದ್ಧ ಮಾತೆಯರ ಸನ್ನಿಧಾನದಲ್ಲಿ ಇವರ ಹಾಡುಗಾರಿಕೆ ಬೆಳೆಯಿತು. ಮಠದಗುರು ಹೊಂಬಾಳ ರೂಢರು ತತ್ತ್ವಪದಗಳನ್ನು ಕಲಿಸಿದರು. ಆದಿಕರ್ನಾಟಕ ಜಾತಿಗೆ ಸೇರಿದ ಗವಿಸಿದ್ಧಮ್ಮ ಆಕಾಶವಾಣಿ ಹಾಗೂ ವಿವಿಧ ಕಾರ್ಯಕ್ರಮಗಳಲ್ಲಿ ಹಾಡುತ್ತಾ ಬಂದಿದ್ದಾರೆ. ಅಕ್ಷರ ಜ್ಞಾನವಿರುವ ಇವರು ತತ್ತ್ವಪದ, ಸೋಬಾನೆ ಪದ, ಜನಪದಗೀತೆಗಳು ಮತ್ತು ಸಾವಿನ ಪದಗಳನ್ನು ಸುಶ್ರಾವ್ಯವಾಗಿ ಸಹೃದಯರ ಮನಮುಟ್ಟುವಂತೆ ಹಾಡುತ್ತಾರೆ. ಸರ್ಕಾರದಿಂದ ಮಾಸಾಶನ ಬರುತ್ತದೆ. ನಾಲ್ಕು ಗಂಡುಮಕ್ಕಳು ಇಬ್ಬರು ಹೆಣ್ಣುಮಕ್ಕಳ ಕುಟುಂಬ. ಗವಿಸಿದ್ಧಮ್ಮ ಅವರು ಪಾರ್ವತಮ್ಮ (50 ವ.), ಮಂಚಮ್ಮ (48 ವ.) ಮತ್ತು ಮರಿನಿಂಗಮ್ಮ (53 ವ.) ಅವರೊಡನೆ ಕಾರ್ಯಕ್ರಮಗಳಲ್ಲಿ ಹಾಡುತ್ತಾರೆ. ಇವರಿಗೆ ಇದುವರೆಗೆ ಯಾವುದೇ ಪ್ರಶಸ್ತಿಗಳು ಬಂದಿಲ್ಲ.



ಕಂಸಾಳೆ ಮಹಾದೇವಯ್ಯ (1920–96)


# ಕಂಸಾಳೆ ಮಹಾದೇವಯ್ಯ (1920–96)

ಕಂಸಾಳೆ ಮಹಾದೇವಯ್ಯ ಪ್ರಸಿದ್ಧ ಕಂಸಾಳೆ ಕಲಾವಿದರು. ಇವರ ಮೂಲ ಹೆಸರು ಬಡಗಲ ಹುಂಡಿ ಮಹಾದೇವಯ್ಯ. ಇವರು ಮೈಸೂರು ತಾಲ್ಲೂಕಿನ ವರಕೋಡು ಹೋಬಳಿಯ ಬಡಗಲ ಹುಂಡಿ ಗ್ರಾಮದವರು. ಸು. 1920ರಲ್ಲಿ ಜನನ. ತಂದೆ ಕಂಸಾಳೆ ಕಲಾವಿದರಾದ ನಂಜಯ್ಯ ಕುರುಬಜನಾಂಗಕ್ಕೆ ಸೇರಿದವರು. ಬಾಲ್ಯದಲ್ಲಿ ನೀಲಗಾರ ಜೋಗಿಯ ಹಿಂದೆ ದೇಶಾಂತರ ಹೋದ ಮಹಾದೇವಯ್ಯ ನುರಿತ ಕಂಸಾಳೆ ಕಲಾವಿದರಾಗಿ ಹತ್ತು ವರ್ಷಗಳ ನಂತರ ಮನೆಗೆ ಮರಳಿದರು. ಮೈಸೂರಿನಲ್ಲಿ ತಮ್ಮದೇ ಆದ ಕಂಸಾಳೆ ತಂಡ ಕಟ್ಟಿ ಕಲೆಯನ್ನು ಬೆಳೆಸಿದರು. ಮುಂದೆ ಪುಟ್ಟಮಾದಮ್ಮ ಅವರನ್ನು ವಿವಾಹವಾದರು. ಹಾಡುಗಾರಿಕೆ ಮತ್ತು ಬೀಸುಕಂಸಾಳೆ ನೃತ್ಯದಲ್ಲಿ ನುರಿತರಾಗಿದ್ದರು. ಕೆಲವು ಕಾಲ ರೈಲ್ವೆ ಇಲಾಖೆಯಲ್ಲಿ

ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಸಂದರ್ಶಕ ಕಲಾವಿದರಾಗಿಯೂ ನೇಮಕಗೊಂಡರು. ಮೈಸೂರು ಆಕಾಶವಾಣಿಯಲ್ಲಿ ಬಿತ್ತರವಾದ ಮೊದಲ ಜನಪದ ಗೀತೆಯನ್ನು ಮಹಾದೇವಯ್ಯ ಹಾಡಿದ್ದರು(1950).


ಕಂಸಾಳೆ ಮಹಾದೇವಯ್ಯ ಅವರು ದೇಶ–ವಿದೇಶಗಳಲ್ಲಿ ಕಲಾಪ್ರದರ್ಶನ ನೀಡಿದರು. ಅಂತರಾಷ್ಟ್ರೀಯ ಜನಪದ ಕಲಾಮೇಳದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. (1974). ಅಲ್ಲದೆ ಇಟಲಿ, ಟರ್ಕಿ, ಸೈಪ್ರಸ್ ಮುಂತಾದ ದೇಶಗಳಲ್ಲಿ ಕಂಸಾಳೆ ಪ್ರದರ್ಶನವನ್ನು ನೀಡಿದರು. ಇವರಿಗೆ ಅನೇಕ ಪ್ರಶಸ್ತಿ–ಗೌರವಗಳು ದೊರೆತಿವೆ. ಕರ್ನಾಟಕ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (1968), ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (1982), ಇಂದಿರಾಗಾಂಧಿ ಫೆಲೋಶಿಫ್ (1988), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1990), ಜಾನಪದ ಶ್ರೀ (1990) ಮುಂತಾದವು.

ಕಂಸಾಳೆ ಮಹಾದೇವಯ್ಯ ಅವರು ಹಾಡಿದ ಮಹದೇಶ್ವರ ಕಾವ್ಯದ ಇಪ್ಪತ್ತೈದು ಧ್ವನಿ ಸುರಳಿಗಳು ಹೊರಬಂದಿವೆ. ಇವರ ಕಂಸಾಳೆ ಪ್ರದರ್ಶನಗಳನ್ನು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಚಲನಚಿತ್ರಗಳಲ್ಲಿ ಬಳಸಿಕೊಳ್ಳುವರು. ಅಪರೂಪದ ಕಲಾವಿದ ಕಂಸಾಳೆ ಮಹಾದೇವಯ್ಯ ಅವರ ಕಂಸಾಳೆ ನೃತ್ಯ ಭಂಗಿ, ಗತ್ತುಗಳು ಪ್ರಸಿದ್ಧವಾದವು. ಸಂಪ್ರದಾಯ ನಿಷ್ಠರಾದ ಇವರು ಸೋಮವಾರ ಹಾಗೂ ಶುಕ್ರವಾರ ಕ್ವಾರಣ್ಯ (ಭಿಕ್ಷೆ)ಕ್ಕಾಗಿ ಮನೆ ಮನೆಗೆ ತೆರಳುತ್ತಿದ್ದರು. ಈ ನಾಡಿನ ಅಪರೂಪದ ಕಲಾವಿದರಲ್ಲಿ ಒಬ್ಬರಾದ ಕಂಸಾಳೆ ಮಹಾದೇವಯ್ಯ 1996 ಏಪ್ರಿಲ್ 21 ರಂದು ಮೈಸೂರಿನಲ್ಲಿ ನಿಧನರಾದರು.



## ಸಿದ್ಧರಾಮಯ್ಯ

ಪೂಜಾಕುಣಿತ ಕಲಾವಿದ ಸಿದ್ಧರಾಮಯ್ಯ 1948 ಮಾರ್ಚಿ 2ರಂದು ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕು ಕಲ್ಲುದೇವನಹಳ್ಳಿಯಲ್ಲಿ ಜನಿಸಿದರು. ತಂದೆ ಸಿದ್ಧಯ್ಯ ಅವರು ಕೂಡ ಪೂಜಾಕುಣಿತ ಕಲಾವಿದರು. ಎಂಟನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಸಿದ್ಧರಾಮಯ್ಯ ಬಾಲ್ಯದಲ್ಲಿ ತಾತ ಮತ್ತು ತಂದೆಯಿಂದ ಪೂಜಾಕುಣಿತವನ್ನು ಕಲಿತರು. ಮುಂದೆ ಭೂಮಾಪನ ಇಲಾಖೆಯಲ್ಲಿ ಜವಾನ ಹುದ್ದೆಗೆ ಸೇರಿದರು. 1980 ರಿಂದ ಇಂದಿನವರೆಗೂ ನಿರಂತರವಾಗಿ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದ್ದಾರೆ. ಪೂಜಾಕುಣಿತವನ್ನು ಆಕರ್ಷಕವಾಗಿ ಕುಣಿಯುತ್ತಾರೆ. ವಂಶ ಪರಂಪರೆಯಲ್ಲಿ ಬಂದ ಈ ಜನಪದ ಕಲೆಯ ಬಗ್ಗೆ ಸಿದ್ಧರಾಮಯ್ಯ ಅವರಿಗೆ ಅಪಾರ ಗೌರವವಿದೆ. ಸ್ಥಳೀಯವಾಗಿ ಮಾತ್ರವಲ್ಲದೆ ರಾಜ್ಯ – ಹೊರರಾಜ್ಯಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಸಂಘ–ಸಂಸ್ಥೆಗಳಿಂದ ಹಾಗೂ ರಾಜ್ಯ ಸರ್ಕಾರದಿಂದ ಪ್ರಶಸ್ತಿ–ಗೌರವಗಳನ್ನು ಪಡೆದಿದ್ದಾರೆ. ಸಿದ್ಧರಾಮಯ್ಯ ಕುರುಬಜನಾಂಗದಿಂದ ಬಂದ ಕಲಾವಿದರಾಗಿದ್ದಾರೆ. ಇವರಿಗೆ ಈಗ ಜನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ (2007) ಬಂದಿದೆ.



# ಮರೀಗೌಡ

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿಗೆ ಸೇರಿದ ರಾಯನ ಹುಂಡಿಯ ಮರೀಗೌಡ ಕಂಸಾಳೆ ಕಲಾವಿದರು. ತಂದೆ ದೇವರಗುಡ್ಡಯ್ಯ. ಗುರು ಮೈಸೂರಿನ ಬೀಸುಕಂಸಾಳೆ ಕಲಾವಿದರಾದ ಕಂಸಾಳೆ ಮಹಾದೇವಯ್ಯ.

ಎಂಬತ್ತೈದು ವರ್ಷ ವಯಸ್ಸಿನ ಮರೀಗೌಡರು ನುರಿತ ಕಂಸಾಳೆ ಕಲಾವಿದರು. ಇವರು ಕಂಸಾಳೆ ಮೇಳ ಗಾಯಕರು ಹಾಗೂ ಬೀಸುಕಂಸಾಳೆ ನೃತ್ಯ ಕಲಾವಿದರೂ ಹೌದು.

ಮರೀಗೌಡರು ಒಳ್ಳೆಯ ಕಥೆಗಾರರು. ಇವರು ಮಲೆಯ ಮಾದೇಶ್ವರನ ಕಥೆ, ಪಿರಿಯಾಪಟ್ಟಣದ ಕಾಳಗ, ಬಿಳಿಗಿರಿರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ಮುಡುಕ್ತೊರೆ ಮಲ್ಲಪ್ಪ, ಬಂಜೆ ಹೊನ್ನಮ್ಮ ಮುಂತಾದ ಧಾರ್ಮಿಕ, ಲೌಕಿಕ ಮತ್ತು ಐತಿಹಾಸಿಕ ಕಾವ್ಯವನ್ನು ಹಾಡುತ್ತಾರೆ. ವಿಶೇಷವಾಗಿ ಮಂಟೇ ಸ್ವಾಮಿ ಕಾವ್ಯ ಮತ್ತು ಸಿದ್ಧಪ್ಪಾಜಿ ಕಾವ್ಯವನ್ನು ಕಂಸಾಳೆಯೊಡನೆ ಹಾಡುವುದುಂಟು. ಇವರು ಅನೇಕ ಕಂಸಾಳೆ ಮೇಳಗಳನ್ನು ನಡೆಸಿದ್ದಾರೆ.

ಇವರ ಶ್ರೀಮಲೈಮಹದೇಶ್ವರ ಕಂಸಾಳೆ ಕಲಾವಿದರ ಸಂಘ(ರಿ)ದಲ್ಲಿ ಹದಿನೈದಕ್ಕೂ ಹೆಚ್ಚು ಯುವ ಹಾಗೂ ಹಿರಿಯ ಕಲಾವಿದರಿದ್ದಾರೆ. ಈ ಸಂಘದ ತಂಡದ ಸದಸ್ಯರ ಹೆಸರುಗಳನ್ನು ಹೀಗಿವೆ: ಮಹದೇವ (60ವ), ಮಹದೇವು(65ವ), ಮಹದೇವ(28ವ), ಮಾದಪ್ಪ(28ವ), ಮಾದಪ್ಪ (25ವ), ಮಾದೇಗೌಡ (75ವ), ಮಹದೇವು (28ವ), ಮಹದೇವು(30ವ), ಮಾದೇವನಾಯ್ಕ (35ವ) ಪುಟ್ಟಸ್ವಾಮಿನಾಯ್ಕ (40ವ), ಮಹದೇವುನಾಯ್ಕ (38ವ) ಶಂಕರ (20ವ), ಮಹದೇವು(38ವ), ಶಿವಸ್ವಾಮಿ (45ವ), ಮೊಳ್ಳ ಮಹದೇವ ನಾಯ್ಕ (48ವ) ಮರೀಗೌಡರ ಶ್ರೀಮಲೈಮಹದೇಶ್ವರ ಕಂಸಾಳೆ ಕಲಾವಿದರು ಹಲವು ಪ್ರದರ್ಶನಗಳನ್ನು ನೀಡಿ ಪ್ರಶಸ್ತಿ-ಗೌರವಗಳನ್ನು ಸ್ವೀಕರಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ: ಯುವಜನಸೇವಾ ಮತ್ತು ಕ್ರೀಡಾ ಇಲಾಖೆ ಗೌರವಪತ್ರ ನೀಡಿದೆ (21-01-1990), ಮಲೈಮಹದೇಶ್ವರ ದೇವಸ್ಥಾನ ಸಮಿತಿ, ಮಹದೇಶ್ವರನ ಬೆಟ್ಟ (1990), ದಸರಾ ಮಹೋತ್ಸವ (1980, 93, 97, 96, 98, 99, 2003, 2004, 2005, 2006)ದಲ್ಲಿ ಕಂಸಾಳೆ ಪ್ರದರ್ಶನ ನೀಡಿ ಗೌರವ ಪಡೆದಿದ್ದಾರೆ. ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ (2004), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (2004 ಮತ್ತು 2006),ಪಂಚಲಿಂಗದರ್ಶನ ಮಹೋತ್ಸವ, ತಲಕಾಡು (2006), ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ದೊಡ್ಡಕೆರೆ ಮೈದಾನ (2003), ಆಕಾಶವಾಣಿ (2001), ಗಿರಿಜಾಕಲ್ಯಾಣ ಮಹೋತ್ಸವ, ನಂಜನಗೂಡು (2004), ಕನ್ನಡ ಸಂಸ್ಕೃತಿ ಇಲಾಖೆ (2006), ಸುವರ್ಣ ಸ್ವಾತಂತ್ರ್ಯ ಸಮಿತಿ, ನಂಜನಗೂಡು (1970), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (2006) ಮುಂತಾದ ಕಡೆ ಪ್ರದರ್ಶನಗಳನ್ನು ನೀಡಿದ್ದಾರೆ.

ಕಂಸಾಳೆ ಕಲಾವಿದರಾದ ಮರೀಗೌಡರಿಗೆ ತಮ್ಮ ಕಲೆಯ ಬಗ್ಗೆ ಅಪಾರವಾದ ಗೌರವವಿದೆ. ಕಂಸಾಳೆ ಕಲೆಯನ್ನು ಉಳಿಸಿ-ಬೆಳೆಸಬೇಕೆಂದು ಆಶಿಸುತ್ತಾರೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ನೂತನ ಸಾಂಸ್ಕೃತಿಕ ಯೋಜನೆಯೊಂದನ್ನು ಸಿದ್ಧಪಡಿಸುವುದು ಅಗತ್ಯವೆಂದು ಮರೀಗೌಡರು ಬಯಸುತ್ತಾರೆ. ಹಾಗೆಯೇ ಶಾಲಾ-ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಜನಪದ ಕಲೆಗಳನ್ನು ಪ್ರಾಯೋಗಿಕವಾಗಿ ಕಲಿಸುವ ವ್ಯವಸ್ಥೆ ಬಂದರೆ ಕಲೆ-ಕಲಾವಿದ ಉಳಿಯುವುದು ಸಾಧ್ಯವೆಂದು ಇವರು ಹೇಳುವರು.



# ಸಿದ್ಧಮ್ಮ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ತಾಲ್ಲೂಕಿನ ಮಾದಿಗಹಳ್ಳಿ ಗ್ರಾಮದ ಜನಪದ ಕಲಾವಿದೆ ಸಿದ್ಧಮ್ಮ. ಗಂಡನ ಹೆಸರು ಚಿಕ್ಕಮಾದಯ್ಯ ಗುರು ತಂಬೂರಿ ಜವರಯ್ಯ, ಎಪ್ಪತ್ತೈದು ವರ್ಷ ವಯಸ್ಸಿನ ಸಿದ್ಧಮ್ಮ ಸೋಬಾನೆ ಪದಗಳು, ಜನಪದ ಗೀತೆಗಳು, ಲಾವಣಿಗಳು, ದೇವರ ಪದಗಳು, ಸಾವಿನ ಪದಗಳು ಮುಂತಾದವುಗಳನ್ನು ಹಾಡುವರು.

ಸಿದ್ಧಮ್ಮ ಅವರ ತಂಡದಲ್ಲಿ ಗೌರಮ್ಮ (50 ವ.), ಮಂಗಳಮ್ಮ (48 ವ.), ಮುತ್ತಮ್ಮ (55 ವ.) ಇರುವರು.

ಮೂವತ್ತು ವರ್ಷಗಳಿಂದಲೂ ಹಾಡುತ್ತಾ ಬಂದಿರುವ ಸಿದ್ಧಮ್ಮ ಈ ಪ್ರದೇಶದ ಪ್ರಾತಿನಿಧಿಕ ಜನಪದ ಕಲಾವಿದೆ. ಮೈಸೂರು ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಕಾರ್ಯಕ್ರಮವನ್ನು ನೀಡಿದ್ದಾರೆ. ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ (1997, 1999, 2004) ಹಾಡಿರುವರು. ಇವರು ಆಕಾಶವಾಣಿ ಕಲಾವಿದೆ ಕೂಡ ಹೌದು.

ಕಲಾವಿದೆ ಸಿದ್ಧಮ್ಮ ಗ್ರಾಮಾಂತರ ಪ್ರದೇಶದಲ್ಲಿ ಪ್ರಸಿದ್ಧರು.




## ಮಾದಶೆಟ್ಟಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹಳೆಪುರ ಹಳ್ಳಿಯ ಜನಪದ ಕಲಾವಿದ ಮಾದಶೆಟ್ಟಿ. ತಂದೆ ದಿ॥ ಕ್ಯಾತಶೆಟ್ಟಿ. ಗುರು ದಿ॥ಕುಳ್ಳುಶೆಟ್ಟಿ. ಜನನ 1937 ಆಗಸ್ಟ್ 12 ಇವರು ಉಪ್ಪಾರ ಜನಾಂಗದವರು.

ಎಪ್ಪತಮೂರ್ರು ವಯಸ್ಸಿನ ಮಾದಶೆಟ್ಟಿ ಕಂಸಾಳೆ ನೀಲಗಾರ ಕಲಾವಿದರು. ಇವರು ಬೀಸುಕಂಸಾಳೆ, ನೀಲಗಾರರ ಮೇಳೆ ಮತ್ತು ಮರಗಾಲು ಬೀಸುಕಂಸಾಳೆ ಕುಣಿತದಲ್ಲಿ ನುರಿತವರು.

ಮಾದಶೆಟ್ಟರು ತಮ್ಮ ತಂಡದೊಡನೆ ನೂರಾರು ಪ್ರದರ್ಶನಗಳನ್ನು ನೀಡಿದ್ದಾರೆ. ಇವರ ತಂಡದಲ್ಲಿ ಮಾದಶೆಟ್ಟಿ, ಗುರುಸಿದ್ಧಶೆಟ್ಟಿ, ನಾಗರಾಜ, ಸ್ವಾಮಿ, ದೊಡ್ಡ ಮಾದಶೆಟ್ಟಿ, ಮತ್ತು ಮಹೇಶ ಎಂಬುವವರು ಇದ್ದಾರೆ. ಕರ್ನಾಟಕಾದ್ಯಂತ ಪ್ರದರ್ಶನಗಳನ್ನು ನೀಡಿದ್ದಾರೆ. ವಿಶೇಷವಾಗಿ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾಮಹೋತ್ಸವ (2005, 06 ಮತ್ತು 07), ವಿಶ್ವವಿಖ್ಯಾತ ಮೈಸೂರು ದಸರಾ ಮೆರವಣಿಗೆ (2004) ವಸ್ತುಪ್ರದರ್ಶನ (2006)ಗಳಲ್ಲಿ ಪ್ರದರ್ಶನಗಳನ್ನು ನೀಡಿದ್ದಾರೆ. ಇವರ ತಂಡ ನಿರಂತರವಾಗಿ ಆಕಾಶವಾಣಿ ಕಲಾವಿದರಾಗಿ ಅನೇಕ ಕಾರ್ಯಕ್ರಮಗಳನ್ನು ನೀಡಿದೆ.

'ಜನಪದ ಕಲೆಗಳು ಉಳಿಯಬೇಕಾದರೆ ಕಲಾವಿದರಿಗೆ ತಮ್ಮ ಕಲೆಯ ಪ್ರದರ್ಶನ ನೀಡಲು ಅವಕಾಶವಾಗಬೇಕು. ನಾವು ಎಲ್ಲಾ ಜಾತಿಯ ಯುವಕರಿಗೆ ಬೀಸಕಂಸಾಳೆ, ಮರಗಾಲು ಕುಣಿತ ಕಲಿಸುತ್ತಿದ್ದೇವೆ. ಕಲೆಯ ಉಳಿವು ಜನತೆ ಮತ್ತು ಸರ್ಕಾರದ ನೆರವಿನಲ್ಲಿದೆ' ಎಂದು ಮುಕ್ತವಾಗಿ ಮಾದಶೆಟ್ಟಿ ನುಡಿಯುವರು.



## ರಾಜು ಜೆ.ಡಿ.

ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಪ್ರಭಾನಗರ ಗಿರಿಜನ ಹಾಡಿಯ ಕೋತಿಕುಣಿತದ ಜನಪದ ಕಲಾವಿದ ರಾಜು ಜೆ.ಡಿ. (28 ವ.) ದಾಸ. ಪರಂಪರೆಯಿಂದ ಬಂದ ಕೋತಿ ಕುಣಿತವನ್ನು ಆಕರ್ಷಕವಾಗಿ ಪ್ರದರ್ಶಿಸುವ ರಾಜ ಜೆ.ಡಿ. ಗಮನಿಸಬೇಕಾದ ಜನಪದ ಕಲಾವಿದ. ಇವರು ಜೇನು ಕುರುಬರು.

ಕೋತಿಯನ್ನು ಪಳಗಿಸಿ ಅದನ್ನು ಒಡನಾಡಿಯಾಗಿ ಮಾಡಿಕೊಂಡು ಪ್ರದರ್ಶನವನ್ನು ನೀಡುವುದರಲ್ಲಿ ರಾಜು. ಜೆ.ಡಿ. ಯಶಸ್ವಿಯಾಗಿದ್ದಾರೆ. ಆದರೆ ಪ್ರಾಣಿಗಳನ್ನು ಪ್ರದರ್ಶನ ಕಲೆಯಲ್ಲಿ ಬಳಸುವಂತಿಲ್ಲ ಎಂಬ ಕಾನೂನಿನಿಂದಾಗಿ ತಮ್ಮದೇ ಆದ ಯುವ ತಂಡವನ್ನು ಕಟ್ಟಿಕೊಂಡು ಕೋತಿ ಕುಣಿತವನ್ನು ಪ್ರದರ್ಶಿಸುತ್ತಾರೆ. ಇವರ ತಂಡದಲ್ಲಿ ನಾಗ (20 ವ.), ದಾಸ (22 ವ.), ಸ್ವಾಮಿ (26 ವ.), ಸುರೇಶ(30 ವ.), ಪ್ರಶಾನ (32 ವ.), ದಿಲೀಪ (28 ವ.), ಶಿವು (31 ವ.), ಸ್ವಾಮಿ ಆರ್ (33 ವ.), ರಘು (28 ವ.), ಮಧು (24 ವ.) ಮುಂತಾದವರಿದ್ದಾರೆ. ಅಣ್ಣೂರು ಚಕ್ಕರೆ ಹಾಡಿಯ ಯುವಕರೂ ಕೂಡ ಆಕರ್ಷಕವಾಗಿ ಕೋತಿ ಕುಣಿತವನ್ನು ಪ್ರದರ್ಶಿಸುತ್ತಾರೆ.

ರಾಜು ಜೆ.ಡಿ. ಅವರಿಗೆ ಕೋತಿ ಕುಣಿತವನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಆಶಯವಿದೆ. ಸೂಕ್ತ ಪ್ರೋತ್ಸಾಹ ದೊರೆತರೆ ಈ ಜನಪದ ಕಲೆ ಉಳಿಯುವುದು.




## ಲಿಂಗರಾಜು ಜೆ.ಆರ್.

ಮೈಸೂರು ಜಿಲ್ಲೆ ಹೆಚ್.ಡಿ. ಕೋಟೆ ತಾಲ್ಲೂಕು ಪೆಂಜಿಹಳ್ಳಿ ಕಾಲೋನಿಯ ಜೇನುಕುರುಬರ ಯುವಕ ಲಿಂಗರಾಜು ಜೆ.ಆರ್. ಕೋಲಾಟದ ಕಲಾವಿದರು. ತಂದೆ ರಾಜು, ತಾಯಿ ಅಮ್ಮಣಮ್ಮ ಜನನ 1972 ಆಗಸ್ಟ್ 20.

ಪರಂಪರೆಯಿಂದ ಬಂದ ಕೋಲಾಟವನ್ನು ಲಿಂಗರಾಜು ಜೆ.ಆರ್. ಶ್ರದ್ಧೆಯಿಂದ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ತಮ್ಮದೇ ಆದ ಯುವ ತಂಡನ್ನು ಕಟ್ಟಿದ್ದಾರೆ. ಆ ತಂಡದಲ್ಲಿ ಹದಿನೈದಕ್ಕೂ ಹೆಚ್ಚು ಮಂದಿ ಇದ್ದಾರೆ; ನಾಗಪ್ಪ (25 ವ.), ಶಿವಕುಮಾರ (28 ವ.), ರಾಜು.ಕೆ (32 ವ.), ರಾಜು.ಆರ್ (41 ವ.), ವೆಂಕಟೇಶ್.ಆರ್ (26 ವ.), ಗಣಪ್ಪ (22 ವ.), ದಂಸ (25 ವ.), ದಾಸ (22 ವ.), ಅಪ್ಪು (23 ವ.), ಚಂದ್ರ (24 ವ.), ಮಂಜು .ಡಿ (26 ವ.), ಸುರೇಶ (25 ವ.) ಮುಂತಾದವರಿದ್ದಾರೆ. ಇವರೊಡನೆ ಪ್ರಭಾನಗರ ಹಾಡಿಯ ತರುಣರೂ ಸೇರಿದ್ದಾರೆ.

ಕರ್ನಾಟಕ ಹಾಗೂ ಹೊರರಾಜ್ಯಗಳಲ್ಲಿ ನೂರಾರು ಪ್ರದರ್ಶನಗಳನ್ನು ನೀಡಿರುವ ಲಿಂಗರಾಜು. ಜೆ.ಆರ್. ಅವರ ಕೋಲಾಟದಲ್ಲಿ ಬುಡಕಟ್ಟು ಜನಾಂಗದ ಸ್ಪಂದನಗಳಿವೆ. ಕೋಲುಪದಗಳನ್ನೂ ಹಾಡುತ್ತಾ ಒಂಟಿಕೋಲು, ಜೋಡಿಕೋಲು, ತೊಟ್ಟಿಲುಕೋಲು, ಸುತ್ತುಕೋಲು ಮುಂತಾದ ಕೋಲಾಟಗಳನ್ನು ಪ್ರದರ್ಶಿಸುವರು.

ಲಿಂಗರಾಜು ಜೆ.ಆರ್. ಮತ್ತು ಅವರ ತಂಡದವರಿಗೆ ತಮ್ಮ ಜನಪದ ನೃತ್ಯವಾದ ಕೋಲಾಟವನ್ನು ಉಳಿಸಿ-ಬೆಳೆಸುವ ಆಶಯವಿದೆ. ತಮ್ಮ ಪರಂಪರೆಯಿಂದ ಬಂದ ಕೋಲಾಟವನ್ನು ಗೌರವಿಸುತ್ತಾರೆ.




# ಸೋಮಯ್ಯ

ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಪ್ರಭಾನಗರ ಗಿರಿಜನ ಹಾಡಿಯ ಸೋಮಯ್ಯ (35 ವ.) ಹುಲಿಕುಣಿತದ- ಕಲಾವಿದ. ತಂದೆ ಲಿಂಗ, ತಾಯಿ ಬಸಮ್ಮ.

ಸೋಮಯ್ಯ ಅವರಿಗೆ ಹುಲಿಕುಣಿತ ವಂಶಪಾರಂಪರ್ಯವಾಗಿ ಬಂದ ಜನಪದ ಕಲೆ. ಬಾಲ್ಯದಿಂದಲೇ ಹುಲಿವೇಷ ಕಟ್ಟಿ ಕುಣಿಯುತ್ತಾ ಬಂದಿದ್ದಾರೆ. ತಮ್ಮ ಹುಲಿವೇಷ ವಾತ್ಸಾಯನನ ಕಾಲದಿಂದಲೂ ಬಂದ ಜನಪದ ಕಲೆಯೆಂದು ಹೇಳುತ್ತಾರೆ. ಇವರು ಜೇನುಕುರುಬರು.

ಜಾನಪದ ಯುವಕಲಾವಿದರ ಸಂಘವನ್ನು ಕಟ್ಟಿ ಒಡನಾಡಿಗಳೊಡನೆ ಕರ್ನಾಟಕಾದ್ಯಂತ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಇವರ ತಂಡದಲ್ಲಿ ನಟೇಶ(26 ವ.), ಬೀಳಯ್ಯ (28 ವ.), ತಿಮ್ಮಯ್ಯ (27 ವ.), ಗುರು(18 ವ.), ಚಂದ್ರ (20 ವ.), ಸಣ್ಣಪ್ಪ (18 ವ.), ಚಂದ್ರ(26 ವ.), ಅಪ್ಪು(26 ವ.), ಶೇಖರ(28 ವ.), ರುದ್ರ (18 ವ.), ಪ್ರಭ(19 ವ.) ಇವರಲ್ಲದೆ ಪೆಂಜಹಳ್ಳಿ ಕಾಲೋನಿ ಯುವಕರೂ ಇದ್ದಾರೆ.

ಹುಲಿಕುಣಿತ ಧಾರ್ಮಿಕ ಆಚರಣೆಯಾದರೂ ಇದನ್ನು ಒಂದು ಕಲೆಯಾಗಿ ಪ್ರದರ್ಶಿಸುವ ಸೋಮಯ್ಯ ಅವರ ಪ್ರತಿಭೆ ಅನನ್ಯವಾದದ್ದು. ಇವರ ಹೆಜ್ಜೆಯ ಗತ್ತುಗಳಲ್ಲಿ ದೇಶೀತನವಿದೆ.




## ಪಿ.ಮಾದಪ್ಪ

ಮೈಸೂರು ಜಿಲ್ಲೆ ವರಕೊಡು ತಾಲ್ಲೂಕಿನ ವರುಣಾಹೋಬಳಿಗೆ ಸೇರಿದ ಬಡಗಲಹುಂಡಿ ಗ್ರಾಮದವರು ಕಂಸಾಳೆ ಮೇಳದ ಮಾದಪ್ಪ.ಪಿ (65 ವ.) ತಂದೆ: ಪುಟ್ಟಮಾದಪ್ಪ, ತಾಯಿ: ಪುಟ್ಟಮಾದಮ್ಮ, ಗುರು: ಮೈಸೂರಿನ ಕಂಸಾಳೆ ಮಹಾದೇವಯ್ಯ. ಪಿ.ಮಾದಪ್ಪ ಕುರುಬ ಜನಾಂಗಕ್ಕೆ ಸೇರಿದವರು.

ಬಾಲ್ಯದಿಂದಲೂ ಮಾದಪ್ಪ ಪಿ. ಕಂಸಾಳೆ ಕಲಾಪ್ರಕಾರಕ್ಕೆ ಮನಸೋತು ಆ ಕಲಾಪ್ರಕಾರದೊಡನೆ ಬೆಳೆದವರು. ಬಾಲ್ಯದಲ್ಲಿಯೇ ಗುರು ಕಂಸಾಳೆ ಮಹದೇವಯ್ಯ ಅವರಿಂದ ಬೀಸುಕಂಸಾಳೆಯನ್ನು ಹಾಗೂ ಕಂಸಾಳೆ ಮೇಳವನ್ನೂ ಕಲಿತವರು. ಕಂಸಾಳೆ, ಏಕತಾರಿ ಮತ್ತು ದಮ್ಮಡಿಗಳ ಹಿನ್ನೆಲೆಯಲ್ಲಿ ಮಾದಪ್ಪ ಪಿ. ಸೊಗಸಾಗಿ ಮೇಳವನ್ನು ನಡೆಸಿಕೊಡುವರು.

ಮಾದಪ್ಪ ಪಿ. ಅವರು ಮಲೆಯ ಮಾದೇಶ್ವರ, ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಚೆನ್ನಿಗರಾಮ ಘನಪತಿರಾಯ, ಬಿಳಿಗಿರಿರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ರಾಜಾವಿಕ್ರಮ, ಮುಡುಕ್ತೊರೆ ಮಲ್ಲಪ್ಪ, ಬಸವಪುರಾಣ ಮುಂತಾದ ಲೌಕಿಕ, ಧಾರ್ಮಿಕ, ಐತಿಹಾಸಿಕ ಕಾವ್ಯಗಳನ್ನು ಹಾಡುತ್ತಾರೆ. ಮಂಟೇಸ್ವಾಮಿ ಕಾವ್ಯ ಮತ್ತು ಸಿದ್ಧಪ್ಪಾಜಿ ಕತೆಯನ್ನು ಹಾಡುವರು.

ಕಂಸಾಳೆ ಮೇಳದಲ್ಲಿ ಮಾದಪ್ಪ ಪಿ. ಅವರಿಗೆ ನಲವತ್ತು ವರ್ಷಗಳ ಅನುಭವವಿದೆ. ಮಾಸಾಶನ ಬರುತ್ತದೆ. ಕರ್ನಾಟಕಾದ್ಯಂತ ನೂರಾರು ಕಾರ್ಯಕ್ರಮಗಳನ್ನು ನೀಡಿರುವರು. ಪಿ. ಮಾದಪ್ಪ ಅವರು ಮಲೆ ಮಹದೇಶ್ವರ ಕಲಾ ಸಂಘದ ಅಧ್ಯಕ್ಷರೂ ಹೌದು. ಕಂಸಾಳೆ ಮೇಳ ಶಾಶ್ವತವಾಗಿ ಉಳಿದು-ಬೆಳೆಯಬೇಕೆಂದು ಮಾದಪ್ಪ ಪಿ. ಆಶಿಸುತ್ತಾರೆ.



## ಕಂಸಾಳೆ ಕುಮಾರಸ್ವಾಮಿ


ಕಂಸಾಳೆ ಕುಮಾರಸ್ವಾಮಿ ಮೈಸೂರಿನಲ್ಲಿ 1951 ಮೇ 24ರಂದು ಜನಿಸಿದರು. ತಂದೆ ಕಂಸಾಳೆ ಮಹಾದೇವಯ್ಯ; ಇವರು ಜಾನಪದ ಶ್ರೀ ಪ್ರಶಸ್ತಿ ವಿಜೇತರು. ಏಳನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ ಕಂಸಾಳೆ ಕುಮಾರ ಸ್ವಾಮಿ ಕಂಸಾಳೆ ಕಲೆಯೊಡನೆ ಬೆಳೆದವರು. ನಲವತ್ತು ವರ್ಷಗಳಿಂದ ಕಂಸಾಳೆ ಕಲಾವಿದರಾಗಿ ನೂರಾರು ಪ್ರದರ್ಶನಗಳನ್ನೂ ನೀಡಿದ್ದಾರೆ. ಇವರು ಕುರುಬ ಜನಾಂಗಕ್ಕೆ ಸೇರಿದವರು. ದೇಶ ವಿದೇಶಗಳಲ್ಲಿ ಕಂಸಾಳೆ ಪ್ರದರ್ಶನವನ್ನು ನೀಡಿರುವ ಕಲಾವಿದ ಕಂಸಾಳೆ ಕುಮಾರಸ್ವಾಮಿ ಸ್ವತಃ ನೂರಾರು ಜನರಿಗೆ ಕಂಸಾಳೆ ಕಲೆಯನ್ನು ಕಲಿಸಿದ್ದಾರೆ. ವಿದ್ಯಾರ್ಥಿಗಳಿಗೆ, ಆಸಕ್ತ ಯುವಕರಿಗೆ, ಕಾರಾಗೃಹದ ಖೈದಿಗಳಿಗೆ ಕಂಸಾಳೆಯನ್ನು ಕಲಿಸಿದ್ದಾರೆ.

ಬೀಸುಕಂಸಾಳೆ ಮತ್ತು ಹಾಡುಗಾರಿಕೆಯಲ್ಲಿ ಪ್ರಸಿದ್ಧರಾಗಿರುವ ಕಂಸಾಳೆ ಕುಮಾರಸ್ವಾಮಿ ಭಾರತದಲ್ಲಿ ದೆಹಲಿ, ಕೋಲ್ಕತ್ತ, ಮುಂಬೈ, ಭೂಪಾಲ್, ಚೈನ್ನೈ, ರಾಯಪುರ, ಕೇರಳ, ಆಂಧ್ರಪ್ರದೇಶ, ಒರಿಸ್ಸಾಗಳಲ್ಲಿ ಕಂಸಾಳೆ ಪ್ರದರ್ಶನಗಳನ್ನು ನೀಡಿದ್ದಾರೆ. ದೆಹಲಿ ಮತ್ತು ಮುಂಬೈಗಳಲ್ಲಿ ನಡೆದ ಭಾರತ ಉತ್ಸವದಲ್ಲಿ ಕಂಸಾಳೆ ಪ್ರದರ್ಶನವನ್ನು ನೀಡಿದ್ದಾರೆ (1986 ಮತ್ತು 1989).

ರಂಗಭೂಮಿಗೆ ಕಂಸಾಳೆಯ ಹಿನ್ನೆಲೆ ಸಂಗೀತವು ಕಂಸಾಳೆ ಕುಮಾರಸ್ವಾಮಿ ನೀಡಿದ್ದಾರೆ. ಸಮುದಾಯ ತಂಡ ಮೈಸೂರಿನಲ್ಲಿ ಪ್ರದರ್ಶಿಸಿದ ಹೈದರ್ ಮತ್ತು ಜನಮನ ಪ್ರದರ್ಶಿಸಿದ ಕುಸುಮ ಬಾಲೆ ನಾಟಕಗಳಿಗೆ ಕಂಸಾಳೆ ನೃತ್ಯ-ಸಂಗೀತಗಳ. ಹಿನ್ನೆಲೆಯನ್ನು ಒದಗಿಸಿ ಪ್ರಯೋಗಗಳನ್ನು ಸಾರ್ಥಕಗೊಳಿಸಿದ್ದಾರೆ. ವಂಶವೃಕ್ಷ, ಜನುಮದ ಜೋಡಿ, ಜಂಗಲ್ ಬಾಯ್ಸ್ (ಇಂಗ್ಲೀಷ್ ಚಲನಚಿತ್ರ) ಚಲನಚಿತ್ರಗಳಿಗೂ ಕಂಸಾಳೆ ಸಂಗೀತ-ನೃತ್ಯವನ್ನು ಒದಗಿಸಿದ್ದಾರೆ. ವಿಶ್ವಪ್ರಸಿದ್ಧ ದಸರಾ ಮೆರವಣಿಗೆಯಲ್ಲಿ ಬೀಸುಕಂಸಾಳೆ ಕಲಾಪ್ರದರ್ಶನಕ್ಕೆ ಮೊದಲ ಬಹುಮಾನ ಪಡೆದಿದ್ದಾರೆ. (1989). ಇವರಿಗೆ ಕಂಸಾಳೆ ಕಂಠೀರವ, ಕಂಸಾಳೆ ಕಲಾಶ್ರೀ ಎಂಬ ಗೌರವಗಳಿವೆ. ದೂರದರ್ಶನ, ಆಕಾಶವಾಣಿ, ಕಿರುಚಿತ್ರಗಳು, ಇಂಟರ್‌ನೆಟ್ ಮುಂತಾದೆಡೆ ಕಂಸಾಳೆ ಸಂಗೀತ-ನೃತ್ಯ ಸಹಕಾರ ನೀಡಿದ್ದಾರೆ. ಮೈಸೂರಿನಲ್ಲಿ ಜನಪದಕಲಾ ಕೇಂದ್ರವನ್ನು ಸ್ಥಾಪಿಸಿ ಕಂಸಾಳೆ ಕಲೆಯನ್ನು ಬೆಳೆಸುತ್ತಿದ್ದಾರೆ. ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಟೆಂಡರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರು.

ಕಂಸಾಳೆ ಕುಮಾರಸ್ವಾಮಿ ಅವರ ಜಾನಪದ ಕಲಾ ಕೇಂದ್ರದ ತಂಡದ ಸದಸ್ಯರು:

ಮರಿಸ್ವಾಮಿ (60ವರ್ಷ), ಕೆ. ರವಿಚಂದ್ರ (28ವರ್ಷ), ಮಹದೇವಸ್ವಾಮಿ (28ವರ್ಷ), ಶಿವಕುಮಾರ (38ವರ್ಷ), ಮಹದೇವು (23ವ), ಹರ್ಷ (22ವ), ಚಂದ್ರಶೇಖರ(18ವ), ರಘು (28ವ), ಶಂಕರ (35ವ), ರವಿಕುಮಾರ (40ವ) ಜೆ. ಮಹದೇವು (42ವರ್ಷ), ಮಹದೇವು (40ವರ್ಷ).



## ತಂಬೂರಿ ನಂಜೇಗೌಡ

ಮೈಸೂರಿನ ತಂಬೂರಿ ನಂಜೇಗೌಡ ಜನಪದ ವೃತ್ತಿಗಾಯಕರು, ತಂದೆ ನಿಂಗೇಗೌಡ, ತಾಯಿ ಮಾದಮ್ಮ. ಗುರು ಗಾಂಧಿನಗರದ ಬಸವರಾಜು. ತಂಬೂರಿನಂಜೇಗೌಡರು ಕುರುಬ ಜನಾಂಗದವರು. ಬಾಲ್ಯದಿಂದಲೂ ತಂಬೂರಿಯ ಒಡನಾಡಿ. ಲೌಕಿಕ ವೃತ್ತಿಗಾಯಕರಾಗಿ ಬೆಳೆದವರು. ಇವರದ್ದು ನೀಲಗಾರ ಸಂಪ್ರದಾಯದ ತಂಬೂರಿ ಮೇಳ ತಂಬೂರಿಯೊಡನೆ ಒಟ್ಟುತಾಳ ಹಾಗೂ ಗುಮ್ಮಿಯನ್ನು ಬಳಸುತ್ತಾರೆ. ನಲವತ್ತು ವರ್ಷಗಳಿಂದಲೂ ವೃತ್ತಿಗಾಯಕರಾಗಿ ಸೇವೆ ಸಲ್ಲಿಸುತ್ತಿರುವ ತಂಬೂರಿ ನಂಜೇಗೌಡರ ಒಂದು ಕಲಾ ತಂಡವೂ ಇದೆ. ಇವರ ತಂಡದ ಇತರೆ ಸದಸ್ಯರೆಂದರೆ ಶಿವಣ್ಣ, ಸ್ವಾಮಿ ಮತ್ತು ಮಹದೇವಣ್ಣ.

ತಂಬೂರಿ ನಂಜೇಗೌಡರಿಗೆ 66ಕ್ಕೂ ಹೆಚ್ಚು ವಯಸ್ಸಾಗಿದೆ. ಮಾಸಾಶನ ದೊರೆಯುತ್ತಿಲ್ಲ. ತಮ್ಮ ತಂಡದವರೊಡನೆ ಕರ್ನಾಟಕಾದ್ಯಂತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ತಮ್ಮ ವೃತ್ತಿಗಾಯಕ ಪರಂಪರೆಯನ್ನು ಗೌರವಿಸುತ್ತಾರೆ. ನೀಲಗಾರ ಸಂಪ್ರದಾಯದ ತಂಬೂರಿ ಮೇಳ ಉಳಿದು–ಬೆಳೆಯಬೇಕೆಂದು ಇವರು ಬಯಸುವರು.



## ಚಿಕ್ಕತಾಯಮ್ಮ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ಮಾದಿಗಹಳ್ಳಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದ ಚಿಕ್ಕತಾಯಮ್ಮ ಜನಪದ ಗೀತೆಗಳನ್ನು ಹಾಡುತ್ತಾರೆ. ಗುರು: ಬುಕ್ಕೀರಮ್ಮ. ಅರವತ್ತೆಂಟು ವರ್ಷ ವಯಸ್ಸಿನ ಚಿಕ್ಕತಾಯಮ್ಮ ನಿರಂತರವಾಗಿ ಹಾಡುತ್ತಾ ಬಂದವರು. ಇವರ ತಂಡದಲ್ಲಿ ಮಾದೇವಮ್ಮ, ತಾಯಮ್ಮ, ಪಾರ್ವತಮ್ಮ ಮೊದಲಾದವರಿದ್ದಾರೆ.

ಚಿಕ್ಕತಾಯಮ್ಮ ಬಾಲ್ಯದಿಂದಲೂ ಜನಪದ ಕಲಾವಿದರೊಡನೆ ಬೆಳೆದವರು. ಮೌಖಿಕ ಪರಂಪರೆಯಲ್ಲೇ ಭಜನೆ ಗೀತೆಗಳು, ತತ್ತ್ವಪದಗಳು, ಸಾವಿನಪದಗಳು, ದೇವರ ಹಾಡುಗಳು ಮುಂತಾದವುಗಳನ್ನು ಕಲಿತರು. ಮೈಸೂರು ಜಿಲ್ಲೆ, ಚಾಮರಾಜನಗರ ಜಿಲ್ಲೆಗಳಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಶ್ರೀಸ್ವಾಮಿ ಅಯ್ಯಪ್ಪ ದೇವಸ್ಥಾನ ನಂಜನಗೂಡು (2004), ಮೈಸೂರು ಆಕಾಶವಾಣಿ (2005), ಪಂಚಲಿಂಗ ದರ್ಶನ ಮಹೋತ್ಸವ, ತಲಕಾಡು (2006), ಶ್ರೀಕೈಲಾಸೇಶ್ವರ ಸ್ವಾಮಿ ದೇವಸ್ಥಾನ ಬನ್ನೂರು (2007), ಜೆ.ಎಸ್.ಎಸ್. ಕೃಷಿವಿಜ್ಞಾನ ಕೇಂದ್ರ, ಸುತ್ತೂರು (2002), ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ (2004), ಮೈಸೂರು ವಸ್ತುಪ್ರದರ್ಶನ ಪ್ರಾಧಿಕಾರ (2003) ಸಾರ್ವಜನಿಕ ಶಿಕ್ಷಣ ಇಲಾಖೆ (2003) ಮುಂತಾದ ಕಡೆಗಳಲ್ಲಿ ಕಾರ್ಯಕ್ರಮಗಳನ್ನು ಚಿಕ್ಕತಾಯಮ್ಮ ತಮ್ಮ ತಂಡದೊಡನೆ ನೀಡಿದ್ದಾರೆ. 'ಸರ್ಕಾರದಿಂದ ಸೂಕ್ತ ಅವಕಾಶಗಳು ದೊರೆತರೆ ಕರ್ನಾಟಕಾದ್ಯಂತ ಕಾರ್ಯಕ್ರಮಗಳನ್ನು ನೀಡುವ ಆಶೆ ಇದೆ'- ಎಂದು ಚಿಕ್ಕತಾಯಮ್ಮ ಅಭಿಪ್ರಾಯಪಡುತ್ತಾರೆ. ಜನಪದ ಕಲೆಗಳು ಉಳಿದು ಬೆಳೆಯಬೇಕೆಂದು ಇವರು ಆಶಿಸುವರು.



## ಚಂದ್ರಪ್ಪ ವೈ.ಎಸ್.

ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕು ಯಡಹಳ್ಳಿ ಗ್ರಾಮದ ಚಂದ್ರಪ್ಪ ವೈ.ಎಸ್. ಪೂಜಾಕುಣಿತದ ಕಲಾವಿದರು. ತಂದೆ ಸಿದ್ಧರಾಮಪ್ಪ, ತಾಯಿ ದೇವಜಮ್ಮ. 1970 ಜನವರಿ 15ರಂದು ಜನಿಸಿದ ಚಂದ್ರಪ್ಪ ವೈ.ಎಸ್. ಬಾಲ್ಯದಿಂದಲೂ ಜನಪದ ಕಲಾವಿದರೊಡನೆ ಬೆಳೆದವರು. ತಂದೆ ಸಿದ್ಧರಾಮಪ್ಪ ಕೂಡ ಪೂಜಾಕುಣಿತದ ಕಲಾವಿದರು. ಚಂದ್ರಪ್ಪ ವೈ.ಎಸ್. ಅವರು ತಂದೆಯಿಂದಲೇ ಪೂಜಾಕುಣಿತದ ತರಬೇತಿಯನ್ನು ಪಡೆದರು. ಚಂದ್ರಪ್ಪ. ವೈ.ಎಸ್. ಶ್ರೀಸಿದ್ಧೇಶ್ವರ ಸ್ವಾಮಿ ದೇವಸ್ಥಾನದ ಪೂಜಾರರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಸಿದ್ಧೇಶ್ವರಸ್ವಾಮಿ ಪೂಜಾಕುಣಿತ ಕಲಾ ತಂಡವನ್ನು ಚಂದ್ರಪ್ಪ ವೈ.ಎಸ್. ಕಟ್ಟಿದ್ದಾರೆ. ತಂಡದ ಇತರ ಸದಸ್ಯರೆಂದರೆ, ಸಿದ್ಧರಾಜಪ್ಪ ವೈ.ಎಸ್. ಪ್ರಕಾಶ ವೈ.ಎಸ್. ರವಿ, ಕುಮಾರ, ನಂಜುಂಡಸ್ವಾಮಿ, ಮರಿದೇವರಪ್ಪ, ಸಿದ್ಧಪ್ಪ, ಸುರೇಶ ವೈ.ಎಸ್. ಮೊದಲಾದವರಿದ್ದಾರೆ.

ಪೂಜಾ ಕುಣಿತವನ್ನು ಮಾಡುವಾಗ ಮಡಕೆಯ ಮೇಲೆ ನಡೆಯುವುದು ಮತ್ತು ಕುಣಿಯುವುದು, ಏಣಿಯ ಮೇಲೆ ಏರಿ ಪೂಜೆಯನ್ನು ಕುಣಿಸುವುದು, ಹಲ್ಲಿನಿಂದ ಪೂಜೆಯನ್ನು ಹಿಡಿದು ಕುಣಿಸುವುದು, ಪೂಜೆಯನ್ನು ಹಿಡಿದು ಕಣ್ಣಿನ ರೆಪ್ಪೆಯಿಂದ ನೆಲದ ಮೇಲಿರುವ ಹಣವನ್ನು ಎತ್ತುವುದು ಮುಂತಾದ ಚಮತ್ಕಾರಗಳನ್ನು ತೋರುತ್ತಾರೆ. ಚಂದ್ರಪ್ಪ ವೈ.ಎಸ್. ಅವರು ತಮ್ಮ ತಂಡದೊಡನೆ ಮೈಸೂರು ದಸರಾ ಮೆರವಣಿಗೆ (2004-05), ತಿರುಮಕೂಡಲು ನರಸೀಪುರದ ಮಹಾಕುಂಭಮೇಳ(2007), ಬೆಂಗಳೂರು ಮತ್ತು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ತಮ್ಮ ಪೂಜಾಕುಣಿತವನ್ನು ಮೆರೆದಿದ್ದಾರೆ. ಅನೇಕ ಸಂಘ-ಸಂಸ್ಥೆಗಳು ಚಂದ್ರಪ್ಪ ವೈ.ಎಸ್. ಅವರ ತಂಡವನ್ನು ಸನ್ಮಾನಿಸಿ ಗೌರವಿಸಿದೆ. ಚಂದ್ರಪ್ಪ ವೈ.ಎಸ್. ಮತ್ತು ಅವರ ತಂಡದವರು ಪೂಜಾಕುಣಿತದ ಬಗ್ಗೆ ಅಪಾರವಾದ ಗೌರವವನ್ನೂ ಹೊಂದಿದ್ದಾರೆ. ಈ ಜನಪದ ಧಾರ್ಮಿಕ ನೃತ್ಯವನ್ನು ಉಳಿಸಿ-ಬೆಳೆಸುವ ಆಶಯವನ್ನು ಹೊಂದಿರುವರು.



## ಬಸವಣ್ಣ ಹಲ್ಲರೆ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹಲ್ಲರೆ ಗ್ರಾಮದ ಬಸವಣ್ಣ ಹಲ್ಲರೆ ವೀರಗಾಸೆ ಹಾಗೂ ಸೂತ್ರದ ಗೊಂಬೆ ಕಲಾವಿದರು. ತಾಯಿ ಸೋಮಾಜಮ್ಮ, ತಂದೆ ನಾಗಲಿಂಗಪ್ಪ. ಗುರು ತಂದೆಯವರೇ ಆದ ನಾಗಲಿಂಗಪ್ಪ. ಜನನ 1960 ಸೆಪ್ಟಂಬರ್ 26. ನಲವತ್ತೇಳು ವರ್ಷದ ಬಸವಣ್ಣ ಹಲ್ಲರೆ ಅವರು ಸು. ಇಪ್ಪತ್ತೇಳು ವರ್ಷಗಳಿಂದಲೂ ವೀರಗಾಸೆ ಹಾಗೂ ಸೂತ್ರದ ಗೊಂಬೆ ಕಲಾವಿದರಾಗಿದ್ದಾರೆ. ಶ್ರೀರಾಮೇಶ್ವರ ಕೃಪಾಪೋಷಿತ ಸೂತ್ರದ ಗೊಂಬೆ ಸಂಘದ ಮುಖ್ಯ ಸದಸ್ಯರೂ ಹೌದು.

ಬಸವಣ್ಣ ಹಲ್ಲರೆ ಅವರು ಮೈಸೂರು ತಾಲ್ಲೂಕು, ನಂಜನಗೂಡು ತಾಲ್ಲೂಕು, ಚಾಮರಾಜನಗರ, ಗುಂಡ್ಲುಪೇಟೆ ಮುಂತಾದೆಡೆಗಳಲ್ಲಿ ವೀರಗಾಸೆ ಹಾಗೂ ಸೂತ್ರದ ಗೊಂಬೆ ಕಲಾವಿದರಾಗಿ ಚಿರಪರಿಚಿತರು. ಬಾಲ್ಯದಿಂದಲೂ ಈ ಕಲೆಯನ್ನು ನಂಬಿ ಉಪಜೀವನ ನಡೆಸುತ್ತಿರುವ ಬಸವಣ್ಣ ಹಲ್ಲರೆ ಅವರು ತಮ್ಮ ಜನಪದ ಕಲೆಯನ್ನು ಗೌರವಿಸುತ್ತಾರೆ. ಆಧುನಿಕ ಸಮೂಹ ಮಾಧ್ಯಮಗಳ ನಡುವೆಯೂ ಜನಪದ ಕಲೆಗಳು ಉಳಿದು ಬೆಳೆಯಲು ಸರ್ಕಾರದ ಪ್ರೋತ್ಸಾಹ ಅತ್ಯಗತ್ಯವೆಂದು ಹೇಳುವರು. ಇವರು ಮೈಸೂರು ದಸರ, ಶ್ರೀಶಿವರಾತ್ರೀಶ್ವರ ಜಾತ್ರಾಮಹೋತ್ಸವ, ನಂಜನಗೂಡು ಜಾತ್ರೆ, ಮಹದೇಶ್ವರನ ಶೆಟ್ಟಿ ಮುಂತಾದ ಕಡೆಗಳಲ್ಲಿ ಕಲಾಪ್ರದರ್ಶನಗಳನ್ನು ನೀಡಿ ಮೆಚ್ಚುಗೆ ಗಳಿಸಿರುವರು.




## ನಿಂಗಮ್ಮ, ಲಕ್ಷ್ಮಮ್ಮ, ಮಾದಮ್ಮ, ಜವನಮ್ಮ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ಮಾರಗೌಡನಹಳ್ಳಿಯ ನಿಂಗಮ್ಮ (65 ವ.) ಜನಪದ ತತ್ತ್ವಪದಗಳನ್ನು ಹಾಡುತ್ತಾರೆ. ಬನ್ನೂರಿನ ಕೆಂಪಮ್ಮ (55 ವ.) ಮತ್ತು ಪಾರ್ವತಮ್ಮ (62 ವ.) ಎಂಬ ಹಿರಿಯ ಜನಪದ ಕಲಾವಿದೆಯರಿಂದ ಮೌಖಿಕವಾಗಿ ಕಲಿತ ಪದಗಳನ್ನು ಕಳೆದ ಇಪ್ಪತ್ತು ವರ್ಷಗಳಿಂದ ಸಾರ್ವಜನಿಕವಾಗಿ ಹಾಡುತ್ತಾ ಬಂದಿದ್ದಾರೆ. ಇವರ ತಂಡದಲ್ಲಿ ಲಕ್ಷ್ಮಮ್ಮ (55 ವ.), ಮಾದಮ್ಮ (65 ವ.), ಜವನಮ್ಮ (50 ವ.) ಮೊದಲಾದವರಿದ್ದಾರೆ.

ನಿಂಗಮ್ಮ ಅವರು ಕಿರಿಯ ತಲೆಮಾರಿನವರಿಗೂ ಜನಪದ ಪರಂಪರೆಯ ಕಲಿಕೆಯನ್ನು ನೀಡಿರುವರು. ತಾವು ತಿಳಿದ ತತ್ತ್ವಪದಗಳು, ಭಜನೆ ಪದಗಳು, ಸಾವಿನ ಪದಗಳು, ಮದುವೆಯ ಹಾಡುಗಳು, ಮಾಸ್ತಮ್ಮನಪದ, ಮಾದೇಶ್ವರನ ಹಾಡುಗಳನ್ನು ಕಿರಿಯರಿಗೂ ಕಲಿಸುತ್ತಿದ್ದಾರೆ. ಆದಿಕರ್ನಾಟಕ ಜನಾಂಗದಿಂದ ಬಂದ ನಿಂಗಮ್ಮ ಜಾತಿಬೇಧವಿಲ್ಲದೆ ಎಲ್ಲರಿಗೂ ಪ್ರಿಯರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ(2002), ಮಹದೇಶ್ವರಬೆಟ್ಟ, ನಂಜನಗೂಡು, ಮೈಸೂರು ದಸರೆ ವಸ್ತುಪ್ರದರ್ಶನ ಪ್ರಾಧಿಕಾರ, ಶ್ರೀಆದಿಗುರು ಶಿವರಾತ್ರೀಶ್ವರ ಜಾತ್ರಾಮಹೋತ್ಸವ ಮತ್ತು ಚಾಮರಾಜನಗರ ಜಿಲ್ಲೆ, ಮೈಸೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ತಮ್ಮ ತಂಡದೊಡನೆ ನಿಂಗಮ್ಮ ಕಾರ್ಯಕ್ರಮಗಳನ್ನು ನೀಡಿದ್ದಾರೆ.

'ಜಾನಪದ ಸಾಹಿತ್ಯ ಮತ್ತು ಕಲೆಗಳು ಮುಂದಿನ ತಲೆಮಾರಿಗೂ ಉಳಿಯಬೇಕು. ಇದು ನಮ್ಮ ಸಂಸ್ಕೃತಿ; ನಮ್ಮ ದೇವರು, ಹಬ್ಬಗಳು, ಹಾಡುಗಳು, ಜಾತ್ರೆಗಳು ನಮ್ಮತನದ ಪ್ರತೀಕ'ವೆಂದು ನಿಂಗಮ್ಮ ನಂಬಿರುವರು. ಜನಪದ ಲೋಕವನ್ನು ಗಾಢವಾಗಿ ಪ್ರೀತಿಸುವ, ಗೌರವಿಸುವ ನಿಂಗಮ್ಮ ಹಿರಿಯ ಜನಪದ ಕಲಾವಿದೆ.



## ಮಹದೇವ ಶೆಟ್ಟಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ತರದಲೆ ಗ್ರಾಮದ ಮಹದೇವಶೆಟ್ಟಿ ದೇವರಗುಡ್ಡರ ವಿಶಿಷ್ಟ ನೃತ್ಯವಾದ ಬೀಸುಕಂಸಾಳೆ ಮತ್ತು ಮರಗಾಲು ಬೀಸುಕಂಸಾಳೆ ಕುಣಿತದಲ್ಲಿ ನುರಿತವರು. ತಂದೆ ಗೂಳಿ ಮಾದಶೆಟ್ಟಿ. 35 ವರ್ಷದ ಮಹದೇವಶೆಟ್ಟಿ ಶ್ರೀಮಲೈಮಹದೇಶ್ವರ ಕಲಾ ಸಂಘದ ತಂಡದಲ್ಲಿ ಒಬ್ಬರಾಗಿ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರ ತಂಡದ ಇತರ ಸದಸ್ಯರೆಂದರೆ ಮಹದೇವಶೆಟ್ಟಿ, ಮಾದಪ್ಪ, ಮಹದೇವಶೆಟ್ಟಿ, ಪುಟ್ಟಾಂಕಶೆಟ್ಟಿ, ಸ್ವಾಮಿ, ಮಹೇಂದ್ರ, ಮಾದಪ್ಪ, ಬಾಸ್ಕರ ಮೊದಲಾದವರು.

ಮೈಸೂರು ದಸರಾ ಮೆರವಣಿಗೆ (2004), ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾಮಹೋತ್ಸವ ಸುತ್ತೂರು ಶ್ರೀಕ್ಷೇತ್ರ (2005), ಕಲಾಮಂದಿರ ಮತ್ತು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರದರ್ಶನಗಳನ್ನು ನೀಡಿದ್ದಾರೆ. ಮಹದೇವಶೆಟ್ಟಿ ಅವರಿಗೆ ಬೀಸುಕಂಸಾಳೆ ಮತ್ತು ಮರಗಾಲು ಕುಣಿತವನ್ನು ಉಳಿಸಿ-ಬೆಳೆಸಬೇಕೆಂಬ ಆಶಯವಿದೆ. ವೃತ್ತಿಯಲ್ಲಿ ಕೃಷಿಕರಾದ ಮಹದೇವಶೆಟ್ಟಿ ತಮ್ಮ ಕಲೆಯನ್ನು ದೈವೀಕವೆಂದು ಭಾವಿಸುವರು.



## ಪಿ.ಆರ್. ಮಹದೇವಯ್ಯ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ಬನ್ನೂರು ಹೋಬಳಿಗೆ ಸೇರಿದ ಮಾದಿಗಹಳ್ಳಿಯಲ್ಲಿ ಆದಿ ಕರ್ನಾಟಕ ಜಾತಿಗೆ ಸೇರಿದ ಮಹದೇವಯ್ಯ ಪಿ.ಆರ್. ಡೋಲು ಕಲಾವಿದರು. ತಂದೆ ರಂಗಯ್ಯ.

ಕಡುಬಡತನದ ಕಾರಣ ಮಹದೇವಯ್ಯ ಆವರು ಶಾಲೆಗೆ ಹೋಗಲಾಗಲಿಲ್ಲ. ಇರೋದು ಆರ್. ಮೂಗಣ್ಣ, ಚಿಲ್ಕೋಡಿ ಹನುಮಂತಯ್ಯ, ಜೆನ್ನಪ್ಪನುಂಡಿ, ಮುದ್ದುಮಲ್ಲಪ್ಪ ಮುಂತಾದವರಿಂದ ಡೋಲು ನುಡಿಸುವುದನ್ನು ಕಲಿತರು. ಇದೇ ಜೀವನಕ್ಕೆ ದಾರಿಯಾಯಿತು. ನಿರಂತರವಾಗಿ ಕಳೆದ ಐವತ್ತು ವರ್ಷಗಳಿಂದ ವಿವಿಧ ಸಮಾರಂಭಗಳಲ್ಲಿ ಡೋಲು ನುಡಿಸುತ್ತಾ ಬಂದಿದ್ದಾರೆ. ಇವರ ತಂಡದಲ್ಲಿ ಮಂಚಯ್ಯ, ರಾಮಣ್ಣ, ಬಂಗಾರಯ್ಯ, ತಿಬ್ಬಣ ಮತ್ತು ಶಿವಣ್ಣನವರು ಇದ್ದಾರೆ. ಇವರೆಲ್ಲರೂ 50–55ರ ವಯೋಮಾನದವರು. ಎಲ್ಲರೂ ಬಡಕುಟುಂಬದಿಂದ ಬಂದವರು.

ಮಹದೇವಯ್ಯ ಅವರಿಗೆ ಈಗ ಅರವತ್ತೈದು ವರ್ಷಕ್ಕೂ ಹೆಚ್ಚು ವಯಸ್ಸಾಗಿದೆ. ವೃತ್ತಿ ಜೀವನ ಕಷ್ಟವಾಗಿದೆ. ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಡೋಲು ನುಡಿಸಿದ ಪರಿಣಾಮವಾಗಿ ಕಿವಿಗಳೆರಡೂ ಕಿವುಡಾಗಿವೆ. ಇವರಿಗೆ ಗಂಡುಮಕ್ಕಳಿಲ್ಲ. ಜೀವನೋಪಾಯ ಕಷ್ಟಕರವಾಗಿದೆ. ತಮ್ಮ ಕಲೆಯನ್ನು ತುಂಬಾ ಗೌರವಿಸುವ ಮಹದೇವಯ್ಯ ತಮ್ಮ ಕಲಾತಂಡ ಉಳಿದು–ಬೆಳೆಯಬೇಕೆಂದು ಆಶಿಸುವರು.



## ಯು.ಎಸ್. ರಾಮಣ್ಣ

ಮೈಸೂರಿನ ಹವ್ಯಾಸಿ ಜನಪದ ಕಲಾವಿದ ಮತ್ತು ನಟ ಯು.ಎಸ್. ರಾಮಣ್ಣ ಉಬ್ಬೂರು ಗ್ರಾಮದವರು. ಇವರು ಜನಪದ ನೃತ್ಯಗಳಾದ ಬೀಸುಕಂಸಾಳೆ, ಮೂಡಲಪಾಯ ಯಕ್ಷಗಾನ ಮತ್ತು ಕರಪಾಲ ಮೇಳದಲ್ಲಿ ನುರಿತವರು. ಕಂಸಾಳೆಯನ್ನು ಕಂಸಾಳೆ ಮಹದೇವಯ್ಯ ಅವರಿಂದ, ಮೂಡಲಪಾಯ ಯಕ್ಷಗಾನವನ್ನು ಡಿ. ಪಟೇಲ ನಾರಸಪ್ಪ ಅವರಿಂದ ಮತ್ತು ಕರಪಾಲಮೇಳವನ್ನು ಸಿದ್ಧಪ್ಪ ಕೊನೇಹಳ್ಳಿ ಅವರಿಂದ ತರಬೇತಿ ಪಡೆದಿದ್ದಾರೆ.

1975ರಿಂದಲೂ ಕಂಸಾಳೆ ಕಲಿಸುವುದು ಮತ್ತು ಪ್ರದರ್ಶನ ನೀಡುವುದನ್ನು ಮಾಡುತ್ತಿದ್ದಾರೆ. ಮೂಡಲಪಾಯ ಯಕ್ಷಗಾನ ಮತ್ತು ಕರಪಾಲ ಮೇಳದ ಪ್ರಾತ್ಯಕ್ಷಿಕೆಯನ್ನು ನೀಡುತ್ತಿದ್ದಾರೆ. ಇವರೊಬ್ಬ ಜಂಗಮ ಹವ್ಯಾಸಿ ಜನಪದ ಕಲಾವಿದರೆಂದೇ ಖ್ಯಾತಿಯಾಗಿದ್ದಾರೆ. ಇವರು ಮೈಸೂರು ಕಂಸಾಳೆ ಮಹಾದೇವಯ್ಯ ಜಾನಪದ ಕಲಾಕೇಂದ್ರದ ಗೌರವಾಧ್ಯಕ್ಷರೂ ಹೌದು.


ರಾಮಣ್ಣ ಅವರು ನಾಟಕ ಕರ್ನಾಟಕ ರಂಗಾಯಣ ಕಲಾವಿದರಿಗೆ ಕಂಸಾಳೆ ನೃತ್ಯ ತರಬೇತಿ ನೀಡಿದ್ದಾರೆ. ಜನಪದ ನೃತ್ಯಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಪ್ರಿರಿಪಬ್ಲಿಕ್

ಡೆ ಕ್ಯಾಂಪ್, ಜಾಲಹಳ್ಳಿ(ಪೂರ್ವ), ಬೆಂಗಳೂರು–14 (1994), ಸಿ.ಎಫ್.ಟಿ. ಆರ್.ಐ. ಶಾಲೆ, ಮೈಸೂರು (28–10–1994), ಪಿ.ಇ.ಎಸ್. ವಿಜ್ಞಾನ ಕಾಲೇಜು, ಮಂಡ್ಯ (19–01–1996), ಮತ್ತು ಅಣುಶಕ್ತಿ ಕೇಂದ್ರಿಯ ವಿದ್ಯಾಲಯ ಆರ್.ಎಂ.ಪಿ. ಇಲವಾಲ ಕಾಲೋನಿಗಳಲ್ಲಿ ತರಬೇತಿ ನೀಡಿದ್ದಾರೆ.

ಚಿಣ್ಣರ ಮೇಳಕ್ಕಾಗಿ ರಂಗಾಯಣದಲ್ಲಿ ಕಂಸಾಳೆ ತರಬೇತಿಯನ್ನು ನೀಡಿದ್ದಾರೆ (2007). ಮೂಡಲಪಾಯ ಯಕ್ಷಗಾನ ಸಂಪ್ರದಾಯದ ಪುನರುಜ್ಜೀವನಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ 'ಕಲಾಕೂಟ' ಮೂಲಕ ನಡೆದ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಯು.ಎಸ್. ರಾಮಣ್ಣ ಅವರು ಏಕವ್ಯಕ್ತಿ ಪ್ರದರ್ಶನಗಳನ್ನು ನೀಡಿ ಆಂಗಿಕ, ಭಾಷಿಕ ಅಂಶಗಳನ್ನು ಒಬ್ಬ ನಟ ಬೇರೆ ಬೇರೆ ಪಾತ್ರಗಳಲ್ಲಿ ಹೇಗೆ ನಟಿಸಬಹುದೆಂದು ಪ್ರಾತ್ಯಕ್ಷಿಕೆ ನೀಡಿದ್ದಾರೆ.

ಹಲವಾರು ನಾಟಕಗಳನ್ನೂ ಯು.ಎಸ್. ರಾಮಣ್ಣ ನಿರ್ದೇಶಿಸಿದ್ದಾರೆ. ಜನಪದ ಸಂಚಯ (1998), ಪ್ಲಾಸ್ಟಿಕ್ ರಾಕ್ಷಸ (200), ಹದ್ದುಮೀರಿದ ಹಾದಿ(2001), ಸ್ವಗತಸಂಭಾಷಣೆ (2003), ಧನ್ವಂತರಿಚಿಕಿತ್ಸೆ (2004), ಯುಗಾಂತ(2005), ಏಳು ಸಮುದ್ರದಾಕೆ (2006) ನಾಟಕಗಳನ್ನು ನಿರ್ದೇಶಿಸಿದ್ದಾರೆ.ದೂರದರ್ಶನದಲ್ಲಿ ಪ್ರದರ್ಶನಗೊಂಡ ಸೂರ್ಯಶಿಕಾರಿ, ಕವಿಭಿಕ್ಷೆ ಮತ್ತು ಗಂಡಭೇರುಂಡ ಮೊದಲಾದ ನಾಟಕಗಳಲ್ಲಿ ಪಾತ್ರ ವಹಿಸಿದ್ದಾರೆ. 53 ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ರಾಮಣ್ಣ ಹವ್ಯಾಸಿ ಜನಪದ ಕಲಾವಿದರಲ್ಲದೆ ರಾಜ್ಯದ ನಾನಾ ಜಾನಪದ ವಸ್ತುಸಂಗ್ರಹಾಲಯಗಳಿಗೆ ತಜ್ಞ ಸಲಹೆಗಾರರಾಗಿದ್ದಾರೆ. ಇವರಿಗೆ ಅನೇಕ ಪ್ರಶಸ್ತಿ–ಸನ್ಮಾನಗಳು ದೊರಕಿವೆ. ರಾಮಣ್ಣ ಅವರು ಎಂ.ಎ. ಪದವೀಧರರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನ ಸಹಾಯಕರಾಗಿ (1974), ಕ್ಷೇತ್ರಸಹಾಯಕರಾಗಿ (1975), ಕ್ಯೂರೇಟರ್ (1982) ಆಗಿ ಸೇವೆಸಲ್ಲಿಸಿದ್ದಾರೆ. ಕರ್ನಾಟಕದಾದ್ಯಂತ 20 ಬಾರಿ ಕ್ಷೇತ್ರಕಾರ್ಯ ನಡೆಸಿ ಸಹಸ್ರಾರು ಅಪೂರ್ವ ಜಾನಪದ ವಸ್ತುಗಳ ಸಂಗ್ರಹಣೆ ಮಾಡಿದ್ದಾರೆ. ಇವರು ಬ್ರಿಟಿಷ್ ಕೌನ್ಸಿಲ್ ಆಮಂತ್ರಣದ ಮೇರೆಗೆ ಇಂಗ್ಲೆಂಡ್ ದೇಶದ ಸಂಗ್ರಹಾಲಯಗಳನ್ನು ಸಂದರ್ಶಿಸಿದ್ದರು (1992).



## ಮಾದನಾಯಕ ಟಿ.ಎಸ್.

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ತಿಪ್ಪೂರು ಗ್ರಾಮದ ಜನಪದ ಕಲಾವಿದ ಮಾದನಾಯಕ ಟಿ.ಎಸ್. ತಂದೆ ಸೋಮನಾಯಕ, ತಾಯಿ ಹಲಗಮ್ಮ, ಕೋಲಾಟದ ಗುರು ನರಸಿಂಹನಾಯಕ ಟಿ.ಎಸ್. ಜಾತಿ ಪರಿವಾರ 56 ವರ್ಷದ ಮಾದನಾಯಕ ಟಿ.ಎಸ್. ಬಾಲ್ಯದಿಂದಲೂ ಕೋಲಾಟದ ಹೆಜ್ಜೆ ಹದ್ದಿನೊಡನೆ ಬೆಳೆದುಬಂದವರು.

ಇವರು ಜೋಡುಕೋಲು, ರಂಗಯ್ಯನ ಕೋಲು, ಕಿನ್ನುಡಿಕೋಲು, ಒಂದು ಆಳು ಸುತ್ತು, ಎರಡು ಆಳು ಸುತ್ತು, ಜೀರಗಡ್ಡಿ ಕೋಲು, ತೇರುಕೋಲು, ಚಪ್ಪರದಟ್ಟಿಕೋಲು, ಹನುಮಯ್ಯನ ಕೋಲು, ಒಂಟಿಕೋಲು, ಏಳುಸುತ್ತುಕೋಲು, ಜಡೆಕೋಲು, ಕಂಬಕ್ಕಿ ಹಗ್ಗ ಸುತ್ತುವುದು, ಎರಡು ಜನ ಕಂಬಕ್ಕಿ ಜಡೆ ಹೆಣೆಯುವುದು, ಕರಗದ ಕೋಲು, ಹೂವಿನ ಕೋಲು, ಕೊರವಂಜಿ ಕೋಲುಗಳಲ್ಲಿ ನಿಪುಣರು.

ಮಾದನಾಯಕ ಅವರು ತಮ್ಮ ಊರಿನ ಶ್ರೀರಾಮ ಯುವಕ ಸಂಘ(1962)ದ ತಂಡದೊಡನೆ ಪ್ರದರ್ಶನಗಳನ್ನು ನೀಡಿದ್ದಾರೆ. ಇವರಿಗೆ ಸ್ಥಳೀಯವಾಗಿ ಅನೇಕ ಪ್ರಶಸ್ತಿ–ಪುರಸ್ಕಾರಗಳು ದೊರಕಿವೆ.

ತಮ್ಮ ಜನಪದ ಕಲೆಯಾದ ಕೋಲಾಟವನ್ನು ಉಳಿಸಿ, ಬೆಳೆಸುವ ನಮ್ರ ಪ್ರಯತ್ನದಲ್ಲಿ ತೊಡಗಿರುವ ಮಾದನಾಯಕ ಗೌರವಾರ್ಹರು.




## ಕಾಳಮ್ಮ

ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿಯ ತುರಗನೂರು ಗ್ರಾಮದ ಜನಪದ ಕಲಾವಿದೆ ಕಾಳಮ್ಮ. ಜಾತಿ ಒಕ್ಕಲಿಗರು. ತಂದೆ ದೊಡ್ಡಮಾದಯ್ಯ, ತಾಯಿ ನಿಂಗಮ್ಮ. ಜನನ 1933 ಜನವರಿ 1 ಎಪ್ಪತ್ನಾಲ್ಕು ವರ್ಷ ವಯಸ್ಸಿನ ಕಾಳಮ್ಮ ಸೊಗಸಾಗಿ ಜನಪದ ಗೀತೆಗಳನ್ನು ಹಾಡುತ್ತಾರೆ.

ಕಾಳಮ್ಮ ತಮ್ಮ ತಂಡದ ಸದಸ್ಯರಾದ ಸಿದ್ಧಮ್ಮ ಮತ್ತು ಬಸಮ್ಮರೊಡನೆ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮೈಸೂರು ಆಕಾಶವಾಣಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ತುಂಬು ಜೀವನ ಪ್ರೀತಿಯ ಕಾಳಮ್ಮ ಜನಪದ ಲೋಕವನ್ನು ಗಾಢವಾಗಿ ಗೌರವಿಸುತ್ತಾರೆ. ಸ್ಥಳೀಯ ಸಂಘ-ಸಂಸ್ಥೆಗಳು ಜನಪದ ಹಾಡುಗಾರ್ತಿ ಕಾಳಮ್ಮ ಅವರನ್ನೂ ಗೌರವಿಸಿದೆ. ಭೀಮನ ಕೊಲ್ಲಿ ಶ್ರೀಮಹದೇಶ್ವರ ಸ್ವಾಮಿ ದೇವಸ್ಥಾನ ಸಮಿತಿ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಕಾಳಮ್ಮ ಅವರನ್ನು ಗೌರವಿಸಲಾಗಿದೆ (27-02-2002).

ಕಾಳಮ್ಮ ಅವರ ಪ್ರತಿಭೆ ಒಂದು ಗುಪ್ತಗಾಮಿನಿ. ಸ್ಥಳೀಯವಾಗಿ ಕಾಳಮ್ಮ ಒಬ್ಬ ಕಲಾವಿದೆ ಎಂದು ಗೌರವಿಸಲ್ಪಟ್ಟಿದ್ದಾರೆ.




## ಕೃಷ್ಣನಾಯಕ

ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ತಿಪ್ಪೂರು ಗ್ರಾಮದ ಕೋಲಾಟದ ಕಲಾವಿದ ಕೃಷ್ಣನಾಯಕ. ಜಾತಿ ಪರಿವಾರ. ತಂದೆ ಸುಬ್ಬನಾಯಕ, ತಾಯಿ ಈರಮ್ಮ. ಕೋಲಾಟ ಕಲಿಸಿದ ಗುರು ನರಸಿಂಹನಾಯಕ ಟಿ.ಎಸ್. ನಲವತ್ತೈದು ವರ್ಷ ವಯಸ್ಸಿನ ಕೃಷ್ಣನಾಯಕ ಬಾಲ್ಯದಿಂದಲೂ ಕೋಲಾಟದ ಜನಪದ ಕಲಾವಿದರೊಡನೆ ಬೆಳೆದವರು.

ಕೃಷ್ಣನಾಯಕರು ಜೋಡುಕೋಲು, ರಂಗಯ್ಯನ ಕೋಲು, ಕಿನ್ನುಡಿ ಕೋಲು, ಒಂದು ಆಳು ಸುತ್ತು, ಎರಡು ಆಳು ಸುತ್ತು, ಜೀರಗಡ್ಡಿ ಕೋಲು, ತೇರುಕೋಲು, ಚಪ್ಪರದಟ್ಟಿಕೋಲು, ಹನುಮಯ್ಯನ ಕೋಲು, ಉಯ್ಯಾಲೆ, ಸೈಡು ಕೋಲು, ಗೀಜಗನ ಕೋಲು, ಹೆಣಬಾರಿಕೋಲು, ಒಂಟಿಕೋಲು, ಏಳುಸುತ್ತುಕೋಲು, ಜಡೆಕೋಲು, ಕಂಬಕ್ಕೆ ಹಗ್ಗ ಸುತ್ತುವುದು, ಎಂಟು ಜನ ಕಂಬಕ್ಕೆ ಜಡೆ ಹೆಣೆಯುವುದು, ಕರಗದಕೋಲು, ಹೂವಿನ ಕೋಲು, ಕೊರವಂಜಿ ಕೋಲು ಮುಂತಾದ ಕೋಲಾಟದಲ್ಲಿ ನಿಪುಣರು.

ತಮ್ಮ ಊರಿನ ಶ್ರೀರಾಮ ಯುವಕ ಸಂಘದ ತಂಡದೊಡನೆ ನೂರಾರು ಪ್ರದರ್ಶನಗಳನ್ನು ನೀಡಿದ್ದಾರೆ. ಆಕಾಶವಾಣಿ ಮತ್ತು ಯುವಜನ ಮೇಳಗಳಲ್ಲಿ ಭಾಗವಹಿಸಿದ್ದಾರೆ. ಮೈಸೂರಿನ ರಂಗಾಯಣದಲ್ಲಿಯೂ ಪ್ರದರ್ಶನ ನೀಡಿದ್ದಾರೆ. ದಸರಾ ಮೆರವಣಿಗೆಯಲ್ಲಿ ಭಾಗವಹಿಸಿದ್ದಾರೆ. ಹಲವು ಸಂಘ-ಸಂಸ್ಥೆಗಳು ಕೃಷ್ಣನಾಯಕರನ್ನು ಗೌರವಿಸಿದೆ. ಕೋಲಾಟ ಜನಪದ ಕಲೆಯನ್ನು ಉಳಿಸಿ-ಬೆಳೆಸುವ ಉದ್ದೇಶದಿಂದ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮದಲ್ಲಿ ಈ ಜನಪದ ಕಲೆಯನ್ನು ಒತ್ತಾಸೆಯಾಗಿ ಬಳಸಿಕೊಂಡಿದ್ದಾರೆ.



## ನರಸಿಂಹನಾಯಕ ಟಿ.ಎಸ್.

ಜನಪದ ಕಲಾವಿದ ನರಸಿಂಹನಾಯಕ ಟಿ.ಎಸ್. ಅವರು ಮೈಸೂರು ಜಿಲ್ಲೆಯ ತಿಪ್ಪೂರು ಗ್ರಾಮದವರು. ಜಾತಿ ಪರಿವಾರ. ತಂದೆ ಸಣ್ಣಮೊಗನಾಯಕ, ತಾಯಿ ಪುಟ್ಟಲಕ್ಷ್ಮಮ್ಮ 59ವರ್ಷ ವಯಸ್ಸಿನ ನರಸಿಂಹನಾಯಕ ಟಿ.ಎಸ್. ಅವರು ಪ್ರಸಿದ್ಧ ಕೋಲಾಟದ ಕಲಾವಿದರು. ಇವರು ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಕಲಾಗುರು ಚೌಡನಾಯಕ ವೃತ್ತಿಯಲ್ಲಿ ಕೃಷಿಕರು.

ನರಸಿಂಹನಾಯಕ ಟಿ.ಎಸ್. ಅವರು ಕೋಲಾಟ, ಭಜನೆಗಳನ್ನು ಹಾಡುವುದು, ಸುಗ್ಗಿಯ ಹಾಡುಗಳು, ಕಥೆ ಹೇಳುವುದು ಮತ್ತು ದೊಣ್ಣೆವರಸೆಯಲ್ಲಿಯೂ ನಿಪುಣರು.

ಕೋಲಾಟದ ಸುಮಾರು ಇಪ್ಪತ್ತೊಂದಕ್ಕೂ ಹೆಚ್ಚು ವಿಧಗಳಲ್ಲಿ ನರಸಿಂಹನಾಯಕರು ನುರಿತವರು; ಜೋಡುಕೋಲು, ರಂಗಯ್ಯನ ಕೋಲು, ಕಿನ್ನುಡಿಕೋಲು, ಒಂದು ಆಳು ಸುತ್ತು, ಎರಡು ಆಳು ಸುತ್ತು, ಜೀರಗಡ್ಡಿ ಕೋಲು, ತೇರುಕೋಲು, ಚಪ್ಪರದಟ್ಟಿಕೋಲು, ಹನುಮಯ್ಯನಕೋಲು, ಉಯ್ಯಾಲೆ, ಸೈಡುಕೋಲು, ಗೀಜಗನ ಕೋಲು, ಹೆಣಬಾರಿಕೋಲು, ಒಂಟಿಕೋಲು, ಏಳು


ಸುತ್ತುಕೋಲು, ಜಡೆಕೋಲು, ಕಂಬಕ್ಕೆ ಹಗ್ಗ ಸುತ್ತುವುದು, ಎಂಟು ಜನ ಕಂಬಕ್ಕೆ ಜಡೆ ಹೆಣೆಯುವುದು, ಕರಗದ ಕೋಲು, ಹೂವಿನ ಕೋಲು, ಕೊರವಂಜಿ ಕೋಲು ಮುಂತಾದವು.

ನರಸಿಂಹನಾಯಕ ಟಿ.ಎಸ್. ಅವರು ಶ್ರೀರಾಮ ಯುವಕ ಸಂಘ(1962) ಸ್ಥಾಪಿಸಿದ್ದಾರೆ. ಸಂಘದ ಅಧ್ಯಕ್ಷರಾಗಿ ಗ್ರಾಮಾಂತರ ಪ್ರದೇಶದಲ್ಲಿ ಜನಪದ ಕಲೆಗಳ ಪ್ರದರ್ಶನ ಹಾಗೂ ಕಾರ್ಯಾಗಾರಗಳನ್ನು ನಡೆಸುತ್ತಿದ್ದಾರೆ. ಇವರು ರಂಗಭೂಮಿಯಲ್ಲಿಯೂ ಆಸಕ್ತರು. ಹಲವಾರು ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಆಕಾಶವಾಣಿ ಕಾರ್ಯಕ್ರಮಗಳಲ್ಲೂ ನಿರಂತರವಾಗಿ ಭಾಗವಹಿಸುತ್ತಿದ್ದಾರೆ. ಯುವಜನ ಮೇಳಗಳಲ್ಲಿ ನಿರಂತರವಾಗಿ ಪಾಲ್ಗೊಂಡು ಪ್ರದರ್ಶನಗಳನ್ನು ನೀಡಿದ್ದಾರೆ.

ಮುಖ್ಯವಾಗಿ ನರಸಿಂಹನಾಯಕ ಜನಪದ ಕಲೆಗಳ ಹಿನ್ನೆಲೆಯಲ್ಲಿ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೂ, ಯುವಜನರಿಗೂ ಜನಪದ ಕಲೆಗಳನ್ನು ಕಲಿಸುತ್ತಿದ್ದಾರೆ. ದಸರಾಮೆರವಣಿಗೆ ಮತ್ತು ಮೈಸೂರಿನ ರಂಗಯಣದಲ್ಲಿ ಕಲಾವಿದರಾಗಿ ಭಾಗವಹಿಸಿದ್ದಾರೆ.

ಹಲವು ಪ್ರಶಸ್ತಿ-ಗೌರವಗಳನ್ನು ಪಡೆದಿರುವ ಜನಪದ ಕಲಾವಿದ ನರಸಿಂಹನಾಯಕ ಅವರು ಚೈತನ್ಯದ ಚಿಲುಮೆಯಂತಿದ್ದಾರೆ.

ನರಸಿಂಹನಾಯಕ ಅವರ ಶ್ರೀರಾಮ ಕೋಲಾಟ ಕಲಾ ಸಂಘದ ತಂಡದಲ್ಲಿ ಇಪ್ಪತ್ತಕ್ಕೂ ಹೆಚ್ಚು ಯುವ ಕಲಾವಿದರಿದ್ದಾರೆ. ಅವರ ಹೆಸರುಗಳು: ಮಹೇಶ ಎಸ್ (18ವ), ಸೋಮನಾಯಕ (18ವ), ಹರೀಶ ಟಿ.ಎಸ್. (18ವ), ಸಿದ್ಧನಾಯಕ(18ವ), ಶಶಿಕುಮಾರ (18ವ), ಚೌಡನಾಯಕ(18ವ), ಜಗದೀಶ(19ವ), ಮಂಚನಾಯಕ (19ವ), ತಿಮ್ಮನಾಯಕ(18ವ), ಮಹದೇವನಾಯಕ (18ವ), ರಘು (17ವ), ಸಿದ್ಧರಾಜು(17ವ), ಮನು(16ವ), ಸಿದ್ಧರಾಜು(16ವ), ನಿತಿನ್(16ವ), ಗಂಗಾಧರ(16ವ), ಸಂಪತ್ತುನಾಯಕ(58ವ), ಮಂಚನಾಯಕ(58ವ), ಮಾದನಾಯಕ ಟಿ.ಎಸ್.(55ವ), ಸೋಮನಾಯಕ(55ವ), ಕೃಷ್ಣನಾಯಕ (45ವ), ಸುಬ್ಬನಾಯಕ(45ವ), ಗಿರೀಶ (18ವ), ರಾಮಚಂದ್ರ(18ವ), ರಜಿತ್ (20ವ), ರಾಮಚಂದ್ರ(20ವ), ಮೋಹನ(18ವ), ಗಂಗಾಧರ(18ವ), ಗಣೇಶ(14ವ), ಅಭಿಷೇಕ(14ವ), ನಾರಾಯಣ(16ವ), ಸೋಮಶೆಟ್ಟಿ (16ವ), ರಾಜೇಶ(12ವ), ಧನಂಜಯ್(12ವ), ಯೋಗೇಶ(12ವ), ಜವರನಾಯಕ(12ವ), ಕಿರಣ್ (12ವ), ರುದ್ರ(12ವ), ಮೊದಲಾದವರು.




## ಸಂಪತ ನಾಯಕ ಟಿ.ಎಸ್.

ಜನಪದ ಕಲಾವಿದ ಸಂಪತನಾಯಕ ಟಿ.ಎಸ್. ಅವರು ಮೈಸೂರು ಜಿಲ್ಲೆಯ ತಿಪ್ಪೂರೂ ಗ್ರಾಮವಾಸಿ. ಜಾತಿ ಪರಿವಾರ. ತಂದೆ ಮಂಚನಾಯಕ, ತಾಯಿ ಜವರಮ್ಮ. ಐವತ್ತೆಂಟು ವಯಸ್ಸಿನ ಸಂಪತನಾಯಕ ಟಿ.ಎಸ್. ಕೋಲಾಟದಲ್ಲಿ ನಿಪುಣರು.

ಇವರು ಜೋಡುಕೋಲು, ರಂಗಯ್ಯಕೋಲು, ಕಿನ್ನುಡಿಕೋಲು, ಒಂದು ಆಳು ಸುತ್ತು, ಎರಡು ಆಳು ಸುತ್ತು, ಜೀರುಗಡ್ಡಿ ಕೋಲು, ತೇರುಕೋಲು, ಚಪ್ಪರದಟ್ಟಿಕೋಲು, ಹನುಮಯ್ಯನಕೋಲು, ಉಯ್ಯಾಲೆ, ಸೈಡುಕೋಲು, ಗೀಜಗನ ಕೋಲು, ಹೆಣಬಾರಿಕೋಲು, ಒಂಟಿಕೋಲು, ಏಳುಸುತ್ತುಕೋಲು, ಜಡೆಕೋಲು, ಕಂಬಕ್ಕೆ ಹಗ್ಗ ಸುತ್ತುವುದು, ಎಂಟುಜನಕಂಬಕ್ಕೆ ಜಡೆ ಹೆಣೆಯುವುದು, ಕರಗದಕೋಲು, ಹೂವಿನಕೋಲು, ಕೊರವಂಜಿಕೋಲು ಮುಂತಾದ ಕೋಲಾಟದ ವಿಧಗಳಲ್ಲಿ ನಿಪುಣರು.

ಸಂಪನಾಯಕ ಅವರು ಶ್ರೀರಾಮಯುವಕ ಸಂಘದ ತಂಡದಲ್ಲಿ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ರಾಜ್ಯ–ಹೊರ ರಾಜ್ಯಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.



# ನಂಜನಗೂಡು ನಾಗರಾಜು

ನಂಜನಗೂಡಿನ ನಾಗರಾಜು ಅವರು ಪ್ರಸಿದ್ಧ ಗಾರುಡಿಗೊಂಬೆ ಕಲಾವಿದರು. ತಂದೆ ಜನರಶೆಟ್ಟಿ, ತಾಯಿ ಮರಪ್ಪ. ಇವರು 1934 ಆಗಸ್ಟ್ 15ರಂದು ಜನಿಸಿದರು. ಬಾಲ್ಯದಲ್ಲಿಯೇ ಹದಿನಾರು ಮೂಳೆ ಮಾದಶೆಟ್ಟರಿಂದ ಗಾರುಡಿಗೊಂಬೆಯಾಟವನ್ನು ಕಲಿತರು. ಎಪ್ಪತ್ಮೂರು ವರ್ಷ ವಯಸ್ಸಿನ ನಾಗರಾಜು ಅವರು ನುರಿತ ಗಾರುಡಿಗೊಂಬೆ ಕಲಾವಿದರು.

ಇವರು ಮೈಸೂರು ದಸರಾ ಕಾರ್ಯಕ್ರಮದಲ್ಲಿ 1945ರಿಂದಲೂ ಭಾಗವಹಿಸುತ್ತಿದ್ದಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಸಂಚರಿಸಿ ತಮ್ಮ ಕಲಾಪ್ರದರ್ಶನವನ್ನು ನೀಡಿದ್ದಾರೆ.

ಗಾರುಡಿಬೊಂಬೆ ಕಲಾವಿದರಾದ ನಾಗರಾಜು ಶ್ರೀ ಶ್ರೀಕಂಠೇಶ್ವರ ಯಕ್ಷಗಾನ ನಾಟಕ ಮಂಡಳಿಯನ್ನು ಕಟ್ಟಿ ಕಲಾ ತಂಡದೊಡನೆ ಅನೇಕ ಪ್ರದರ್ಶನಗಳನ್ನು ನೀಡಿದ್ದಾರೆ. ಇವರೊಡನೆ ಇರುವ ಇತರೆ ಕಲಾವಿದರೆಂದರೆ ಮೂಗಯ್ಯ, ರಾಮಯ್ಯ, ಮಾದಯ್ಯ, ರಾ., ಮಹದೇವು, ಮಹದೇವ ಮತ್ತು ರಾಚಶೆಟ್ಟಿ.

ಅನೇಕ ಸಂಘ ಸಂಸ್ಥೆಗಳು ನಾಗರಾಜು ಅವರನ್ನು ಸನ್ಮಾನಿಸಿ ಗೌರವಿಸಿದೆ. ಲಯನ್ಸ್ ಕ್ಲಬ್ ಮತ್ತು ರೋಟರಿಕ್ಲಬ್‌ಗಳು ನಾಗರಾಜು ಅವರ ಕಲಾಸೇವೆಯನ್ನು ಗುರುತಿಸಿ ಗೌರವಿಸಿದೆ.




## ಚಿಕ್ಕಮರಿಯಪ್ಪ

ಮೈಸೂರು ಜಿಲ್ಲೆಯ ಕೆಂಪನ ಹುಂಡಿ ಗ್ರಾಮದ ಚಿಕ್ಕಮರಿಯಪ್ಪ ಬೀಸುಕಂಸಾಳೆ ಕಲಾವಿದರು. ತಂದೆ ನಂಜೇಗೌಡ, ತಾಯಿ ರಾಮಮ್ಮ. ಇವರು 1942 ಡಿಸೆಂಬರ್ 25ರಂದು ಜನಿಸಿದರು. ಕುರುಬ ಜನಾಂಗದಿಂದ ಬಂದ ಮರಿಯಪ್ಪ ಏಳನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಜಾನಪದ ಶ್ರೀ ಪ್ರಶಸ್ತಿ ವಿಜೇತರಾದ ದಿ. ಕಂಸಾಳೆ ಮಹದೇವಯ್ಯ ಅವರಿಂದ ಬೀಸುಕಂಸಾಳೆಯನ್ನು ಕಲಿತರು.

1960ರಲ್ಲಿ ಮರಿಯಪ್ಪ ಅವರು ಬೀಸುಕಂಸಾಳೆಯನ್ನು ಕಲಿತರು. ಅನಂತರ ತಮ್ಮ ಗುರುಗಳಾದ ಕಂಸಾಳೆ ಮಹಾದೇವಯ್ಯ ಅವರೊಡನೆ ರಾಜ್ಯ–ಹೊರರಾಜ್ಯಗಳಲ್ಲಿ ನೂರಾರು ಕಾರ್ಯಕ್ರಮಗಳನ್ನು ನೀಡಿದರು. ಬಡಗಲಹುಂಡಿಯಲ್ಲಿ ಶ್ರೀಮಲೈಮಹದೇಶ್ವರ ಕಂಸಾಳೆ ಜನಪದ ಕಲಾಸಂಘವನ್ನು ಸ್ಥಾಪಿಸಿದ್ದಾರೆ. ಸಂಘದ ಆಶ್ರಯದಲ್ಲಿ ಯುವಕರಿಗೆ ಬೀಸುಕಂಸಾಳೆಯ ತರಬೇತಿಯನ್ನು ನೀಡಿದ್ದಾರೆ. ಇವರಿಗೆ ಕನ್ನಡ ರಾಜ್ಯೋತ್ಸವ ಜಿಲ್ಲಾಪ್ರಶಸ್ತಿ–2006 ದೊರಕಿದೆ. ರಾಷ್ಟ್ರೀಯ ನಾಯಕರಾದ ಉಪರಾಷ್ಟ್ರಪತಿಗಳಾಗಿದ್ದ ಶ್ರೀಯುತ ಬಿ.ಡಿ.ಜತ್ತಿ, ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿ, ರಾಜೀವಗಾಂಧಿ, ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ ಮತ್ತು ಇಂದಿನ ಕಾಂಗ್ರೆಸ್‌ಪಕ್ಷದ ರಾಷ್ಟ್ರೀಯ ನಾಯಕಿಯಾದ ಸೋನಿಯಾಗಾಂಧಿ ಅವರು ಚಿಕ್ಕಮರಿಯಪ್ಪ ಅವರ ಕಲೆಯ ನೈಪುಣ್ಯವನ್ನು ನೋಡಿ ಮೆಚ್ಚಿದ್ದಾರೆ.

ಒರಿಸ್ಸಾ, ಆಂಧ್ರಪ್ರದೇಶ, ತಮಿಳುನಾಡು(1963), ದೆಹಲಿ (1969), ಕೇರಳ(1970), ದೆಹಲಿ (1974), ಭೂಪಾಲ್(1977), ರಾಯಪುರ (1978), ಪ್ರಥಮ ವಿಶ್ವಕನ್ನಡಸಮ್ಮೇಳನ(1985), ಮುಂತಾದ ಕಡೆಗಳಲ್ಲಿ 71ಕ್ಕೂ ಹೆಚ್ಚು ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡಿದ್ದಾರೆ.



## ಗೂಳಿ ಮಾದಶೆಟ್ಟಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹೆಮ್ಮರಗಾಲ ಗ್ರಾಮದ ಗೂಳಿ ಮಾದಶೆಟ್ಟಿ ಅವರು ಪ್ರಸಿದ್ಧ ಹಿರಿಯ ಕಂಸಾಳೆ ಮರಗಾಲು ಕುಣಿತ ಕಲಾವಿದರು. ಜಾತಿ ಉಪ್ಪಾರ. ತಂದೆ ಮಾದಶೆಟ್ಟಿ, ತಾಯಿ ಮಾದಮ್ಮ ಗುರು ಚಿನ್ನಮ್ಮನ ಮಾದಶೆಟ್ಟಿ. ಅರವತ್ತೈದು ವರ್ಷ ವಯಸ್ಸಿನ ಗೂಳಿ ಮಾದಶೆಟ್ಟಿ ಕಳೆದ 35ವರ್ಷಗಳಿಂದ ಮರಗಾಲು ಬೀಸುಕಂಸಾಳೆ ಕಣಸೇವೆಯಲ್ಲಿ ನಿರತರಾಗಿದ್ದಾರೆ. ಜಾತಿಬೇಧವಿಲ್ಲದೆ ಎಲ್ಲಾ ಜಾತಿಯ ಯುವಕರಿಗೆ ಮರಗಾಲು ಬೀಸು ಕಂಸಾಳೆಯನ್ನು ಕಲಿಸಿದ್ದಾರೆ. ಇವರು ನಂಜನಗೂಡು ತಾಲ್ಲೂಕು, ಚಾಮರಾಜನಗರ ತಾಲ್ಲೂಕು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಯುವಕರಿಗೆ ಮರಗಾಲು ಬೀಸುಕಂಸಾಳೆ ತರಬೇತಿಯನ್ನು ನೀಡಿದ್ದಾರೆ. ಗೂಳಿ ಮಾದಶೆಟ್ಟರು ಕಟ್ಟಿರುವ 'ಶ್ರೀಮಲೆಮಹದೇಶ್ವರ ಮರಗಾಲು ಬೀಸುಕಂಸಾಳೆ' ಸಂಘದಲ್ಲಿ 25ಕ್ಕೂ ಹೆಚ್ಚು ಮರಗಾಲು ಬೀಸುಕಂಸಾಳೆಯಲ್ಲಿ ನುರಿತ ಕಲಾವಿದರಿದ್ದಾರೆ.


ಕೂಲಿ ಮಾಡಿ ಜೀವನ ನಿರ್ವಹಿಸುವ ಗೂಳಿ ಮಾದಶೆಟ್ಟರು ಮರಗಾಲು ಬೀಸುಕಂಸಾಳೆ ಕಲೆ ಉಳಿದು ಬೆಳೆಯಬೇಕೆಂದು ಬಯಸುತ್ತಾರೆ. ಇವರಿಗೆ ಮಾಸಾಶನ ಬರುತ್ತದೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಗೂಳಿ ಮಾದಶೆಟ್ಟರ ಕಲೆಯನ್ನು ಗುರುತಿಸಿದೆ. ಸ್ಥಳೀಯಸಂಘ ಸಂಸ್ಥೆಗಳು, ಗ್ರಾಮಪಂಚಾಯಿತಿಗಳು ಇವರನ್ನು ಗೌರವಿಸಿದೆ. ಮೈಸೂರು ದಸರಾಮಹೋತ್ಸವ (2004), ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ (2005), ಮತ್ತು ಮೈಸೂರು ಜಿಲ್ಲಾ ಜಾನಪದ ಮತ್ತು ಘಟ್ಟದ ಕೋರೆ ಯಕ್ಷಗಾನ ಮಹೋತ್ಸವ (1987)ಗಳಲ್ಲಿ ಗೂಳಿ ಮಾದಶೆಟ್ಟರು ತಮ್ಮ ಕಲಾತಂಡದೊಡನೆ ಭಾಗವಹಿಸಿ ಪ್ರಶಸ್ತಿಪತ್ರಗಳನ್ನು ಮತ್ತು ಪುರಸ್ಕಾರವನ್ನು ಪಡೆದಿದ್ದಾರೆ. ಕರ್ನಾಟಕದ ಸರ್ಕಾರ ಗೂಳಿಮಾದಶೆಟ್ಟರ ಜನಪದ ಕಲಾ ಸೇವೆಯನ್ನು ಅವರಿಗೆ ಸೂಕ್ತ ಪ್ರಶಸ್ತಿ-ಗೌರವನ್ನು ನೀಡಬೇಕಾಗಿದೆ.



# ಮಾರಶೆಟ್ಟಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನೇರಳೆ ಗ್ರಾಮದ ಮಾರಶೆಟ್ಟರು ಮರಗಾಲು ಬೀಸುಕಂಸಾಳೆಯ ಕಲಾವಿದರು. ತಂದೆ ರಂಗಶೆಟ್ಟಿ, ತಾಯಿ ಸಿದ್ಧಮ್ಮ, ಅರವತ್ನಾಲ್ಕು ವರ್ಷ ವಯಸ್ಸಿನ ಮಾರಶೆಟ್ಟರು ಕಳೆದ ಮೂವತ್ತೈದು ವರ್ಷಗಳಿಂದಲೂ ಮರಗಾಲು ಬೀಸುಕಂಸಾಳೆಯಲ್ಲಿ ನುರಿತವರು. ಇವರು ಎಲ್ಲಾ ಜಾತಿಗಳ ಶಿಷ್ಯರನ್ನು ಹೊಂದಿದ್ದಾರೆ. ಉಪ್ಪಾರ ಜನಾಂಗದ ಮಾರಶೆಟ್ಟರಿಗೆ ಹಳ್ಳಿಯ ಎಲ್ಲಾ ಯುವಕರು ಮರಗಾಲು ಬೀಸುಕಂಸಾಳೆಯನ್ನು ಕಲಿಯಬೇಕೆಂದು ಆಶಯವಿದೆ. ಇವರು ಶ್ರೀಮಲೆ ಮಹದೇಶ್ವರ ಮರಗಾಲು ಬೀಸುಕಂಸಾಳೆ ಸಂಘದ ಸದಸ್ಯರಾಗಿದ್ದಾರೆ. ಇವರ ತಂಡದಲ್ಲಿ ನಾರಾಯಣಶೆಟ್ಟಿ, ಸ್ವಾಮಿ, ಮಾದೇವಶೆಟ್ಟಿ, ಮಹೇಶ .ಆರ್, ಕುಮಾರ ಮುಂತಾದವರಿದ್ದಾರೆ. ಮಾರಶೆಟ್ಟರು ನಂಜನಗೂಡು ತಾಲ್ಲೂಕು, ಚಾಮರಾಜನಗರ, ಹೆಚ್.ಡಿ.ಕೋಟೆ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಗಳಲ್ಲಿ ನಿರಂತರವಾಗಿ ತಮ್ಮ ತಂಡದೊಡನೆ ಮರಗಾಲು ಬೀಸುಕಂಸಾಳೆ ನೃತ್ಯಪ್ರದರ್ಶನವನ್ನು ನೀಡಿದ್ದಾರೆ. ಇವರ ಕಲಾಸೇವೆಯನ್ನು ಗುರುತಿಸಿ ಸ್ಥಳೀಯ ಸಂಘ-ಸಂಸ್ಥೆಗಳು ಹಾಗೂ ಗ್ರಾಮಪಂಚಾಯಿತಿಗಳು ಗೌರವಿಸಿವೆ.

ಮೈಸೂರು ದಸರಾ ವಸ್ತುಪ್ರದರ್ಶನ, ಶ್ರೀಆದಿ ಜಗದ್ಗುರು ಶಿವರಾತ್ರೀಶ್ವರ ಜಾತ್ರಾ ಮಹೋತ್ಸವ, ಮಲೆಮಹದೇಶ್ವರನ ಬೆಟ್ಟ, ನಂಜನಗೂಡು ಮತ್ತು ಮೈಸೂರು ಜಿಲ್ಲೆಯ ವಿವಿದೆಡೆಗಳಲ್ಲಿ ಮರಗಾಲು ಬೀಸುಕಂಸಾಳೆ ನೃತ್ಯಪ್ರದರ್ಶನವನ್ನು ನೀಡಿದ್ದಾರೆ. "ಮರಗಾಲುಬೀಸುಕಂಸಾಳೆ ವಿಶಿಷ್ಟ ಜನಪದ ನೃತ್ಯಕಲೆಯಾಗಿದೆ. ಇದನ್ನು ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾನಿಲಯುಗಳಲ್ಲಿ ಪಠ್ಯಸಹಿತವಾಗಿ ಕಲಿಸುವ ಪ್ರಯತ್ನವಾಗಬೇಕು. ಹಾಗೆಯೇ ಜನಪದ ಕಲಾವಿದರಿಗೆ ಸರ್ಕಾರ ವೃದ್ಧಾಶ್ರಮಗಳು, ಉಚಿತ ವೈದ್ಯಕೀಯ ಸೇವೆಗಳನ್ನು ಒದಗಿಸಬೇಕೆಂದು ಮಾರಶೆಟ್ಟರು ಅಭಿಪ್ರಾಯ ಪಡುವರು. ತಮ್ಮ ಅಭಿಜಾತ ಕಲೆಯಾದ ಮರಗಾಲು ಬೀಸುಕಂಸಾಳೆ ಉಳಿದು ಬೆಳೆಯಬೇಕೆಂದು ಬಯಸುವರು.




## ಕುಮಾರ .ಜೆ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನೇರಳೆ ಗ್ರಾಮದ ಕುಮಾರ.ಜೆ ಮರಗಾಲು ಬೀಸುಕಂಸಾಳೆಯ ಕಲಾವಿದ. ಇವರುಉಪ್ಪಾರ ಜನಾಂಗಕ್ಕೆ ಸೇರಿದ್ದಾರೆ. ತಂದೆ ಜವರಶೆಟ್ಟಿ ತಾಯಿ ಗೌರಮ್ಮ.

ಹದಿನೆಂಟು ವರ್ಷದ ಯುವಕ ಮರಗಾಲು ಬೀಸುಕಂಸಾಳೆ ಕಲಾವಿದ ಕುಮಾರ.ಜೆ ಹಿರಿಯರೊಡನೆ ಕೂಡಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾನೆ. ಶ್ರೀಮಲೆಮಹದೇಶ್ವರ ಮರಗಾಲು ಬೀಸುಕಂಸಾಳೆ ಸಂಘದ ಸದಸ್ಯನೂ ಹೌದು. ಇವರ ಸಂಗಾತಿಗಳಾದ ನಾರಾಯಣಶೆಟ್ಟಿ, ಸ್ವಾಮಿ, ಮಾದೇವಶೆಟ್ಟಿ, ಮಹೇಶ.ಆರ್, ಮಾರಶೆಟ್ಟಿ ಮುಂತಾದವರು ಮರಗಾಲು ಬೀಸುಕಂಸಾಳೆಯಲ್ಲಿ ನುರಿತವರಾಗಿರುವರು.

ಮೈಸೂರು ದಸರಾ ವಸ್ತುಪ್ರದರ್ಶನ, ಶ್ರೀಆದಿಗುರು ಶಿವರಾತ್ರೀಶ್ವರ ಜಾತ್ರಾಮಹೋತ್ಸವ, ನಂಜನಗೂಡು ಜಾತ್ರೆ, ಶ್ರೀಮಲೆಮಹದೇಶ್ವರನ ಬೆಟ್ಟದ ಜಾತ್ರೆ, ಜಾನಪದ ಜಾತ್ರೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳಲ್ಲಿ ತನ್ನ ತಂಡದೊಡನೆ ಮರಗಾಲು ಬೀಸುಕಂಸಾಳೆಯ ನೃತ್ಯಪ್ರದರ್ಶನವನ್ನು ಕುಮಾರ ನೀಡಿದ್ದಾನೆ.


ಜನಪದ ಕಲೆಗಳು ಉಳಿದು ಬೆಳೆಯಬೇಕು. ತಲೆಮಾರಿನಿಂದ ತಲೆದೂರಿಗೆ ಬೆಳೆಯುವ ಕಲೆ ಸಂಸ್ಕೃತಿಯ ಪ್ರತಿಬಿಂಬ–ಎಂದು ಕುಮಾರ ಅವರು ಅಭಿಪ್ರಾಯ ಪಡುವರು. ಮರಗಾಲು ಬೀಸುಕಂಸಾಳೆಯ ಬಗ್ಗೆ ಇವರಿಗೆ ಅಪಾರ ಗೌರವಾದರಗಳಿವೆ.



## ಸ್ವಾಮಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನೇರಳೆ ಗ್ರಾಮದ ಯುವ ಮರಗಾಲು ಬೀಸುಕಂಸಾಳೆ ಕುಣಿತದ ಕಲಾವಿದ ಸ್ವಾಮಿ. ತಂದೆ ಮಾದೇವಶೆಟ್ಟಿ, ತಾಯಿ ಗೌರಮ್ಮ, ಗುರು ಗೂಳಿಮಾದಶೆಟ್ಟರು. ಹದಿನೆಂಟು ವರ್ಷದ ಮರಗಾಲು ಬೀಸುಕಂಸಾಳೆ ಕಲಾವಿದ ಸ್ವಾಮಿ ಶ್ರೀಮಲೆ ಮಹದೇಶ್ವರ ಮರಗಾಲು ಬೀಸುಕಂಸಾಳೆ ಸಂಘದ ಸದಸ್ಯನೂ ಹೌದು. ಬಾಲ್ಯದಿಂದಲೂ ಮರಗಾಲು ಬೀಸುಕಂಸಾಳೆಯನ್ನು ನೋಡಿ, ಅಭ್ಯಾಸ ಮಾಡಿ ಕಲಿತವರು. ಗುರು ಗೂಳಿಮಾದಶೆಟ್ಟರ ಮಾರ್ಗದರ್ಶನದಲ್ಲಿ ಇಂದು ನುರಿತ ಯುವಕಲಾವಿದರಲ್ಲಿ ಸ್ವಾಮಿ ಕೂಡ ಒಬ್ಬರಾಗಿದ್ದಾರೆ.

ಜನಪದ ಕಲಾವಿದ ಸ್ವಾಮಿ ಮೈಸೂರು ದಸರ ವಸ್ತುಪ್ರದರ್ಶನ, ಜಾನಪದ ಜಾತ್ರೆ, ನಂಜನಗೂಡು, ಮಹದೇಶ್ವರನ ಶ್ರೀಆದಿಗುರು ಶಿವರಾತ್ರೀಶ್ವರ ಜಾತ್ರಾಮಹೋತ್ಸವ ಮುಂತಾದೆಡೆಗಳಲ್ಲಿ ತಂಡದೊಡನೆ ಹಲವಾರು ಬಾರಿ ಮರಗಾಲು ಬೀಸುಕಂಸಾಳೆ ಪ್ರದರ್ಶನವನ್ನು ನೀಡಿದ್ದಾನೆ. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಾಮರಾಜನಗರ, ಹೆಚ್.ಡಿ.ಕೋಟೆ ಮುಂತಾದ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಡೆದ ಮರಗಾಲು ಬೀಸುಕಂಸಾಳೆ ಪ್ರದರ್ಶನದಲ್ಲಿ ಸ್ವಾಮಿ ಪಾಲ್ಗೊಂಡಿದ್ದಾರೆ. ಮರಗಾಲು ಬೀಸುಕಂಸಾಳೆ ಜನಪದ ಕಲೆಯಾಗಿ ಉಳಿದು ಬೆಳೆಯಬೇಕೆಂದು ಸ್ವಾಮಿ ಆಶಿಸುತ್ತಾರೆ. ಈತನ ತಂಡದಲ್ಲಿ ಸ್ವಾಮಿ, ನಾರಾಯಣಶೆಟ್ಟಿ, ಮಾರಶೆಟ್ಟಿ, ಜೆ.ಕುಮಾರ, ಮಹೇಶ .ಆರ್, ಮಾರಶೆಟ್ಟಿ, ಮೊದಲಾದ ಕಲಾವಿದರಿವರು.



## ಪುಟ್ಟಶಿವರಾಜು

ಮೈಸೂರಿನ ಜನಪದ ಕಲಾವಿದ ಪುಟ್ಟಶಿವರಾಜು ಬೀಸುಕಂಸಾಳೆಯಲ್ಲಿ ಪರಿಣಿತರು. ತಂದೆ ಕಂಸಾಳೆ ಚಿಕ್ಕಮರಿಯಪ್ಪ, ತಾಯಿ ಚಿಕ್ಕಮ್ಮ. ಜಾತಿ ಕುರುಬರು. ಎಸ್.ಎಸ್.ಎಲ್.ಸಿ ತನಕ ವಿದ್ಯಾಭ್ಯಾಸ ಮಾಡಿದ್ದಾರೆ. ಬೀಸುಕಂಸಾಳೆ ಗುರುಗಳು ಕಂಸಾಳೆ ಚಿಕ್ಕಮರಿಯಪ್ಪ.

ಪುಟ್ಟಶಿವರಾಜು ಬಾಲ್ಯದಿಂದಲೇ ಜನಪದ ಕಲಾವಿದರೊಡನೆ ಬೆರೆತು ಬೆಳೆದವರು. ಹನ್ನೆರಡು ವರ್ಷದ ಬಾಲಕನಾಗಿರುವಾಗಲೇ ಗುರು ಕಂಸಾಳೆ ಚಿಕ್ಕಮರಿಯಪ್ಪ ಅವರಿಂದ ಬೀಸುಕಂಸಾಳೆಯನ್ನು ಕಲಿತರು. ತಂದೆಯೂ ಗುರುವೂ ಆದ ಚಿಕ್ಕಮರಿಯಪ್ಪ ಅವರೊಡನೆ ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ರಾಜಸ್ಥಾನ, ಗುಜರಾತ್ ರಾಜ್ಯಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬೀಸುಕಂಸಾಳೆ ಕಲೆಯನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದಾರೆ ಹಾಗೂ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ.

ಪುಟ್ಟಶಿವರಾಜು ಜನಪದ ಕಲೆಯಾದ ಬೀಸುಕಂಸಾಳೆಯನ್ನು ಜನಪ್ರಿಯಗೊಳಿಸಲು ಯುವಕರಿಗೆ ಕಲಿಸುತ್ತಿರುವರು. ಜನಪದ ಕಲೆಗಳ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದಾರೆ.



## ನಾರಾಯಣಶೆಟ್ಟಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ನೇರಳೆ ಗ್ರಾಮದ ನಾರಾಯಣಶೆಟ್ಟರು ಬೀಸುಕಂಸಾಳೆ, ಮರಗಾಲು ಬೀಸುಕಂಸಾಳೆ ಮತ್ತು ಕೀಲುಕುದುರೆ ಕುಣಿತದ ಕಲಾವಿದರು. ತಂದೆ ಮಾದೇವಶೆಟ್ಟಿ, ತಾಯಿ ಸುಬ್ಬಮ್ಮ ಗುರು ಗೂಳಿಮಾದಶೆಟ್ಟರು ಜನನ 1974 ಜೂನ್ 1. ನಾರಾಯಣಶೆಟ್ಟರು ಬಾಲ್ಯದಿಂದಲೂ ಜನಪದ ಕಲಾವಿದರ ಸಂಸರ್ಗದಲ್ಲೇ ಬೆಳೆದವರು. ಬೀಸುಕಂಸಾಳೆ, ತಮ್ಮ ಊರಿನಲ್ಲಿರುವ ಮರಗಾಲು ಬೀಸುಕಂಸಾಳೆ ಕಲಾವಿದರ ಸಂಘದ ತಂಡದೊಡನೆ ಕರ್ನಾಟಕಾದ್ಯಂತ ಪ್ರವಾಸವನ್ನು ಮಾಡಿದ್ದಾರೆ.


ಮುವತ್ಮೂರು ವಯಸ್ಸಿನ ಯುವ ಜನಪದ ಕಲಾವಿದ ನಾರಾಯಣ ಶೆಟ್ಟರಿಗೆ ಬೀಸುಕಂಸಾಳೆ ಕಲೆಯನ್ನು ಉಳಿಸಿ-ಬೆಳೆಸುವ ಅದಮ್ಯ ಉತ್ಸಾಹವಿದೆ. ಕ್ಷೌರಿಕ ಜನಾಂಗದಲ್ಲಿ ಜನಿಸಿದರೂ ಗ್ರಾಮದ ಇತರೆ ಜಾತಿಯವರೊಡನೆ ಅನ್ಯೋನ್ಯವಾಗಿ ಬೆರೆತು ಮರಗಾಲು ಬೀಸುಕಂಸಾಳೆಯನ್ನು ಕಲಿತ ನಾರಾಯಣ ಶೆಟ್ಟಿ ಅವರ ಲವಲವಿಕೆಯ ವ್ಯಕ್ತಿತ್ವ ಗಮನಾರ್ಹವಾದದ್ದು. ನಾರಾಯಣ ಶೆಟ್ಟಿ ಅವರು ನಂಜನಗೂಡು ತಾಲ್ಲೂಕು, ಮೈಸೂರು ತಾಲ್ಲೂಕು, ಚಾಮರಾಜನಗರ, ಹೆಚ್.ಡಿ.ಕೋಟೆ ಮುಂತಾದ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ತಂಡದೊಡನೆ ಹಲವು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರಿಗೆ ತಾವು ಕಲಿತ ಜನಪದ ಕಲೆಗಳ ಬಗ್ಗೆ ಅಪಾರವಾದ ಗೌರವವಿದೆ. ಹಾಗೆಯೇ ಕಿರಿಯರಿಗೆ ಜನಪದ ಕಲೆಗಳನ್ನು ಕಲಿಸುತ್ತಿರುವರು.



## ಮಾದೇವಶೆಟ್ಟಿ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ನೇರಳೆ ಗ್ರಾಮದ ಮಾದೇವಶೆಟ್ಟಿ ಉಪ್ಪಾರ ಜನಾಂಗದ ಮರಗಾಲು ಬೀಸುಕಂಸಾಳೆಯ ಹಿರಿಯ ಕಲಾವಿದರು. ತಂದೆ ಮಾದಶೆಟ್ಟಿ, ತಾಯಿ ಪುಟ್ಟಮಾದಮ್ಮ. ಗುರು ಗೂಳಿ ಮಾದಶೆಟ್ಟಿ, ನಲವತ್ತೈದು ವರ್ಷ ವಯಸ್ಸಿನ ಮಾದೇವಶೆಟ್ಟಿ ಶ್ರೀಮಲೆಮಹದೇಶ್ವರ ಮರಗಾಲು ಬೀಸುಕಂಸಾಳೆ ಸಂಘದ ಸದಸ್ಯರು. ಇವರ ಮರಗಾಲು ಬೀಸುಕಂಸಾಳೆ ತಂಡದಲ್ಲಿ ನಾರಾಯಣಶೆಟ್ಟಿ, ಸ್ವಾಮಿ, ಮಹೇಶ .ಆರ್, ಕುಮಾರ .ಜೆ, ಮಾರಶೆಟ್ಟಿ ಮುಂತಾದವರು. ಮಾದೇವಶೆಟ್ಟರು ತಮ್ಮ ತಂಡದೊಡನೆ ನಂಜನಗೂಡು ತಾಲ್ಲೂಕು, ಮೈಸೂರು ತಾಲ್ಲೂಕು, ಗುಂಡ್ಲುಪೇಟೆ ತಾಲ್ಲೂಕು ಮುಂತಾದ ಕಡೆಗಳಲ್ಲಿ ಮರಗಾಲು ಬೀಸುಕಂಸಾಳೆ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. ಮೈಸೂರ ದಸರ ವಸ್ತುಪ್ರದರ್ಶನ, ಕನ್ನಡ ಸಂಸ್ಕೃತಿ ಇಲಾಖೆಯ ಸಮಾರಂಭ, ಶ್ರೀಸುತ್ತೂರು ಶಿವರಾತ್ರೀಶ್ವರ ಜಾತ್ರಾಮಹೋತ್ಸವ ಮುಂತಾದ ಕಡೆ ಪ್ರದರ್ಶನಗಳನ್ನು ನೀಡಿರುವರು.

ಮರಗಾಲು ಬೀಸುಕಂಸಾಳೆಯನ್ನು ಅದರ ದೇಶೀ ಸೊಗಡಿನೊಡನೆ ಮಾದೇವಶೆಟ್ಟರು ಪ್ರದರ್ಶಿಸುವರು. ನುರಿತ ಜನಪದ ಕಲಾವಿದರಾದ ಇವರು ಮರಗಾಲು ಬೀಸುಕಂಸಾಳೆ ನೃತ್ಯವನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ; ಅನೇಕ ಶಿಷ್ಯರನ್ನೂ ತಯಾರು ಮಾಡಿದ್ದಾರೆ. "ಜನಪದ ಕಲಾವಿದರಿಗೆ ಮಾಸಾಶನ ಹೆಚ್ಚಳಗೊಳ್ಳಬೇಕು. ವೃದ್ಧರು ಹಾಗೂ ಸಂತಾನವಿಲ್ಲದ ಕಲಾವಿದರಿಗೆ ವೃದ್ಧಾಶ್ರಮಗಳಲ್ಲಿ ಆಶ್ರಯ ಕಲ್ಪಿಸಬೇಕು. ವಾಸಿಸಲು ಒಂದು ಗುಡಿಸಲು ಕೂಡ ಇಲ್ಲದ ಜನಪದ ಕಲಾವಿದರ ಸಂಖ್ಯೆ ಹೆಚ್ಚಿದೆ. ಅಂಥವರಿಗೆ ಸರ್ಕಾರದ ವತಿಯಿಂದ ಮನೆ ಕಟ್ಟಿಕೊಳ್ಳಲು ನೆರವು ದೊರೆಯಬೇಕೆಂದು" ಮರಗಾಲು ಬೀಸುಕಂಸಾಳೆ ಕಲಾವಿದ ಮಾದೇವಶೆಟ್ಟಿ ಆಶಿಸುವರು.



# ಕಿರಾಳು ನಾಗಪ್ಪ ಮಹೇಶ

ಕಿರಾಳು ನಾಗಪ್ಪ ಮಹೇಶ ವೀರಭದ್ರ ಕುಣಿತ ಕಲಾವಿದರು. ಇವರು ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಕಿರಾಳು ಗ್ರಾಮದಲ್ಲಿ 1967 ಜೂನ್ 11 ರಂದು ಜನಿಸಿದರು. ತಾಯಿ ಚೆನ್ನಮ್ಮ, ತಂದೆ ನಾಗಪ್ಪ, ಗುರು ತಂದೆಯವರೇ ಆದ ನಾಗಪ್ಪ. ಕಿರಾಳುನಾಗಪ್ಪ ಮಹೇಶ ಅವರು ಬಾಲ್ಯದಿಂದಲೂ ವೀರಭದ್ರನ ಕುಣಿತವನ್ನು ಅಭ್ಯಾಸ ಮಾಡಿದವರು. ಮೊದಲಿಗೆ ತಾತ ನಂತರ ತಂದೆ ಇವರನ್ನು ತಯಾರು ಮಾಡಿದರು. ವೀರಭದ್ರ ಕುಣಿತದ ಭಕ್ತಿ, ರೌದ್ರತೆ ಹಾಗೂ ಲಾಸ್ಯವನ್ನು ಇವರ ಕುಣಿತದಲ್ಲಿ ಕಾಣಬಹುದು.

ಕಿರಾಳುನಾಗಪ್ಪಮಹೇಶ ಅವರು 1980ರಿಂದ ಸ್ವತಂತ್ರ ಪ್ರದರ್ಶನವನ್ನು ನೀಡಲು ಪ್ರಾರಂಭಿಸಿದರು. ವೀರಶೈವ ವೀರಭದ್ರ ಕುಣಿತಗಾರರು ಎಸ್‌ಎಸ್‌ಎಲ್‌ಸಿ ತನಕ ಅಭ್ಯಾಸ ಮಾಡಿರುವ ಕಿರಾಳುನಾಗಪ್ಪ ಮಹೇಶ ಅವರು ತಮ್ಮ ಜನಪದ ಕಲೆಯಾದ ವೀರಭದ್ರನ ಕುಣಿತವನ್ನು ಗೌರವಿಸುವರು. ಈಗಾಗಲೇ ಪ್ರದರ್ಶನಗಳನ್ನು ನೀಡಿರುವ ಇವರು ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಗೌರವಗಳನ್ನು ಪಡೆದಿದ್ದಾರೆ; ದಸರ ಪ್ರಶಸ್ತಿ ಹಾಗೂ ಹಂಸಲೇಖ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಶ್ರೀ ಅಭಿನವ ವೀರಭದ್ರ ನೃತ್ಯತಂಡ (ರಿ)ದ ಆಶ್ರಯದಲ್ಲಿ ಸ್ವಾಮಿ (25 ವ.), ನಟರಾಜು (28 ವ.), ರಾಜಪ್ಪ (32 ವ.), ಬಸವಣ್ಣ (42 ವ.), ಭಾಸ್ಕರ (34 ವ.), ರಾಜು (32 ವ.), ಶಿವಲಿಂಗಪ್ಪ (31 ವ.), ಸುರೇಶ (31 ವ.) ಮೊದಲಾದ ಸದಸ್ಯರಿದ್ದಾರೆ. ಇವರೆಲ್ಲರೂ ಕೂಡಿ ಕಾರ್ಯಕ್ರಮಗಳನ್ನು ನೀಡುವುದುಂಟು. 'ಜನಪದ ಕಲೆಗಳು ಉಳಿದು ಬೆಳೆಯಲು ಸರ್ಕಾರದ ಪ್ರೋತ್ಸಾಹ ಅತ್ಯಗತ್ಯ, ಯಾವೊಂದು ಜನಪದ ಕಲೆಯೂ ಅಳಿಯಬಾರದು' ಎಂದು ಕಿರಾಳು ನಾಗಪ್ಪ ಮಹೇಶ ಅವರು ಆಶಿಸುವರು.



## ವೆಂಕಟಸ್ವಾಮಯ್ಯ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಶ್ಯಾನುಭೋಗನಹಳ್ಳಿಯ ಜನಪದ ಕಲಾವಿದರು ವೆಂಕಟಸ್ವಾಮಯ್ಯ. ತಾಯಿ ಮುತ್ಯಾಲಮ್ಮ, ತಂದೆ ಕಾಳಯ್ಯ, ಗುರು ಸಂಜೀವ ಸ್ವಾಮಿಗಳು. ಎಪ್ಪತ್ತಾರು ವರ್ಷದ ವೆಂಕಟ ಸ್ವಾಮಯ್ಯ ತಂಬೂರಿ ಪದಗಳ ಗಾಯಕ. ಇವರು ಭಜನೆ ಹಾಗೂ ಸಾವಿನ ಪದಗಳನ್ನು ಹಾಡುತ್ತಾರೆ. ವೆಂಕಟಸ್ವಾಮಯ್ಯ ಅವರ ತಂಡದಲ್ಲಿ ಈರಮ್ಮ (45 ವ.), ಎಲ್ಲಮ್ಮ (50 ವ.), ಶಿವಮ್ಮ (50 ವ.), ರಾಚಮ್ಮ (48 ವ.) ಮತ್ತು ಸುಂಕ ವೆಂಕಟಮ್ಮ (54 ವ.) ಎಂಬುವವರಿವರು.

ನಿರಂತರವಾಗಿ ಕಳೆದ ಐವತ್ತು ವರ್ಷಗಳಿಂದಲೂ ಹಾಡುತ್ತಾ ಬಂದಿರುವ ವೆಂಕಟಸ್ವಾಮಯ್ಯ ಜಂಗಮ ಜೋಗಿ. ಇವರು ವಿಭಾಗೀಯ ಮಟ್ಟದ ದಲಿತರ ಹಾಗೂ ಹಿಂದುಳಿದವರ ಸಾಂಸ್ಕೃತಿಕ ಹಿನ್ನೆಲೆಯ ಕಲಾಮೇಳ (1994), ಸಾಹಿತ್ಯ ಕಲಾವೇದಿಕೆ ಕೊಣನೂರು (1991) ಮುಂತಾದೆಡೆಗಳಲ್ಲಿ ಪ್ರಶಸ್ತಿ-ಗೌರವಗಳನ್ನು ಪಡೆದಿದ್ದಾರೆ. 'ಜನಪದರ ಹಾಡುಗಳು ಮೌಖಿಕ ಪರಂಪರೆಯಲ್ಲಿ ಉಳಿದು ಹೋಗಬಾರದು. ಅವುಗಳನ್ನು ಸಂಪಾದಿಸಿ ಪ್ರಕಟಿಸುವ ಹೊಣೆಗಾರಿಕೆ ವಿದ್ಯಾವಂತ ಸಮೂಹದ ಮೇಲಿದೆ' ಎಂದು ವೆಂಕಟಸ್ವಾಮಯ್ಯ ಹೇಳುತ್ತಾರೆ.

ಈಗಾಗಲೇ ಜನಪದ ಗಾಯಕ ವೆಂಕಟಸ್ವಾಮಯ್ಯ ಅವರು ಅನೇಕ ಶಿಷ್ಯ-ಶಿಷ್ಯೆಯರನ್ನು ತಯಾರುಮಾಡಿ ಮುಂದಿನ ಪರಂಪರೆಗೆ ಜನಪದ ಗೀತ ಸಾಹಿತ್ಯವನ್ನು ಉಳಿಸಿರುವವರು. ತಮ್ಮ ಜನಪದ ಜೀವನ ಮತ್ತು ಸಾಹಿತ್ಯದ ಬಗ್ಗೆ ಶ್ರೀಯುತರಿಗೆ ಅಪಾರವಾದ ಗೌರವವಿದೆ.




# ದೊಡ್ಡಮಾದಶೆಟ್ಟಿ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತರದಲೆ ಗ್ರಾಮದ ದೊಡ್ಡಮಾದಶೆಟ್ಟರು ಮರಗಾಲು ಬೀಸುಕಂಸಾಳೆ ಮತ್ತು ಕಂಸಾಳೆ ಮೇಳ ಕಲಾವಿದರು. ತಂದೆ ಕಟರಶೆಟ್ಟಿ, ತಾಯಿ ಸಿದ್ಧಮ್ಮ ಗುರು ಹೆಮ್ಮರಗಾಲದ ಗೂಳಿಮಾದಶೆಟ್ಟರು.

ದೊಡ್ಡಮಾದಶೆಟ್ಟರು ಬಾಲ್ಯದಿಂದಲೂ ಜನಪದ ಕಲಾವಿದರೊಡನೆ ಬೆಳೆದವರು. ಉಪ್ಪಾರ ಜನಾಂಗದಿಂದ ಬಂದ ದೊಡ್ಡಮಾದಶೆಟ್ಟರು ಮರಗಾಲು ಬೀಸುಕಂಸಾಳೆಯನ್ನು ಹೆಮ್ಮರಗಾಲದ ಗೂಳಿಮಾದಶೆಟ್ಟರಿಂದ ಕಲಿತರು. ಅನಂತರ ಒಡನಾಡಿಗಳು ಹಾಗೂ ಹಿರಿಯ ಕಲಾವಿದರಿಂದ ಕಂಸಾಳೆ ಪದಗಳನ್ನು, ಕಾವ್ಯಗಳನ್ನು ಕಲಿತರು. ಇವರು ತರದಲೆಯ ಮಲೆಮಹದೇಶ್ವರ ಕಲಾ ಸಂಘ ಸದಸ್ಯರೂ ಹೌದು. ಇವರ ತಂಡದಲ್ಲಿ ಮಹದೇವಶೆಟ್ಟಿ (28 ವ.), ಮಾದೇವಶೆಟ್ಟಿ (32 ವ.), ಮಾದಪ್ಪ (42 ವ.), ಮಹೇಂದ್ರ (35 ವ.), ಮಂಜು (36 ವ.), ಕಿರಣ್ (34 ವ.), ಮನು (28 ವ.), ಮಹಾದೇವ ಸ್ವಾಮಿ (25 ವ.) ಮೊದಲಾದವರಿರುವರು.

ದೊಡ್ಡಮಾದಶೆಟ್ಟರು ನಂಜನಗೂಡು ತಾಲ್ಲೂಕು, ಮೈಸೂರು ತಾಲ್ಲೂಕು, ಚಾಮರಾಜನಗರ, ಹೆಚ್.ಡಿ.ಕೋಟೆ ತಾಲ್ಲೂಕು ಮುಂತಾದ ಕಡೆ ತಂಡದೊಡನೆ ಪ್ರದರ್ಶನಗಳನ್ನು ನೀಡಿ ಮೆಚ್ಚುಗೆ ಗಳಿಸಿದ್ದಾರೆ. ಮೈಸೂರು ದಸರಾ ವಸ್ತುಪ್ರದರ್ಶನ, ಕಲಾಮಂದಿರ, ಶ್ರೀಆದಿಗುರು ಶಿವರಾತ್ರೀಶ್ವರ ಜಾತ್ರಾಮಹೋತ್ಸವಗಳಲ್ಲಿ ಕಲಾವಿದರಾಗಿ ಭಾಗವಹಿಸಿ ಪ್ರಶಂಸೆ, ಪ್ರಶಸ್ತಿ ಗಳಿಸಿದ್ದಾರೆ. 'ಜನಪದ ಕಲಾ ಪ್ರಕಾರಗಳಲ್ಲಿ ಮರಗಾಲು ಬೀಸುಕಂಸಾಳೆ ವಿಶಿಷ್ಟವಾದದ್ದು. ಇದು ಉಳಿದು-ಬೆಳೆಯಲು ಸರ್ಕಾರದ ವಿಶೇಷವಾದ ನೆರವು ಅಗತ್ಯ' ಎಂದು ದೊಡ್ಡಮಾದಶೆಟ್ಟಿ ಹೇಳುತ್ತಾರೆ. ಕೃಷಿಕರಾದ ಇವರು ಕಲೆಯನ್ನು ಗೌರವಿಸುವರು.



## ಗೋವಿಂದರಾಜು ಹೆಚ್.ಜೆ.

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಹಂಪಾಪುರದ ಗ್ರಾಮದ ಗೋವಿಂದರಾಜು ಹೆಚ್.ಜೆ. ಕೊಳಲು ವಾದಕರು. ತಂದೆ ಜವರಯ್ಯ, ತಾಯಿ ಹುಚ್ಚಮ್ಮ. ಹಿಂದೂ ನಯನಕ್ಷತ್ರಿಯ ಪಂಗಡದವರು, ಜನನ 1942 ಏಪ್ರಿಲ್ 24.


ಅರವತ್ತೈದು ವರ್ಷದ ಗೋವಿಂದರಾಜು ಹೆಚ್.ಜೆ. ಬಾಲ್ಯದಿಂದಲೂ ರಂಗಭೂಮಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳೊಡನೆ ಸಂಬಂಧ ಇರಿಸಿಕೊಂಡು ಬೆಳೆದವರು. ಕೊಳಲು ನುಡಿಸುವುದು, ನಾದಸ್ವರವಾದನ, ಪಿಟೀಲು ನುಡಿಸುವುದರಲ್ಲಿ ಪರಿಣಿತರು.

ಗೋವಿಂದರಾಜು ಹೆಚ್.ಜೆ. ಅವರ ಪ್ರಾಥಮಿಕ ಸಂಗೀತಾಭ್ಯಾಸದ ಗುರು ಸ್ವತಃ ತಂದೆಯವರಾದ ಜವರಯ್ಯನವರು. ಮುಂದೆ ಮೈಸೂರಿನ ಸಂಗೀತರತ್ನ ಪಿಟೀಲು ಚೌಡಯ್ಯ ಅವರಲ್ಲಿ ಪಿಟೀಲು ನುಡಿಸುವುದನ್ನು ಅಭ್ಯಾಸ ಮಾಡಿದರು (1965–68). ಕೃಷ್ಣರಾಜನಗರದ ಪಿ. ಪುಟ್ಟರಾಜಪ್ಪ ಅವರಿಂದ ನಾದಸ್ವರ ವಾದನವನ್ನು ಕಲಿತರು (1968–69). ಮುಂದೆ ಮೈಸೂರಿನ ವಿದ್ವಾಂಸ ತಿಮ್ಮಯ್ಯ ಅವರಿಂದ ಸಂಗೀತಾಭ್ಯಾಸ ಮತ್ತು ಕೊಳಲು ನುಡಿಸುವುದನ್ನು ಕಲಿತರು.

ಗೋವಿಂದರಾಜು ಹೆಚ್.ಜೆ. ಅವರು ತಾವು ಕಲಿತ ವಿದ್ಯೆಗಳಿಂದ ಜನಪದ ರಂಗಭೂಮಿಗೆ ಹೊಸ ವರ್ಚಸ್ಸನ್ನು ನೀಡಿದರು. ಇವರು ನೀಡುತ್ತಿದ್ದ ಹಿನ್ನೆಲೆ ಸಂಗೀತದಿಂದ ನಾಟಕಗಳಿಗೆ ರಮ್ಯತೆ ಉಂಟಾಗುತ್ತಿತ್ತು.

ಗೋವಿಂದರಾಜು ತಮ್ಮದೇ ಆದ ಕಲಾತಂಡವನ್ನು ಹೊಂದಿದ್ದಾರೆ. ಅವರ ತಂಡದ ಇತರೆ ಸದಸ್ಯರೆಂದರೆ, ರಾಮು (28 ವ.) (ನಾದಸ್ವರ), ಮಂಜುನಾಥ (26 ವ.) (ನಾದಸ್ವರ), ವೆಂಕಟಾಚಲ (42 ವ.) (ನಾದಸ್ವರ), ಮಹದೇವು (44 ವ.) (ಡೋಲು), ರಂಗಸ್ವಾಮಿ (42 ವ.) (ಡೋಲು), ನಾಗರಾಜು (32 ವ.) (ಡೋಲು), ಪಿ.ಎಸ್. ನಟರಾಜು (37 ವ.) (ಡೋಲು), ರಾಮು ಬಿ.ಆರ್. (38 ವ.) (ಕ್ಲಾರಿಯೋನೇಟ್), ಶಿವಣ್ಣ (42 ವ.) (ತಬಲ), ನರಸಿಂಹಮೂರ್ತಿ (34 ವ.) (ವಾಯಲಿನ್), ಗೋವಿಂದ (41 ವ.) (ನಾದಸ್ವರ-ಸ್ಯಾಕ್ಸೋ ಫೋನ್), ಹಾಲಪ್ಪ ಹೆಚ್.ವಿ. (55 ವ.) (ಕೊಳಲು).

ಗೋವಿಂದರಾಜು ಅವರು ಕರ್ನಾಟಕಾದ್ಯಂತ ಕಾರ್ಯಕ್ರಮಗಳನ್ನು ನಡೆಸಿರುವರು. ಸಾರ್ವಜನಿಕರು ಮತ್ತು ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ ಗೌರವಗಳನ್ನು ಪಡೆದಿದ್ದಾರೆ.




## ಪ್ರಭುಸ್ವಾಮಿ

ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ಯಡಹಳ್ಳಿ ಗ್ರಾಮದ ಯುವಕ ಪ್ರಭುಸ್ವಾಮಿ ವೀರಗಾಸೆ ಜನಪದ ಕಲಾವಿದರು. ತಾಯಿ ಮಲ್ಲಮ್ಮ, ತಂದೆ ಸಿದ್ಧಪ್ಪ ಉ.ಪಾಪಣ್ಣ, ಗುರು ಸಿದ್ಧಪ್ಪ. ಜನನ 1975 ಜುಲೈ 10.

ಬಾಲ್ಯದಿಂದಲೂ ಜನಪದ ಕಲೆಗಳ ಬಗ್ಗೆ ಆಸಕ್ತಿ ಇದ್ದ ಪ್ರಭುಸ್ವಾಮಿ ಅವರು ತಂದೆಯಿಂದ ವೀರಗಾಸೆ ನೃತ್ಯವನ್ನು ಕಲಿತರು. ವಂಶಪಾರಂಪರ್ಯವಾಗಿ ಬಂದ ಈ ಕಲೆಯಲ್ಲಿ ಅವರು ಪರಿಣಿತರಾದರು. ತಮ್ಮ ಒಡನಾಡಿಗಳಾದ ಮಹದೇವ (26 ವ.), ಪ್ರಕಾಶ (28 ವ.) , ಶಿವಲಿಂಗ (40 ವ.) ಮತ್ತು ಸಿದ್ಧಪ್ಪ (36 ವ.) ಮೊದಲಾದವರೊಡನೆ ಕೂಡಿ ತಮ್ಮದೇ ಆದ ಜನಪದ ಕಲಾ ತಂಡವನ್ನು ಕಟ್ಟಿರುವರು.

ಮೈಸೂರು ಜಿಲ್ಲೆಯ ಹಲವು ಸ್ಥಳಗಳಲ್ಲಿ ಇವರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಯಡಹಳ್ಳಿ ಸಿದ್ದೇಶ್ವರ ಸ್ವಾಮಿದೇವರ ಉತ್ಸವ, ಮೈಸೂರು ದಸರ ವಸ್ತುಪ್ರದರ್ಶನ, ತಿರುವಕೂಡಲು ನರಸೀಪುರದ ಕುಂಭಮೇಳ ಮುಂತಾದ ಕಡೆಗಳಲ್ಲಿ ವೀರಗಾಸೆ ಕುಣಿತ ಪ್ರದರ್ಶನವನ್ನು ನೀಡಿರುವರು. ಶ್ರೀಆದಿಗುರು ಶಿವರಾತ್ರೀಶ್ವರ ಜಾತ್ರಾಮಹೋತ್ಸದಲ್ಲಿ ಪ್ರಶಸ್ತಿಯನ್ನು ಗಳಿಸಿದ್ದಾರೆ.

ಜನಪದ ಕಲೆಗಳನ್ನು ಯುವಜನಾಂಗ ಉಳಿಸಿ–ಬೆಳೆಸಬೇಕೆಂಬ ಆಶಯವನ್ನು ಪ್ರಭುಸ್ವಾಮಿ ಹೊಂದಿರುವರು. ಜನಪದ ಕಲೆಗಳು ಅಳಿಯದಂತೆ ರಕ್ಷಿಸಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ಇವರು ಬಯಸುವರು. ಸಂದರ್ಶಕ ಕಲಾವಿದರನ್ನು ನಿಮಿಸಿಕೊಂಡು ಶಾಲಾ,ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಜನಪದ ಕಲೆ–ಸಂಸ್ಕೃತಿಗಳನ್ನು ಉಳಿಸುವ ಪ್ರಯತ್ನ ಮಾಡಬೇಕೆಂದು ಪ್ರಭುಸ್ವಾಮಿ ಆಶಿಸುವರು.




# ಬಸವನಾಯ್ಕ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಮರಳಯ್ಯನ ಕೊಪ್ಪಲಿನ ಬಸವನಾಂಯ್ಕ ರಂಗಭೂಮಿಯ ಕಲಾವಿದರು. ತಂದೆ ಚಿಕ್ಕಪ್ಪನಾಯ್ಕ ತಾಯಿ ತಾಯಮ್ಮ. ಗುರು ಬಸರಾಜ್.

ಸು. ನಲವತ್ತು ವರ್ಷ ವಯಸ್ಸಿನ ಬಸವನಾಯ್ಕರು ಜನಪದ ರಂಗಭೂಮಿಯ ಕಲಾವಿದರು. ಬಾಲ್ಯದಿಂದಲೂ ರಂಗ ಗೀತೆಗಳನ್ನು ಹಾಡುತ್ತಾ ಬಂದವರು. ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ವಿಶೇಷವಾಗಿ ಕುರುಕ್ಷೇತ್ರ ಮತ್ತು ರಾಮಾಂಜನೇಯ ಯುದ್ಧದಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಕೆಲವು ವರ್ಷಗಳಿಂದ ನಾಟಕಗಳನ್ನು ನಿರ್ದೇಶಿಸುತ್ತಿದ್ದಾರೆ. ಪ್ರತಿಭಾವಂತ ರಂಗಗೀತೆಕಾರ, ನಟ ಹಾಗೂ ನಿರ್ದೇಶಕರಾದ ಬಸವನಾಯ್ಕರು ಉತ್ಸಾಹಿ ಜನಪದ ಕಲಾವಿದರಾಗಿದ್ದಾರೆ.

ಈಗಾಗಲೇ ಸ್ಥಳೀಯ ಸಂಘಸಂಸ್ಥೆಗಳು ಬಸವನಾಯ್ಕರನ್ನು ಗೌರವಿಸಿವೆ. ಸರ್ಕಾರದಿಂದ ನೆರವು ದೊರೆತರೆ ಸ್ಥಳೀಯವಾಗಿ ಒಂದು ರಂಗಮಂದಿರವನ್ನು ನಿರ್ಮಿಸಿ ರಂಗ ನಿರ್ದೇಶಕನಾಗಿ ಮುಂದುವರಿಯುವ ಆಶಯ ಬಸವನಾಯ್ಕರಿಗಿದೆ. ಜನಪದ ರಂಗಭೂಮಿಯು ಉಳಿದು ಬೆಳೆಯಬೇಕೆಂದು ಬಸವನಾಯ್ಕರು ಬಯಸುವರು. ಇವರು ಉತ್ಸಾಹಿ ಗ್ರಾಮೀಣ ಯುವಕರ ತಂಡಗಳಿಗೆ ತರಬೇತಿ ನೀಡಿ ಗ್ರಾಮಾಂತರ ಪ್ರದೇಶಗಳಲ್ಲಿ ಆಗಾಗ್ಗೆ ನಾಟಕಗಳನ್ನು ಪ್ರಾಯೋಜಿಸುತ್ತಾರೆ.



## ಚಲುವಾಚಾರ್ ಡಿ.ಎನ್.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದ ಪುರ ಗ್ರಾಮದ ಚಲುವಾಚಾರ್ ವೃತ್ತಿಯಲ್ಲಿ ವಿಶ್ವಕರ್ಮರು. ಚಿನ್ನ-ಬೆಳ್ಳಿ ಕುಶಲಕರ್ಮಿ. ಆದರೆ ಪ್ರವೃತ್ತಿಯಲ್ಲಿ ರಂಗಗೀತೆಕಾರರು, ರಂಗಭೂಮಿ ನಿರ್ದೇಶಕರು, ಯಕ್ಷಗಾನ ಕಲಾವಿದರು, ಹರಿಕಥಾ ವಿದ್ವಾಂಸರು ಹಾಗೂ ಹಾರ್ಮೋನಿಯಂ, ತಬಲಗಳನ್ನು ನುಡಿಸುವರು. ತಂದೆ ನರಸಿಂಹಾಚಾರ್, ತಾಯಿ ಕಾಳಮ್ಮ, ಕಲಾಗುರು ಪುಟ್ಟಾಚಾರ್.

ಕಳೆದ ಐವತ್ತೈದು ವರ್ಷಗಳಿಂದ ತಮ್ಮ ಸುತ್ತಲಿನ ಗ್ರಾಮಾಂತರ ಪ್ರದೇಶದಲ್ಲಿ ಸಾಂಸ್ಕೃತಿಕ ಕಳಕಳಿಯನ್ನು ಉಳಿಸಿಕೊಂಡು ಬಂದಿರುವ ಚಲುವಾಚಾರ್ ಡಿ.ಎನ್. ಅವರನ್ನು ಹಲವು ಸಂಘ-ಸಂಸ್ಥೆಗಳು ಗೌರವಿಸಿದೆ. ಮಾಸಾಶನ ಬರುತ್ತದೆ.



## ಸಣ್ಣಶೆಟ್ಟಿ ಕೆ.ಪಿ.

ರಂಗಗೀತೆಕಾರ ಸಣ್ಣಶೆಟ್ಟಿ ಕೆ.ಪಿ. ಅವರು ಮೈಸೂರು ಜಿಲ್ಲೆಯ ಕಟ್ಟೇಮಳವಾಡಿ ಗ್ರಾಮದವರು. ತಂದೆ ಪೋತಶೆಟ್ಟಿ, ತಾಯಿ ತುಳಸಮ್ಮ, ಕಲಾಗುರು ಅಣ್ಣಯ್ಯಚಾರ್ ಪಿ.ಆರ್. ಇವರು 1927 ಫೆಬ್ರವರಿ 20 ರಂದು ಜನಿಸಿದರು.

ಎಪ್ಪತ್ತೇಳು ವರ್ಷದ ಸಣ್ಣಶೆಟ್ಟಿ ಕೆ.ಪಿ. ಜೀವನದುದ್ದಕ್ಕೂ ರಂಗಗೀತೆಗಳನ್ನು ಹಾಡಿದ್ದಾರೆ. ನೂರಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸ್ವತಃ ಹಾರ್ಮೋನಿಯಂ ನುಡಿಸುವ ಸಣ್ಣಶೆಟ್ಟಿ ಕೆ.ಪಿ. ಅವರು ಕಲಾವಿದರನ್ನು ರೂಪಿಸುವುದರಲ್ಲಿ ಸತತವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸಣ್ಣಶೆಟ್ಟಿ ಕೆ.ಪಿ. ಅವರು ಚೈತನ್ಯ ಕಲಾತಂಡವನ್ನು ಕಟ್ಟಿ ಬಸವಯ್ಯ ಎಂಬ ಸಹಾಯಕರ ಮೂಲಕ ಜನಪದ ರಂಗಭೂಮಿಗೆ ತಮ್ಮದೇ ಆದ ಕೊಡುಗೆಯ ಸಲ್ಲಿಸಿದ್ದಾರೆ. ಅನೇಕ ಸಂಘ-ಸಂಸ್ಥೆಗಳು ಇವರನ್ನು ಗೌರವಿಸಿದೆ.

ತಮ್ಮ ಸುತ್ತಲಿನ ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ಐವತ್ತು ವರ್ಷಗಳಿಂದಲೂ ಸಾಂಸ್ಕೃತಿಕ ಜೀವಂತಿಕೆ ಉಳಿಸಲು ಪ್ರಯತ್ನಿಸುತ್ತಿರುವ ಸಣ್ಣಶೆಟ್ಟಿ ಕೆ.ಪಿ. ಗಮನಾರ್ಹರು.



## ಶಿವಣ್ಣ

ಮೈಸೂರು ಜಿಲ್ಲೆಯ ಸಬ್ಬನಹಳ್ಳಿ ಗ್ರಾಮದ ಶಿವಣ್ಣ ರಂಗಗೀತೆ ಕಲಾವಿದರು. ತಂದೆ ತಮ್ಮಯ್ಯನಾಯ್ಕ, ತಾಯಿ ಬಸಮ್ಮ. ಶಿವಣ್ಣ ಅವರು 1947 ಮಾರ್ಚ್ 25ರಂದು ಜನಿಸಿದರು. ಅರವತ್ತು ವರ್ಷ ವಯಸ್ಸಿನ ಶಿವಣ್ಣ ಅವರಿಗೆ ಮಾಸಾಶನ ಬರುತ್ತದೆ.


ಶಿವಣ್ಣ ಅವರು ಸೊಗಸಾಗಿ ರಂಗಗೀತೆಗಳನ್ನು ಹಾಡುವುದಲ್ಲದೆ ಜನಪದ ರಂಗಭೂಮಿಯಲ್ಲಿ ಪಾತ್ರಗಳನ್ನು ನಿರ್ವಹಿಸುವರು. ಸ್ವತಃ ನಿರ್ದೇಶಕರೂ ಆದ ಇವರು ಗ್ರಾಮಾಂತರ ಪ್ರದೇಶದ ಕಲಾವಿದರನ್ನು ಒಟ್ಟುಗೂಡಿಸಿ ಪೌರಾಣಿಕ, ಐತಿಹಾಸಿಕ ಮತ್ತು ಜನಪದ ನಾಟಕಗಳನ್ನು ಪ್ರದರ್ಶಿಸಿಸಿರುವರು.

ತಮ್ಮ ಸುತ್ತಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಜನಪದ ಸಮೂಹ ಸಾಂಸ್ಕೃತಿಕವಾಗಿ ಎಚ್ಚರವಾಗಿಡಲು ಶಿವಣ್ಣ ಅವರ ಕೊಡುಗೆ ಗಮನಾರ್ಹ. ಆಧುನಿಕ ಸಮೂಹ ಮಾಧ್ಯಮಗಳ ಒತ್ತಡದ ನಡುವೆಯೂ ಜನಪದ ಸೊಗಡನ್ನು ಉಳಿಸುವಲ್ಲಿ ಇವರ ಪ್ರಯತ್ನ ಶ್ಲಾಘನೀಯವಾದದ್ದು.



# ಅಪ್ಪಣ್ಣಾಚಾರ್

ಜನಪದ ರಂಗಭೂಮಿ ಕಲಾವಿದರು ಹಾಗೂ ನಿರ್ದೇಶಕರೂ ಆದ ಅಪ್ಪಣ್ಣಾಚಾರ್ ಮೈಸೂರು ಜಿಲ್ಲೆಯ ಗಂಧನಹಳ್ಳಿ ಗ್ರಾಮದವರು. ತಂದೆ ಸಣ್ಣಾಚಾರ್, ತಾಯಿ ಬಸಮ್ಮ. ಅಪ್ಪಣ್ಣಾಚಾರ್ ಅವರು 1932ರಲ್ಲಿ ಜನಿಸಿದರು. ರಂಗಗುರು ಮನ್ನಾರ್. ಎಪ್ಪತ್ತೈದು ವರ್ಷ ವಯಸ್ಸಿನ ಇವರು ಬಾಲ್ಯದಿಂದಲೂ ರಂಗಾಸಕ್ತರು. ರಂಗಗೀತೆಗಳನ್ನು ಹಾಡುವುದು, ನಟನೆ ಹಾಗೂ ಹಾರ್ಮೋನಿಯಂ ನುಡಿಸುವುದರಲ್ಲಿ ಸಿದ್ಧಹಸ್ತರು. ಅಪ್ಪಣ್ಣಾಚಾರ್ ಅವರ ರಂಗಸಾಧನೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ (2000–01) ನೀಡಿ ಗೌರವಿಸಿದೆ.



## ಸಿ. ಬಸವಯ್ಯ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಬಿಳಿಕೆರೆ ಹೋಬಳಿಯ ಗಾಗೇನಹಳ್ಳಿಯ ಸಿ. ಬಸವಯ್ಯ ಅವರು ರಂಗ ಕಲಾವಿದರು. ತಂದೆ ಬಸವಯ್ಯ, ತಾಯಿ ದೇವಪ್ಪ. ಗುರು ವೈರಮುಡಯ್ಯ. ಜನನ ಸು. 1937.

ಸಿ.ಬಸವಯ್ಯ ಅವರು ಬಾಲ್ಯದಿಂದಲೂ ರಂಗಗೀತೆಗಳನ್ನು ಹಾಡುತ್ತಾ ಬಂದವರು. ಪೌರಾಣಿಕ ನಾಟಕಗಳಲ್ಲಿ ನಟರಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸಿರುವರು. ಹಲವಾರು ನಾಟಕಗಳನ್ನು ಸ್ವತಃ ನಿರ್ದೇಶಿಸಿದ್ದಾರೆ. ಇವರ ರಂಗಭೂಮಿಯ ಸಂಬಂಧ ನಿರಂತರವಾದದ್ದು. ಸಕ್ರಿಯ ರಂಗಕರ್ಮಿಯಾದ ಇವರಿಗೆ ಮಾಸಾಶನ ಬರುತ್ತದೆ.

ಜನಪದ ರಂಗಭೂಮಿಯ ಇತಿಮಿತಿಗಳನ್ನು ಬಲ್ಲ ಸಿ.ಬಸವಯ್ಯ ಜೀವನೋಪಾಯಕ್ಕಾಗಿ ಕೃಷಿಯಲ್ಲಿ ನಿರತವಾಗಿರುವರು. ರಂಗಕಲಾವಿದರಿಗೆ ಮಾಸಾಶನವಷ್ಟೇ ಸಾಲದು ವೃದ್ಧಾಪ್ಯದಲ್ಲಿ ನೆಮ್ಮದಿಯಾಗಿರಲು ರಂಗಕಲಾವಿದರಿಗಾಗಿ ವೃದ್ಧಾಶ್ರಮಗಳು ತೆರೆಯಬೇಕೆಂದು ಬಯಸುವರು. ಅರೆ ಹೊಟ್ಟೆಯ ಕಲಾವಿದರಿಗೆ ವೃದ್ಧಾಪ್ಯದಲ್ಲಿ ಯಾರೂ ನೆರವಿಗೆ ನಿಲ್ಲುವುದಿಲ್ಲ. ಇಂಥ ಸಂದರ್ಭದಲ್ಲಿ ವೃದ್ಧಾಶ್ರಮಗಳು ಅವರ ಇಳಿವಯಸ್ಸಿಗೆ ನೆಮ್ಮದಿಯ ತಾಣಗಳಾಗಬಹುದೆಂದು ಬಸವಯ್ಯ ತಿಳಿಸುವರು.




# ವೀರಭದ್ರಾಚಾರ್ಯ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ವಡೇರ ಹೊಸಹಳ್ಳಿ ಗ್ರಾಮದ ವೀರಭದ್ರಯ್ಯ ಅವರು ರಂಗ ಕಲಾವಿದರು. ತಂದೆ ತಬಲಚನ್ನಾಚಾರ್ ವಾದ್ಯಾರ್. ತಾಯಿ ಕಾಳಮ್ಮ. ಗುರು: ಹೆಚ್.ಡಿ. ಕೋಟೆಯ ಮಾಸ್ಟರ್ ಚೆಟಚರ್.

ಎಂಬತ್ತೈದು ವರ್ಷದ ವೀರಭದ್ರಾಚಾರ್ಯರು ರಂಗಕಲಾವಿದರು. ಇವರು ಚೈತನ್ಯ ಕಲಾಸಂಘದ ಆಶ್ರಯದಲ್ಲಿ ನೂರಾರು ನಾಟಕಗಳನ್ನು ಪ್ರದರ್ಶಿಸಿದ್ದಾರೆ. ರಾಮಾಯಣ, ಪಾಂಡುವಿಜಯ, ಅಶ್ವಮೇಧಯಾಗ, ನಳದಮಯಂತಿ, ಶನಿಮಹಾತ್ಮೆ, ದಾನಶೂರ ಕರ್ಣ, ಗಯಚರಿತ್ರೆ ಮುಂತಾದ ನಾಟಕಗಳನ್ನು ಪ್ರದರ್ಶಿಸಿರುವರು. ವೀರಭದ್ರಚಾರ್ಯರ ಪ್ರಕಾರ ಅವರಿಗೆ ಸು. 200 ನಾಟಕಗಳು ತಿಳಿದಿವೆ. ಅವುಗಳನ್ನು ಹಲವು ಸಲ ರಂಗದ ಮೇಲೆ ತಂದ ಜನಪದ ರಂಗಭೂಮಿಯ ಶ್ರೇಷ್ಠ ರಂಗನಿರ್ದೇಶಕರಲ್ಲಿ ವೀರಭದ್ರಚಾರ್ಯರೂ ಒಬ್ಬರು.

ಇವರ ಸಾಧನೆಗಳನ್ನು ಮೆಚ್ಚಿ ಸ್ಥಳೀಯ ಸಂಘ-ಸಂಸ್ಥೆಗಳು ಗೌರವಿಸಿವೆ. ಜೀವನದುದ್ದಕ್ಕೂ ರಂಗನಟರಾಗಿ ರಂಗಗೀತೆಗಳನ್ನು ಹಾಡುತ್ತಾ, ರಂಗನಿರ್ದೇಶಕರಾಗಿ ಕಾಲಕಳೆದ ವೀರಭದ್ರಾಚಾರ್ಯರಿಗೆ ಕಲೆಯೇ ಬದುಕಾಗಿದೆ. ಆದರೆ ಇದರಿಂದ ಬದುಕಿನ ಹೊಟ್ಟೆ ತುಂಬಿದ್ದು ಕಡಿಮೆ. ಜನಪದ ರಂಗಭೂಮಿಗೆ ಅದರದೇ ಆದ ದೇಶಿ ಸೊಗಡಿದೆ ಅದು ಉಳಿದು ಬೆಳೆಯಬೇಕೆಂದು ವೀರಭದ್ರಾಚಾರ್ಯರು ಆಶಿಸುವರು.

ಶ್ರೀಯುತರ ರಂಗಾಸಕ್ತಿ ಕರ್ನಾಟಕದ ದೇಶಿ ಕಲಾವಿದರ ಅಭೀಪ್ಸೆಯನ್ನು ಎತ್ತಿತೋರುವುದು.




## ಕೃಷ್ಣಶೆಟ್ಟಿ ಹೆಚ್.ಆರ್.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಹಳೇಬೀಡಿನವರು ಹೆಚ್.ಆರ್. ಕೃಷ್ಣಶೆಟ್ಟಿ. ಚೈತನ್ಯ ಕಲಾಸಂಘದ ಸದಸ್ಯರೂ ಆದ ಇವರು ರಂಗಕಲಾವಿದರಾಗಿ ಕಳೆದ ಸು. 50 ವರ್ಷಗಳಿಂದಲೂ ದುಡಿದಿರುವರು. ತಂದೆ ರಾಮಶೆಟ್ಟಿ ಗುರು ಹಳೇಪುರ ಗೋಪಾಲಸ್ವಾಮಿ. ಜನನ 4 ಜೂನ್ 1939.

ಹೆಚ್.ಆರ್. ಕೃಷ್ಣಶೆಟ್ಟಿ ಅವರು ರಂಗಕಲಾವಿದರು. ನಟರಾಗಿ ರಂಗಗೀತೆಗಳನ್ನು ಹಾಡುತ್ತಾ ಬೆಳೆದು ಬಂದವರು. ಪರಿಪೂರ್ಣ ಜೀವನವನ್ನು ರಂಗಭೂಮಿಗೆ ಮೀಸಲಿಟ್ಟವರು. ಇದುವರೆಗೆ ಕುರುಕ್ಷೇತ್ರ, ರಾಮಾಯಣ, ನಳದಮಯಂತಿ, ಶನಿಮಹಾತ್ಮ, ದಾನಶೂರ ಕರ್ಣ, ಪಾಂಡುವಿಜಯ, ಡಂಬಕಾಸುರನ ವಧೆ, ಸತ್ಯಹರಿಶ್ಚಂದ್ರ, ಕರಿಭಂಟ ಮೊದಲಾದ ನಾಟಕಗಳಲ್ಲಿ ನಟರಾಗಿ ಭಾಗವಹಿಸಿ ಸ್ವತಃ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರಿಗೆ ಸರ್ಕಾರದಿಂದ ಮಾಸಾಶನ ಬರುತ್ತದೆ.

ಜನಪದ ರಂಗಭೂಮಿಯ ಉಳಿದು-ಬೆಳೆಯಬೇಕೆಂದು ಕೃಷ್ಣಶೆಟ್ಟರು ಬಯಸುತ್ತಾರೆ. ಪ್ರತಿ ಹಳ್ಳಿಯಲ್ಲೂ ಯುವರಂಗಮಂದಿರ ನಿರ್ಮಾಣವಾಗಬೇಕು, ಯುವಕ-ಯುವತಿಯರು ರಂಗಭೂಮಿಯನ್ನು ತಿರಸ್ಕರಿಸಬಾರದು ಎಂದು ಹೇಳುವರು. ತಮ್ಮ ರಂಗ ಜೀವನದ ಬಗ್ಗೆ ಅವರಿಗೆ ಗೌರವವಿದೆ.

ಕೃಷ್ಣಶೆಟ್ಟರ ಕಲಾಸೇವೆಯನ್ನು ಗಮನಿಸಿ ಸ್ಥಳೀಯ ಸಂಘ ಸಂಸ್ಥೆಗಳು ಗೌರವಿಸಿದೆ.




## ಗೋವಿಂದದಾಸ ಹೆಚ್.ಎನ್.

ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಹಂಪಾಪುರ ಗ್ರಾಮದ ಗೋವಿಂದದಾಸ ಹೆಚ್.ಆರ್. ರಂಗಗೀತಕಾರರು ಹಾಗೂ ಹರಿಕಥೆಯ ಕಲಾವಿದರು. ತಂದೆ ನಾರಾಯಣಪ್ಪ, ತಾಯಿ ಲಕ್ಷ್ಮೀದೇವಮ್ಮ ಗುರು: ಲಕ್ಷ್ಮೀಪತಿ ಸಹೋದರರು ಮತ್ತು ಭದ್ರಗಿರಿ ಅಚ್ಯುತದಾಸರು.

ಮೂಲತಃ ಗೋವಿಂದದಾಸ ಅವರು ಹರಿಕಥಾ ಕಲಾವಿದರು. ಶೃಂಗೇರಿ, ಉಡುಪಿಗಳಲ್ಲಿ ತಮ್ಮ ಕಥಾಕಾಲಕ್ಷೇಪ ಮತ್ತು ಹಾಡುಗಾರಿಕೆಯಿಂದ ಪರಿಚಿತರಾದವರು. ರಂಗಭೂಮಿಯ ನಂಟೂ ಕೂಡ ಇದೆ. ಇವರು ರಂಗಕಲಾವಿದರೂ ಹೌದು. ಹಲವಾರು ನಾಟಕಗಳಲ್ಲಿ ನಟಿಸಿರುವರು.

ಹರಿಕಥೆ ಮತ್ತು ರಂಗಭೂಮಿಯೊಡನೆ ಬೆಳೆದು ಬಂದ ಗೋವಿಂದದಾಸರಿಗೆ ಜನಪದ ರಂಗಭೂಮಿಯ ಬಗ್ಗೆ ಅಪಾರವಾದ ಗೌರವ.




## ಚಿಕ್ಕೇಗೌಡ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಚುವಿನಹಳ್ಳಿ ಚಿಕ್ಕೇಗೌಡ ರಂಗ ಕಲಾವಿದರು. ತಾಯಿ ಬೀರಮ್ಮ, ತಂದೆ ಬಸವೇಗೌಡ, ಗುರು ಪಾಪನಾಯಕ.

ಕುರುಬ ಜನಾಂಗದಿಂದ ಬಂದ ಅರವತ್ತೆಂಟು ವರ್ಷವಯಸ್ಸಿನ ಚಿಕ್ಕೇಗೌಡರು ರಂಗಗೀತೆಗಳನ್ನು ಹಾಡುತ್ತಾ ಬಂದವರು. ರಂಗಭೂಮಿಯ ನಟರಾಗಿ ನಲವತ್ತು ವರ್ಷಕ್ಕೂ ಹೆಚ್ಚು ಕಾಲ ಕಳೆದವರು. ಪೌರಾಣಿಕ ನಾಟಕಗಳಲ್ಲಿ ವಿಭಿನ್ನ ಪಾತ್ರಗಳನ್ನು ವಹಿಸುತ್ತಾ ಪ್ರಸಿದ್ಧರಾದವರು. ಇದುವರೆಗೆ ಸುಮಾರು ಇಪ್ಪತ್ತೇಳಕ್ಕೂ ಹೆಚ್ಚು ನಾಟಕಗಳನ್ನು ಚಿಕ್ಕೇಗೌಡರು ನಿರ್ದೇಶಿಸಿರುವರು. ಸರ್ಕಾರದಿಂದ ಮಾಸಾಶನ ದೊರೆಯುತ್ತಿದೆ.

ರಂಗಕಲೆಗಳು ಉಳಿದು ಬೆಳೆಯಬೇಕೆಂದು ಆಶಿಸುವ ಚಿಕ್ಕೇಗೌಡರು ಗ್ರಾಮಾಂತರ ರಂಗಬಳಗ ಬೆಳೆಯಬೇಕೆಂದೂ ಹೇಳುವರು. ಹುಣಸೂರು ತಾಲ್ಲೂಕು, ಮೈಸೂರು ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳನ್ನು ರಂಗದ ಮೇಲೆ ತರುವ ಮೂಲಕ ರಂಗಸಂಸ್ಕೃತಿಗೆ ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತಿರುವರು. ಇದುವರೆಗೆ ಯಾವುದೇ ಸರ್ಕಾರಿ ಪ್ರಶಸ್ತಿ-ಗೌರವಗಳು ದೊರೆಯದೇ ಹೋದರೂ ಸ್ಥಳೀಯರಿಂದ ದೊರೆತ ಪ್ರೀತಿ, ಗೌರವಗಳನ್ನು ನೆನೆದು ಚಿಕ್ಕೇಗೌಡರು ತೃಪ್ತಿಯ ನಗೆ ಬೀರುತ್ತಾರೆ.



# ಮಹದೇವು

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಸಿದ್ಧನಕೊಪ್ಪಲಿನ ಮಹದೇವು ಅವರು ರಂಗಕಲಾವಿದರು. ತಂದೆ ನಿಂಗಯ್ಯ. ಗುರು ಮಹದೇವಪ್ಪ. ಅರವತ್ತು ವರ್ಷದ ಮಹದೇವು ಬಾಲ್ಯದಿಂದಲೂ ರಂಗಾಸಕ್ತರು. ರಂಗಗೀತೆಗಳನ್ನು ಹಾಡುವುದು, ನಾಟಕಗಳಲ್ಲಿ ಪಾತ್ರ ವಹಿಸುವುದು, ನಾಟಕಗಳನ್ನು ನಿರ್ದೇಶಿಸುವುದು ಮೊದಲಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಿರತರು.

ಮಹದೇವು ಅವರು ಹಾರ್ಮೋನಿಯಂ ಮತ್ತು ಘಟಂ ನುಡಿಸುವರು. ಗಮಕಿಗಳು ಹಾಡಿದ ಕಥೆಗೆ ವ್ಯಾಖ್ಯಾನ ನೀಡುವರು. ಹುಣಸೂರು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ನಡೆಯುವ ಎಲ್ಲಾ ಜನಪದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವರು. ಕೃಷಿ ಕಾರ್ಮಿಕರಾದರೂ ಜನಪದ ರಂಗಭೂಮಿಯ ಜೊತೆ ನಿರಂತರವಾದ ಸಂಬಂಧವನ್ನು ಇರಿಸಿಕೊಂಡವರು.

ಇದುವರೆಗೆ ಇವರಿಗೆ ಯಾವುದೇ ಪ್ರಶಸ್ತಿ–ಸನ್ಮಾನಗಳು ದೊರಕಿರುವುದಿಲ್ಲ. ಮಾಸಾಶನ ಬರುವುದಿಲ್ಲ. ಜನಪದ ಕ್ಷೇತ್ರ ಶ್ರೀಮಂತವಾದದ್ದು, ಅದು ಉಳಿದು ಬೆಳೆಯಬೇಕು; ನಾಟಕಗಳು ಜನಪದರ ಪ್ರಮುಖ ಸಾಂಸ್ಕೃತಿಕ ಜೀವಸೆಲೆ ಎಂದು ಇವರು ಅಭಿಪ್ರಾಯ ಪಡುವರು.




# ಮಲ್ಲಯ್ಯ ಬೆಟ್ಟದೂರು

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಬೆಟ್ಟದೂರು ಗ್ರಾಮದ ಮಲ್ಲಯ್ಯ ಬೆಟ್ಟದೂರು ರಂಗಭೂಮಿಯೊಡನೆ ನಿಕಟವಾದ ಸಂಬಂಧ ಇರಿಸಿಕೊಂಡವರು. ತಂದೆ ಹುಚ್ಚಯ್ಯ, ತಾಯಿ ತಾಯಮ್ಮ. ಜನನ 1943 ಜೂನ್ 18. ಗುರು ತಬಲ ಕಾಳಚಾರ್.

ಮಲ್ಲಯ್ಯ ಬೆಟ್ಟದೂರು ಬಾಲ್ಯದಲ್ಲಿಯೇ ರಂಗಭೂಮಿಯೆಡೆಗೆ ಆಕರ್ಷಿತರಾದವರು. ಪೌರಾಣಿಕ ನಾಟಕಗಳಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಅನಂತರ ನಟರಾಗಿ ರಂಗಗೀತೆಗಳನ್ನು ಹಾಡಲು ಕಲಿತರು. ಈ ನಡುವೆ ತಬಲ ಕಾಳಚಾರ್ ಅವರಿಂದ ತಬಲ ಮತ್ತು ಘಟಂ ನುಡಿಸುವುದನ್ನು ಕಲಿತರು. ಗ್ರಾಮಾಂತರ ಪ್ರದೇಶಗಳ ಗೀತಗಾಯನ ಕಾರ್ಯಕ್ರಮಗಳು ಮತ್ತು ನಾಟಕಗಳಲ್ಲಿ ಘಟಂ ನುಡಿಸುವುದು ಇವರ ಹವ್ಯಾಸವಾಯಿತು.

ಚೈತನ್ಯ ಕಲಾ ಸಂಘ, ಹುಣಸೂರು-ಆಶ್ರಯದಲ್ಲಿ ನೂರಾರು ಕಾರ್ಯಕ್ರಮಗಳನ್ನು ಮಲ್ಲಯ್ಯ ಬೆಟ್ಟದೂರು ನಡೆಸಿಕೊಟ್ಟಿರುವರು. ಅರವತ್ನಾಲ್ಕು ವರ್ಷ ವಯಸ್ಸಿನ ಮಲ್ಲಯ್ಯ ಬೆಟ್ಟದೂರು ಅವರಿಗೆ ಮಾಶಾಸನ ಬರುತ್ತದೆ. 'ಜನಪದ ರಂಗಭೂಮಿಯ ಜನಪದ ವಾದ್ಯೋಪಕರಣಗಳ ಬಳಕೆ ನಿಲ್ಲಬಾರದು. ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸಿ ಬೆಳೆಸುವ ಕಾರ್ಯವಾಗಬೇಕು. ಶಾಲೆಗಳಲ್ಲಿ ವಾದ್ಯಗಳನ್ನು ನುಡಿಸುವ ಕಲಾವಿದರನ್ನು ಸಂದರ್ಶಕ ಕಲಾವಿದರಾಗಿ ನೇಮಿಸಿಕೊಳ್ಳಬೇಕು. ಮಕ್ಕಳಿಗೆ ಜನಪದ ವಾದ್ಯೋಪಕರಣಗಳನ್ನು ಕಲಿಸುವುದರಿಂದ ಪರಂಪರೆಯ ಸತ್ವಕ್ಕೆ ಜನಪದ ಸ್ಪರ್ಶ ನೀಡಿದಂತಾಗುತ್ತದೆ'- ಎಂಬ ಆಶಯದ ಮಾತುಗಳನ್ನು ಮಲ್ಲಯ್ಯ ಬೆಟ್ಟದೂರು ಹೇಳುವರು.



## ರಾಜು ಹೊನ್ನಿಕುಪ್ಪೆ ಸಿ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಹೊನ್ನಿಕುಪ್ಪೆ ಗ್ರಾಮದ ರಾಜು ಹೊನ್ನಿಕುಪ್ಪೆ ಸಿ. ಅವರು ರಂಗಕಲಾವಿದರು. ತಂದೆ ಚಿಕ್ಕಮಾದಯ್ಯ ಜನನ 1937 ಫೆಬ್ರವರಿ 6. ಗುರು: ಮಹದೇವಪ್ಪ ಎಂ.ಕೆ.

ಬಾಲ್ಯದಿಂದಲೂ ರಂಗಾಸಕ್ತರಾದ ರಾಜು ಹೊನ್ನಿಕುಪ್ಪೆ ಅವರು ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು. ಮುಂದೆ ಒಳ್ಳೆಯ ರಂಗಗೀತಕಾರರಾಗಿ ಬೆಳೆದು. ಸ್ವತಃ ನಾಟಕಗಳನ್ನು ನಿರ್ದೇಶಿಸಲು ಪ್ರಾರಂಭಿಸಿದರು. ಇವರು ಪೌರಾಣಿಕ, ಐತಿಹಾಸಿಕ, ಜನಪದ ಮತ್ತು ಆಧುನಿಕ ನಾಟಕಗಳನ್ನು ನಿರ್ದೇಶಿಸಿದರು.

ಗ್ರಾಮೀಣ ರಂಗಭೂಮಿಯನ್ನು ಲವಲವಿಕೆಯಲ್ಲಿ ಇಡಬೇಕೆಂಬ ಆಶಯದಿಂದ ಗ್ರಾಮೀಣ ಯುವಕರನ್ನು ಸಂಘಟಿಸಿದರು. ಯುವಕರನ್ನು ಸಂಘಟಿಸಿ ರಂಗೋತ್ಸವವನ್ನು ನಡೆಸಿದರು. ಇದರಿಂದಾಗಿ ಸ್ಥಳೀಯ ಸಂಘ-ಸಂಸ್ಥೆಗಳು ರಾಜುಹೊನ್ನಿಕುಪ್ಪೆ ಅವರನ್ನು ಸನ್ಮಾನಿಸಿ ಗೌರವಿಸಿವೆ.

'ಗ್ರಾಮೀಣ ರಂಗಭೂಮಿ ಜೀವಂತಿಕೆ ಉಳ್ಳದ್ದು. ಗ್ರಾಮೀಣರಲ್ಲಿ ಸಹಜವಾದ ಪಾತ್ರ ನಿರ್ವಹಣೆಯ ಶಕ್ತಿ ಇದೆ. ಜನಪದ ಜೀವನದ ಪ್ರತಿಬಿಂಬವಾಗಿ ಜನಪದ ರಂಗಭೂಮಿಯನ್ನು ಕಾಣಬಹುದೆಂದು ರಾಜುಹೊನ್ನಿಕುಪ್ಪೆ ಅವರು ಹೇಳುವರು.




## ಬಸವಯ್ಯ ಕೊಳಗಟ್ಟಹಳ್ಳಿ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕೊಳಗಟ್ಟಹಳ್ಳಿಯ ಬಸವಯ್ಯ ಕೊಳಗಟ್ಟಹಳ್ಳಿ ರಂಗಕಲಾವಿದರು. ತಂದೆ ಬಸವಯ್ಯ, ತಾಯಿ ಪುಟ್ಟಮ್ಮ, ಜನನ 1937. ಗುರು: ಚಾಮಯ್ಯ.

ಬಾಲ್ಯದಿಂದಲೂ ಜನಪದ ರಂಗಭೂಮಿಯ ನಟರೊಡನೆ ಬೆಳೆದ ಬಸವಯ್ಯಕೊಳಗಟ್ಟಹಳ್ಳಿ ರಂಗಕಲಾವಿದರಾಗಿ ರೂಪುಗೊಂಡರು. ನಾಟಕಗಳಲ್ಲಿ ಪಾತ್ರಗಳನ್ನು ವಹಿಸುವುದು, ರಂಗಗೀತೆಗಳನ್ನು ಹಾಡುವುದು, ನಾಟಕಗಳನ್ನು ನಿರ್ದೇಶಿಸುವುದು ಬದುಕಾಯಿತು. ಕಳೆದ ನಲವತ್ತು ವರ್ಷಗಳಿಂದಲೂ ಜನಪದ ರಂಗಭೂಮಿಯೊಡನೆ ನಂಟು ಉಳಿಸಿಕೊಂಡಿರುವ ಬಸವಯ್ಯ ಕೊಳಗಟ್ಟಹಳ್ಳಿ ಗಮನಾರ್ಹರು. ಪೌರಾಣಿಕ, ಐತಿಹಾಸಿಕ, ಜನಪದ ಮತ್ತು ಆಧುನಿಕ ನಾಟಕ ನಿರ್ದೇಶನದಲ್ಲಿ ಪಳಗಿದವರು. ಹುಣಸೂರು ತಾಲ್ಲೂಕು, ಮೈಸೂರುತಾಲ್ಲೂಕು, ಕೆ.ಆರ್.ನಗರ ತಾಲ್ಲೂಕು ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ರಂಗನಿರ್ದೇಶನ ಮಾಡಿರುವರು. ವಿಶೇಷವಾಗಿ ಶನಿಮಹಾತ್ಮೆ ನಾಟಕವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ದೇಶಿಸಿದ್ದಾರೆ.

ಬಸವಯ್ಯ ಅವರು ಜನಪದ ರಂಗಭೂಮಿ ವಿಶಿಷ್ಟವಾದ ಆಯಾಮವನ್ನು ಒಳಗೊಂಡಿದೆ. ಜನಪದರು ಬಹುರೂಪಿ ಸಂಸ್ಕೃತಿ ತಳದಿಂದ ಬಂದವರು. ಅದು ಅವರ ಜನಪದ ಕಲೆಗಳಲ್ಲಿ ಆಭಿವ್ಯಕ್ತವಾಗುತ್ತದೆ'- ಎಂಬ ಆಶಯ ಅವರದ್ದು. ಇವರಿಗೆ ಮಾಸಾಶನ ಬರುತ್ತದೆ. ಪ್ರತಿಹಳ್ಳಿಯಲ್ಲೂ 'ಸರಳ ಸುಂದರ ರಂಗ ಮಂದಿರಗಳು ನಿರ್ಮಾಣವಾಗಬೇಕು. ಆ ರಂಗಮಂದಿರಗಳಿಗೆ ಸ್ಥಳೀಯಹಿರಿಯ ಕಲಾವಿದರನ್ನು ಸಂದರ್ಶಕ ಗೌರವ ಕಲಾವಿದರಾಗಿ ಸರ್ಕಾರವೇ ನೇಮಕ ಮಾಡಬೇಕು ಆಗ ಮಾತ್ರ ಜನಪದ ಸಂಸ್ಕೃತಿ ಉಳಿದೀತು' ಎಂದೂ ಅಭಿಪ್ರಾಯ ಪಡುವರು.



## ಜವರಾಯಿ

ಮೈಸೂರು ಜಿಲ್ಲೆಯ ಹುಣಸೂರು ನಗರದ ಸೋಲಿಗರ ಬೀದಿ ಕಲ್ಕುಣಿಕೆಯ ರಂಗ ಕಲಾವಿದ ಜವರಾಯಿ. ಅರವತ್ತಾರು ವಯಸ್ಸಿನ ರಂಗ ಕಲಾವಿದ ಜವರಾಯಿ ಅವರ ತಂದೆ ನಿಂಗಯ್ಯ. ಗುರು ಹೊಡೆಯರ ಹೊಸಹಳ್ಳಿಯ ಈಶ್ವರಚಾರಿ. ಬಾಲ್ಯದಿಂದಲೂ ಕಲಾಸಕ್ತರಾದ ಜವರಾಯಿ ರಂಗಭೂಮಿ ಮತ್ತು ಹಾಡುಗಾರಿಕೆಯೊಡನೆ ಬೆಳೆದವರು. ರಂಗಗೀತೆಗಳನ್ನು ಹಾಡುತ್ತಾ, ಜನಪದ ರಂಗಭೂಮಿಯಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಾ, ರಂಗನಾಟಕಗಳನ್ನು ನಿರ್ದೇಶಿಸುತ್ತಾ ಕಾಲ ಕಳೆದವರು. ಇದಲ್ಲದೆ ಹರಿಕಥೆಗಳನ್ನು ಮಾಡುವುದು, ಸಾವಿನ ಭಜನೆ ಪದಗಳನ್ನು ಹಾಡುವುದೂ ಉಂಟು. ಹಾರ್ಮೋನಿಯಂ ಮತ್ತು ತಬಲ ನುಡಿಸುವುದರಲ್ಲಿಯೂ ಪರಿಣಿತರು.

ಜವರಾಯಿ ಅವರಿಗೆ ಜನಪದ ರಂಗಭೂಮಿ ಬೆಳೆಯಬೇಕು ಎಂಬ ಆಶಯವಿದೆ. ಪ್ರಬಲ ಆಧುನಿಕ ಸಮೂಹ ಮಾಧ್ಯಮಗಳೊಡನೆ ಸರಿಸಮಾನವಾಗಿ ಜನಪದ ಸಂಸ್ಕೃತಿ ವಿಜೃಂಭಿಸಲು ಸರ್ಕಾರ ಹಾಗೂ ಸೇವಾಸಂಘ-ಸಂಸ್ಥೆಗಳು ನೆರವು ನೀಡಬೇಕೆಂದು ಅವರು ಬಯಸುತ್ತಾರೆ. ಪ್ರತಿ ಹಳ್ಳಿಯಲ್ಲೂ ರಂಗಮಂದಿರದ ನಿರ್ಮಾಣವಾಗಬೇಕು; ಆ ಮೂಲಕ ರಂಗಕಲೆಗಳ ಪುನಶ್ಚೇತನವಾಗಬೇಕೆಂದೂ ಬಯಸುವರು. ಇಷ್ಟೆಲ್ಲ ಆದರೂ ವಿದೇಶಗಳಲ್ಲಿರುವಂತೆ ಜನಪದ ಕಲೆ ಮತ್ತು ಜನಪದ ವಾದ್ಯೋಪಕರಣಗಳನ್ನು ಆಧುನಿಕ ಕಾಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಪ್ರಯತ್ನಗಳಾಗಿಲ್ಲವೆಂದೂ ವಿಷಾದಿಸುವರು. ಜವರಾಯಿ ಅವರಿಗೆ ತಮ್ಮ ರಂಗಚಟುವಟಿಕೆಗಳ ಬಗ್ಗೆ ಚಿರಂತನ ಉತ್ಸಾಹ ಹಾಗೂ ಪ್ರೀತಿಯಿದೆ.



## ಗುರುಸ್ವಾಮಪ್ಪ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಚನ್ನೇಸೋಜಿಹಳ್ಳಿಯ ಗುರುಸ್ವಾಮಪ್ಪ ರಂಗ ಕಲಾವಿದರು. ತಂದೆ: ಹನುಮಂತಯ್ಯ, ಗುರು: ದೊಡ್ಡ ಹೆಜ್ಜೂರು ರಾಮಯ್ಯ.

ಎಪ್ಪತ್ತೈದು ವರ್ಷ ವಯಸ್ಸಿನ ಗುರುಸ್ವಾಮಪ್ಪ ರಂಗ ಕಲಾವಿದರಾಗಿ ಬೆಳೆದು ಬಂದವರು. ಬಾಲ್ಯದಿಂದಲೇ ಜನಪದ ರಂಗಭೂಮಿಯತ್ತ ಸೆಳೆಯಲ್ಪಟ್ಟರು. ರಂಗ ಗೀತೆಗಳನ್ನು ಹಾಡುವುದು, ನಾಟಕಗಳಲ್ಲಿ ಪಾತ್ರ ನಿರ್ವಹಿಸುವುದು ಮತ್ತು ರಂಗನಿರ್ದೇಶನ ಮಾಡುವುದೇ ಮುಖ್ಯ ಕಸುಬಾಯಿತು.

ಗುರುಸ್ವಾಮಪ್ಪ ಅದ್ಭುತವಾಗಿ ಹಾರ್ಮೋನಿಯಂ ಕೂಡ ನುಡಿಸಬಲ್ಲರು. ನೂರಾರು ನಾಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ರಂಗದ ಮೇಲೆ ತಂದಿದ್ದಾರೆ. ಆದರೆ ಇದುವರೆಗೆ ಯಾವುದೇ ಪ್ರಶಸ್ತಿ-ಗೌರವಗಳು ದೊರಕಿಲ್ಲ. ರಂಗಭೂಮಿಯ ನಿರಂತರ ನಂಟಿನೊಡನೆ ಬೆಳೆದಿರುವ ಗುರುಸ್ವಾಮಪ್ಪ ಜನಪದ ರಂಗಭೂಮಿ ಉಳಿದು-ಬೆಳೆಯಬೇಕೆಂದು ಆಶಿಸುವರು.

ಇಳಿವಯಸ್ಸಿನಲ್ಲಿಯೂ ರಂಗಭೂಮಿಯ ಬಗ್ಗೆ ಆಸಕ್ತಿ ಹೊಂದಿರುವ ಗುರುಸ್ವಾಮಪ್ಪ ಆಧುನಿಕ ಸಮೂಹ ಮಾಧ್ಯಮಗಳ ನಡುವೆ ರಂಗಕಲೆಗಳು ಉಳಿದು ಬೆಳೆಯಲು ಪ್ರತಿ ಹಳ್ಳಿಯಲ್ಲೂ ರಂಗಚಟುವಟಿಕೆಗಳು ನಡೆಯಬೇಕೆಂದು ಹೇಳುವರು.



## ಲಕ್ಷ್ಮಣಮೂರ್ತಿ ವಿ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕುಪ್ಪೆಗ್ರಾಮದ ವಿ. ಲಕ್ಷ್ಮಣಮೂರ್ತಿ ಅವರು ಜನಪದ ರಂಗಭೂಮಿಯಲ್ಲಿ 'ಹೆಣ್ಣುವ್ಯಾಸ'ರೆಂದೇ ಪ್ರಸಿದ್ಧರು. ತಂದೆ ವೆಂಕಟಯ್ಯ ತಾಯಿ ವೆಂಕಟಮ್ಮ. ಜನನ 1936 ಸೆಪ್ಟೆಂಬರ್ 30 ರಂಗಗುರು ಸಂಜೀವಯ್ಯ. ರಂಗವೃದ್ಧರಾದ ವಿ. ಲಕ್ಷ್ಮಣಮೂರ್ತಿ ಅವರು ಬಹುಮುಖಿ ಪ್ರತಿಭೆಯ ವ್ಯಕ್ತಿ. ರಂಗಭೂಮಿಯೊಡನೆ ಬೆಳೆದು ಬಂದ ಇವರು ಸುಶ್ರಾವ್ಯವಾಗಿ ರಂಗಗೀತೆಗಳನ್ನು ಹಾಡುತ್ತಾ ಬಂದವರು. ಪೌರಾಣಿಕ ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸಿದವರು. ಅಭಿನಯ ಮತ್ತು ರಂಗನಿರ್ದೇಶನದಲ್ಲಿ ಪಳಗಿದವರು. ಲಕ್ಷ್ಮಣಮೂರ್ತಿ ಅವರು ಹಾರ್ಮೋನಿಯಂ ನುಡಿಸುವರು, ಭಜನೆ ಪದಗಳನ್ನು ಹಾಡುವರು ಮತ್ತು ಯಕ್ಷಗಾನದ ಕಥಾಪ್ರವಚನಗಳನ್ನು ನಡೆಸಿಕೊಡುವರು.

ದೊಂಬಿದಾಸರು ಜನಾಂಗಕ್ಕೆ ಸೇರಿದ ಲಕ್ಷ್ಮಣಮೂರ್ತಿ ಅವರು ತಮ್ಮ ಹನ್ನೆರಡನೆಯ ವಯಸ್ಸಿನಿಂದಲೂ ರಂಗ ಚಟುವಟಿಕೆಗಳನ್ನು ರೂಢಿಸಿಕೊಂಡವರು. ಸೀತೆ, ಸಾವಿತ್ರಿ, ದ್ರೌಪದಿ, ರುಕ್ಮಿಣಿ ಮೊದಲಾದ ಸ್ತ್ರೀ ಪಾತ್ರಗಳನ್ನು ನಿರ್ವಹಿಸಿ ಪ್ರಸಿದ್ಧರಾದವರು. ಸತ್ಯಹರಿಶ್ಚಂದ್ರ, ಕುರುಕ್ಷೇತ್ರ, ಭಕ್ತ ಪ್ರಹ್ಲಾದ, ಶನಿಪ್ರಭಾವ, ರಾಜಾಸತ್ಯವ್ರತ, ನಳದಮಯಂತಿ, ಶ್ರೀಕೃಷ್ಣಪಾರಿಜಾತ, ಶ್ರೀಕೃಷ್ಣಗಾರುಡಿ, ರಾಜಸೂಯಯಾಗ, ವಿರಾಟಪರ್ವ ಮುಂತಾದ ನೂರಕ್ಕೂ ಹೆಚ್ಚು ನಾಟಕಗಳನ್ನು ವಿ. ಲಕ್ಷ್ಮಣಮೂರ್ತಿ ನಿರ್ದೇಶಿಸಿದ್ದಾರೆ. ವಿ. ಲಕ್ಷ್ಮಣಮೂರ್ತಿಗಳ ಸಮಕಾಲೀನರಾದ ಕೊಂಡಯ್ಯ, ಕೋಡಂಗಯ್ಯ, ಗೋವಿಂದಯ್ಯ ಮತ್ತು ಸಣ್ಣ ಒಡಯ್ಯ ಉತ್ತಮ ರಂಗಕಲಾವಿದರು. ಕರ್ನಾಟಕದ ನಾಟಕ ಅಕಾಡೆಮಿ ಮತ್ತು ಸ್ಥಳೀಯ ಸಂಘ-ಸಂಸ್ಥೆಗಳು ವಿ. ಲಕ್ಷ್ಮಣಮೂರ್ತಿ ಅವರನ್ನು ಸನ್ಮಾನಿಸಿ ಗೌರವಿಸಿದೆ. ಲಕ್ಷ್ಮಣಮೂರ್ತಿ ಅವರು ರಂಗ ಪರಂಪರೆಯನ್ನು ಗೌರವಿಸುವರು. ಹಾಗೆಯೇ ರಂಗಕಲಾವಿದರಿಗೆ ಸರ್ಕಾರ ಸೂಕ್ತ ಸಹಕಾರ ಮತ್ತು ಸವಲತ್ತುಗಳನ್ನು ನೀಡಬೇಕೆಂದು ಬಯಸುವರು.




## ನಾರಾಯಣಚಾರ್ ಬಿ.ಎಸ್.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕೊಮ್ಮೆಗೌಡನ ಕೊಪ್ಪಲು ಗ್ರಾಮದ ನಾರಾಯಣಚಾರ್ ಬಿ.ಎಸ್. ಜನಪದ ರಂಗಭೂಮಿಯ ಸ್ಥಳೀಯ ರಂಗ ನಿರ್ದೇಶಕರು. ತಂದೆ ನಾರಾಯಣ ಚಾರ್ ಕೂಡ ರಂಗಭೂಮಿಯ ಬಗ್ಗೆ ಆಸಕ್ತಿ ಉಳ್ಳವರಾಗಿದ್ದರು. ಶಿರಮಳ್ಳಿ ಯಲ್ಲಶೆಟ್ರು ಜನನ 1935 ಆಗಸ್ಟ್ 18.

ಸತತವಾಗಿ ಸು. ನಲವತ್ತೈದು ವರ್ಷಗಳಿಂದಲೂ ಜನಪದ ರಂಗಭೂಮಿಯೊಡನೆ ನಾರಾಯಣಚಾರ್ ಬಿ.ಎಸ್. ಬೆಳೆದು ಬಂದಿದ್ದಾರೆ. ಪೌರಾಣಿಕ ನಾಟಕಗಳಿಗೆ ರಂಗ ನಿರ್ದೇಶನ ನೀಡುವುದರಲ್ಲಿ ಇವರು ನಿಪುಣರು. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ವಿವಿಧ ರಂಗವೇದಿಕೆಗಳಲ್ಲಿ ರಂಗಗೀತೆಗಳನ್ನು ಹಾಡುತ್ತಾ ಬಂದಿವರು. ಬಿಡುವಿನ ವೇಳೆಯಲ್ಲಿ ಹರಿಕಥಾ ಕಾಲಕ್ಷೇಪವನ್ನು ಮಾಡುವರು. ಹೀಗಾಗಿ ಸುತ್ತಮುತ್ತಲಿನ ಹಳ್ಳಿಗಳ ಶ್ರೀಸಾಮಾನ್ಯರಿಗೆ ನಾರಾಯಣಚಾರ್ ಪರಿಚಿತರು. ಸ್ಥಳೀಯ ಸಂಘ-ಸಂಸ್ಥೆಗಳು ಇವರನ್ನು ಗೌರವಿಸಿ ಕೀರ್ತನಾ ಕಲಾರತ್ನ ಎಂಬ ಬಿರುದನ್ನು ನೀಡಿವೆ. ಮೈಸೂರು ನಗರದಲ್ಲಿ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿ ಗೌರವಿಸಲ್ಪಟ್ಟಿದ್ದಾರೆ. (1987–89).

ಜನಪದ ರಂಗಭೂಮಿ ಉಳಿದು ಬೆಳೆಯಬೇಕು; ಮುಖ್ಯವಾಗಿ ರಂಗಕಲಾವಿದರನ್ನು ವೃದ್ಧಾಪ್ಯದಲ್ಲಿ ರಕ್ಷಿಸುವ ಪ್ರಯತ್ನಗಳಾಗಬೇಕು. ವೃದ್ಧಾಪ್ಯದಲ್ಲಿ ರಂಗಕಲಾವಿದರು ಬೀದಿ ಭಿಕ್ಷುಕರಾಗುವುದು ಅಮಾನವೀಯ. ಆದ್ದರಿಂದ ಕಲಾವಿದರಿಗೆಂದೇ ಪ್ರತ್ಯೇಕ ವೃದ್ಧಾಶ್ರಮಗಳನ್ನು ತೆರೆಯಬೇಕೆಂದು ರಂಗನಿರ್ದೇಶಕ ನಾರಾಯಣಚಾರ್ ಹೇಳುವರು. ಇವರಿಗೆ ಕಲೆಗಳ ಬಗ್ಗೆ ಅಪಾರವಾದ ಗೌರವವಿದೆ.



## ಶಿವಣ್ಣನಾಯಕ ವೈ.ಡಿ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಯಲಚವಾಡಿ ಗ್ರಾಮದ ಶಿವಣ್ಣನಾಯಕ ವೈ.ಡಿ. ರಂಗಭೂಮಿ ಕಲಾವಿದರು. ತಂದೆ ದೇವನಾಯಕ, ತಾಯಿ ಕೆಂಪಮ್ಮ. ಗುರು ಕಾಂತನಾಯಕ. ಜನನ 1956.

ಸೊಗಸಾಗಿ ರಂಗಗೀತಗಳನ್ನು ಹಾಡುವ ಶಿವಣ್ಣನಾಯಕ ವೈ.ಡಿ. ಜನಪದ ರಂಗಭೂಮಿಯ ಕಲಾವಿದರು. ಪೌರಾಣಿಕ, ಐತಿಹಾಸಿಕ ಮತ್ತು ಜನಪದ ನಾಟಕಗಳಲ್ಲಿ ಪಾತ್ರವಹಿಸಿದ್ದಾರೆ. ಹಲವಾರು ನಾಟಕಗಳನ್ನು ನಿರ್ದೇಶಿಸಿದ ಅನುಭವವೂ ಇದೆ.

ಸ್ಥಳೀಯ ಸಂಘ-ಸಂಸ್ಥೆಗಳು ಶಿವಣ್ಣನಾಯಕ ವೈ.ಡಿ. ಅವರನ್ನು ಸನ್ಮಾನಿಸಿ ಗೌರವಿಸಿವೆ. ಐವತ್ತೊಂದು ವರ್ಷದ ಶಿವಣ್ಣನಾಯಕ ಅವರು ಜನಪದ ರಂಗಭೂಮಿಯನ್ನು ಜೀವಂತ ಭೂಮಿಕೆ ಎಂದು ನಂಬಿರುವರು. ರಂಗಭೂಮಿ ಮನೋರಂಜನೆ ಮತ್ತು ಜೀವನಕ್ಕೆ ಆದರ್ಶವನ್ನು ಕಲಿಸುವುದೆಂದು ನಂಬಿರುವರು. ಜನಪದ ರಂಗಭೂಮಿ ಉಳಿದು-ಬೆಳೆಯಬೇಕೆಂದು ಆಶಿಸುವರು.



## ರಾಮಯ್ಯ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಅಗ್ರಹಾರ ಗ್ರಾಮದ ರಾಮಯ್ಯ ಜನಪದ ರಂಗಭೂಮಿಯ ಕಲಾವಿದರು. ತಂದೆ ಕರಿಯಯ್ಯ. ಜನನ 1927. ಗುರು ಮದ್ದಯ್ಯ.

ಎಂಬತ್ತು ವರ್ಷ ವಯಸ್ಸಿನ ರಾಮಯ್ಯ ಅವರು ಒಳ್ಳೆಯ ರಂಗಗೀತೆಕಾರ. ಇವರು ಪೌರಾಣಿಕ, ಐತಿಹಾಸಿಕ ಮತ್ತು ಜನಪದ ನಾಟಕಗಳಲ್ಲಿ ಪಾತ್ರಗಳನ್ನು ನಿರ್ವಹಿಸಿರುವರು. ಗ್ರಾಮಾಂತರ ಪ್ರದೇಶಗಳಲ್ಲಿ ರಂಗ ನಿರ್ದೇಶಕರಾಗಿ ಕೆಲಸ ಮಾಡಿರುವರು.

ಜನಪದ ರಂಗಭೂಮಿಗೆ ತಮ್ಮದೇ ಕೊಡುಗೆಯನ್ನು ಸಲ್ಲಿಸಿರುವ ರಾಮಯ್ಯ ಅವರನ್ನು ಸ್ಥಳೀಯ ಸಂಘ-ಸಂಸ್ಥೆಗಳು ಗೌರವಿಸಿದೆ. ಜನಪದ ರಂಗಭೂಮಿ ಉಳಿದು-ಬೆಳೆಯಬೇಕೆಂದು ಆಶಿಸುವರು. ರಂಗಭೂಮಿಯಲ್ಲಿ ದುಡಿದ ಕಲಾವಿದರಿಗೆ ಮಾಸಾಶನ ಮಾತ್ರವೇ ಸಾಲದು ಅವರಿಗೆ ಪ್ರತ್ಯೇಕ ವೃದ್ಧಾಶ್ರಮದ ಅಗತ್ಯವೂ ಇದೆ ಎನ್ನುತ್ತಾರೆ. ಮುಪ್ಪಿನಲ್ಲಿ ಅನಾಥರಾಗುವ ನೂರಾರು ಜನಪದ ಕಲಾವಿದರಿಗೆ ಆಶ್ರಯ ನೀಡುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ರಾಮಯ್ಯ ಆಶಿಸುವರು.




# ಸೋಮಣ್ಣ ಎಂ.ಡಿ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಮಾದಳ್ಳಿಕೊಪ್ಪಲಿನ ಎಂ.ಡಿ. ಸೋಮಣ್ಣ ಅವರು ರಂಗಗೀತೆಗಳನ್ನು ಹಾಡುವರು. ತಂದೆ ದೊಡ್ಡನಾಯಕ, ತಾಯಿ ಪುಟ್ಟಮ್ಮ, ಜನನ 1938. ಗುರು ಸಿದ್ಧಾಚಾರ್ ಬಿ.

ಅರವತ್ತೆಂಟು ವರ್ಷ ವಯಸ್ಸಿನ ಸೋಮಣ್ಣ ಅವರದ್ದು ಕಂಚಿನ ಕಂಠ; ಜನಪದ ರಂಗ ಭೂಮಿಯ ಪ್ರತಿಭಾವಂತರಲ್ಲಿ ಒಬ್ಬರು. ರಂಗಗೀತೆಗಳನ್ನು ಹಾಡುವುದಲ್ಲದೆ ರಂಗಭೂಮಿಯಲ್ಲಿ ಪಾತ್ರಗಳನ್ನು ನಿರ್ವಹಿಸಿರುವರು. ರಂಗ ನಿರ್ದೇಶಕರಾಗಿ ದುಡಿದಿರುವರು. ಪೌರಾಣಿಕ, ಐತಿಹಾಸಿಕ ಮತ್ತು ಜನಪದ ನಾಟಕಗಳಲ್ಲಿ ಪಾತ್ರವಹಿಸಿರುವರು.

ಜನಪದ ರಂಗಭೂಮಿ ಜೀವಂತವಾಗಿ ಉಳಿಯಲು ಸೋಮಣ್ಣ ಅವರಂಥವರ ಸೇವೆ ಅನನ್ಯವಾದದ್ದು. ಇವರಿಗೆ ಮಾಸಾಶನ ಬರುತ್ತದೆ. ಹಲವು ಸಂಘ–ಸಂಸ್ಥೆಗಳು ಸೋಮಣ್ಣ ಎಂ.ಡಿ. ಅವರನ್ನು ಗೌರವಿಸಿವೆ.

ಜನಪದ ರಂಗಭೂಮಿ ಉಳಿದು–ಬೆಳೆಯಬೇಕು. ಪ್ರತಿ ಹಳ್ಳಿಯಲ್ಲಿಯೂ ಕಲಾಮಂದಿರಗಳ ನಿರ್ಮಾಣವಾಗಬೇಕೆಂದು ಇವರು ಬಯಸುವರು. ಅಲ್ಲದೆ ಜನಪದ ಸೊಗಡಿನ ರಂಗಗೀತೆಗಳನ್ನು ಶಾಲಾ–ಕಾಲೇಜುಗಳಲ್ಲಿ ಪಠ್ಯವಾಗಿ–ಹವ್ಯಾಸವಾಗಿ ಕಲಿಯುವ ಅವಕಾಶವಾಗಬೇಕೆಂದು ಇವರು ಬಯಸುವರು.




## ಮೂರ್ತಿ ಕೆ.ಆರ್.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಹನಗೋಡು ಅಂಚೆ ಕಿರಂಗೂರು ಗ್ರಾಮದ ರಂಗಕಲಾವಿದರು ಮೂರ್ತಿ ಕೆ.ಆರ್. ತಂದೆ ರಾಮಯ್ಯ, ತಾಯಿ ಗಂಗಮ್ಮ. ಗುರು ರಾಮಯ್ಯ.

ಮೂರ್ತಿ ಅವರು ಕಳೆದ ನಲವತ್ತು ವರ್ಷಗಳಿಂದಲೂ ರಂಗಭೂಮಿಯೊಡನೆ ನಂಟು ಬೆಳೆಸಿಕೊಂಡಿದ್ದಾರೆ. ರಂಗಗೀತೆಗಳನ್ನು ಹಾಡುವರು. ಪೌರಾಣಿಕ ನಾಟಕಗಳಲ್ಲಿ ಭೀಷ್ಮ, ಭೀಮ, ದುರ್ಯೋಧನ, ಕೀಚಕ ಮೊದಲಾದ ಪಾತ್ರಗಳಲ್ಲಿ ನಟಿಸಿರುವರು. ರಂಗ ನಿರ್ದೇಶಕರಾಗಿ ಮೂವತ್ತು ವರ್ಷಕ್ಕೂ ಹೆಚ್ಚು ಕಾಲ ದುಡಿದಿದ್ದಾರೆ.

ಸ್ಥಳೀಯವಾಗಿ ರಂಗ ಕಲಾವಿದರೆಂದೇ ಗುರುತಿಸಲ್ಪಡುವ ಮೂರ್ತಿ ಅವರು ತಮ್ಮ ಕಲಾಜೀವನವನ್ನು ಗೌರವಿಸುವರು. ಮುಖ್ಯವಾಗಿ ರಂಗಕಲಾವಿದರಿಗೆ ಸರ್ಕಾರ ವಿಶೇಷ ಸವಲತ್ತುಗಳನ್ನು ಒದಗಿಸಬೇಕೆಂದು ಬಯಸುತ್ತಾರೆ. ಏಕೆಂದರೆ ವೃದ್ಧಾಪ್ಯದಲ್ಲಿ ಹೆಚ್ಚಿನ ರಂಗ ಕಲಾವಿದರು ಅನಾಥರಾಗುವರು. ಅಂಥವರ ಶವಸಂಸ್ಕಾರಕ್ಕೂ ಹಣವಿರುವುದಿಲ್ಲ. ಆದ್ದರಿಂದ ಸರ್ಕಾರ ಕಲಾವಿದರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಹೇಳುವರು. ಜನಪದ ರಂಗಭೂಮಿಯೊಡನೆ ನಿರಂತರವಾಗಿ ನಂಟು ಉಳಿಸಿಕೊಂಡ ಮೂರ್ತಿ ಇವರನ್ನು ಸ್ಥಳೀಯ ಸಂಸ್ಥೆಗಳು ಗೌರವಿಸಿದೆ.



## ಜವರಯ್ಯ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಮೂಳ್ಳೂರು ಅಂಚೆ ಹುಲ್ಯಾಳು ಗ್ರಾಮದ ಜವರಯ್ಯ ಅವರು ರಂಗ ಕಲಾವಿದರು. ತಂದೆ ಲಕ್ಕಯ್ಯ, ತಾಯಿ ಸಿದ್ಧಮ್ಮ, ರಂಗ ಗುರು ಬೋರಯ್ಯ.

ಎಪ್ಪತ್ತೈದು ವರ್ಷ ವಯಸ್ಸಿನ ಜವರಯ್ಯ ಕಳೆದ ಸು. 40-45 ವರ್ಷಗಳಿಂದಲೂ ಜನಪದ ರಂಗಭೂಮಿಯೊಡನೆ ಬೆರೆತು ಬಾಳಿದವರು. ರಂಗಗೀತೆಗಳನ್ನು ಹಾಡುವುದರೊಡನೆ, ಪಾತ್ರನಿರ್ವಹಣೆ, ರಂಗ ನಿರ್ದೇಶನವನ್ನೂ ಮಾಡಿರುವರು. ಬಾಲ್ಯದಲ್ಲೇ ಬಣ್ಣ ಹಚ್ಚಿಕೊಂಡು ರಂಗದ ಮೇಲೆ ಬಂದ ಜವರಯ್ಯ ಜನಪದ ರಂಗಭೂಮಿ ಸಮೂಹ ಮಾಧ್ಯಮಗಳ ಒತ್ತಡಗಳ ನಡುವೆಯೂ ಜೀವಂತಿಕೆ ಉಳಿಸಿಕೊಂಡಿದೆ ಎನ್ನುವರು. ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ರಂಗ ಚಟುವಟಿಕೆಗಳ ಬಗ್ಗೆ ಜವರಯ್ಯ ಅವರು ಸದಾ ಆಸಕ್ತರು.

ಜವರಯ್ಯ ಅವರ ರಂಗ ಸೇವೆಯನ್ನು ಗಮನಿಸಿ ಸ್ಥಳೀಯ ಸಂಘಸಂಸ್ಥೆಗಳು ಗೌರವಿಸಿವೆ.



## ಬಸವರಾಜುನಾಯ್ಕ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಮಾದಹಳ್ಳಿ ಕೊಪ್ಪಲಿನ ಬಸವರಾಜು ನಾಯ್ಕ ರಂಗಕಲಾವಿದರು. ತಂದೆ ಚಿಕ್ಕನಾಯ್ಕ, ತಾಯಿ ಪುಟ್ಟಮ್ಮ, ಜನನ 1942. ಗುರು ಹಿಟ್ಲದ ಮಹದೇವನಾಯ್ಕ. ಬಸವರಾಜು ನಾಯ್ಕರು ರಂಗಭೂಮಿ ಕಲಾವಿದರು. ಸು. ನಲವತ್ತೈದು ವರ್ಷಗಳಿಂದಲೂ ನಟರಾಗಿ ಜನಪದ ರಂಗ ಭೂಮಿಯಲ್ಲಿ ಕ್ರಿಯಾಶೀಲರಾಗಿರುವರು. ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ನಾಟಕಗಳಲ್ಲಿ ಪ್ರಾತಿನಿಧಿಕ ಪಾತ್ರಗಳನ್ನು ನಿರ್ವಹಿಸುತ್ತಾರೆ. ಕುರುಕ್ಷೇತ್ರ ಮತ್ತು ನಳದಮಯಂತಿ ನಾಟಕಗಳಿಂದ ಇವರು ಪ್ರಸಿದ್ಧರಾದರು.

ಕಡುಬಡತನದ ಕುಟುಂಬದಿಂದ ಬಂದ ಇವರು ಕೃಷಿಕಾರ್ಮಿಕರು. ಆದರೂ ಹುಣಸೂರು ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ನಡೆಯುವ ನಾಟಕಗಳಲ್ಲಿ ಪಾತ್ರಧಾರಿಯಾಗಿ ಭಾಗವಹಿಸುವ ನಿರಂತರ ಉತ್ಸಾಹವನ್ನು ಉಳಿಸಿಕೊಂಡಿರುವರು. 'ಕಲಾವಿದರಿಗೆ ಸೂಕ್ತ ಅವಕಾಶ ದೊರೆತರೆ ಗ್ರಾಮಾಂತರ ಪ್ರತಿಭೆಗಳ ಪರಿಚಯ ಎಲ್ಲರಿಗೂ ಆಗುತ್ತದೆ. ಕಲಾವಿದರಿಗೆ ಗ್ರಾಮಾಂತರ ರಂಗಮಂದಿರಗಳು ಆಶ್ರಯ ನೀಡಬೇಕು. ಒಳ್ಳೆಯ ಕಲಾವಿದರನ್ನು ಸರ್ಕಾರ ಗ್ರಾಮಾಂತರ ರಂಗಭೂಮಿಯ ಗೌರವ ಕಲಾವಿದರಾಗಿ ನಿಯಮಿಸಿದರೆ ಕಲಾವಿದನ ಜೀವನ ಹಾಗೂ ಕಲೆ ಎರಡೂ ಉಳಿಯುವುದು'–ಎಂದು ಬಸರಾಜುನಾಯ್ಕರು ಅಭಿಪ್ರಾಯ ಪಡುವರು. ಇವರಿಗೆ ಯಾವುದೇ ಪ್ರಶಸ್ತಿ ದೊರಕಿರುವುದಿಲ್ಲ. ಇವರಿಗೆ ಸರ್ಕಾರದಿಂದ ಮಾಸಾಶನ ದೊರೆಯುತ್ತಿದೆ.



## ನಾಗಣ್ಣಾಚಾರ್ಯ

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಮಧುಗಿರಿ ಕೊಪ್ಪಲಿನ ನಾಗಣ್ಣಾಚಾರ್ಯ ರಂಗಭೂಮಿ ಕಲಾವಿದರು. ತಂದೆ ವಿಷಕಂಠಾಚಾರಿ, ತಾಯಿ ಪುಟ್ಟಮ್ಮಣ್ಣಮ್ಮ. ಜನನ 1955 ಜೂನ್ 03, ಗುರು ಶಾಮಣ್ಣಾಚಾರ್ಯ.

ನಾಗಣ್ಣಾಚಾರ್ಯರು ಗುರು ಶಾಮಣ್ಣಾಚಾರ್ಯರಿಂದ ನಟನೆ, ರಂಗಗೀತೆಗಳು ಮತ್ತು ನಾಟಕ ನಿರ್ದೇಶನವನ್ನು ಕಲಿತರು. ಬಾಲ್ಯದಿಂದಲೂ ರಂಗಭೂಮಿಯ ಬಗ್ಗೆ ಆಸಕ್ತಿ ಇತ್ತು. ಮುಂದೆ ಅದೇ ಜೀವನೋಪಾಯಕ್ಕೆ ಮಾರ್ಗವೂ ಆಯಿತು.

ಹುಣಸೂರು ತಾಲ್ಲೂಕಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಾಟಕ ನಿರ್ದೇಶನವನ್ನು ಮಾಡುವ ಮೂಲಕ ನಾಗಣ್ಣಾಚಾರ್ಯರು ಸಕ್ರಿಯರಾಗಿರುವರು. ಸೂಕ್ತ ಅನುಕೂಲ ಹಾಗೂ ಪ್ರೋತ್ಸಾಹ ದೊರೆತಿದ್ದರೆ ಏನಾದರೂ ವಿಶೇಷವಾದದ್ದನ್ನು ಸಾಧಿಸುತ್ತಿದ್ದೆ ಎಂದು ನಾಗಣ್ಣಾಚಾರ್ಯರು ಅಭಿಪ್ರಾಯ ಪಡುವರು.

ನಾಟಕದ ಗೀಳಿಗೆ ಬಿದ್ದು ಕರ್ನಾಟಕಾದ್ಯಂತ ನಾಟಕ ಕಂಪನಿಗಳಲ್ಲಿ ಕೆಲಸ ಮಾಡಿದ್ದೂ ಉಂಟು. ಗ್ರಾಮಾಂತರ ಪ್ರತಿಭೆಗಳಿಗೆ ಸೂಕ್ತ ಅವಕಾಶ ದೊರೆತರೆ ಗ್ರಾಮೀಣ ರಂಗಭೂಮಿ ಇನ್ನಷ್ಟು ಸಮೃದ್ಧವಾಗಿ ಬೆಳೆಯುತ್ತದೆ ಎಂದು ಇವರು ಅಭಿಪ್ರಾಯ ಪಡುವರು. ಕಲೆ ಉಳಿಯಬೇಕಾದರೆ ಸರ್ಕಾರ ವಿಶೇಷ ಯೋಜನೆಗಳ ಮೂಲಕ ಕಲಾವಿದರಿಗೆ ಸೂಕ್ತವಾದ ಸವಲತ್ತುಗಳನ್ನು ನಾಗಣ್ಣಾಚಾರ್ಯರು ಅಭಿಪ್ರಾಯ ಪಡುವರು.

# ಅನುಬಂಧ–1

1. ಚೇನಿದುಡಿ ನೃತ್ಯ
2. ಕಂಸಾಳೆ
3. ಮರಗಾಲು ಬೀಸುಕಂಸಾಳೆ
4. ಬೀಸುಕಂಸಾಳೆ ನೃತ್ಯ
5. ತತ್ತ್ವದ ಪದಗಳು
6. ನಂದಿಧ್ವಜ
7. ಪೂಜಾಕುಣಿತ
8. ಕೋತಿಕುಣಿತ
9. ಕೋಲಾಟ
10. ಹುಲಿಕುಣಿತ
11. ತಂಬೂರಿಯವರು
12. ವೀರಗಾಸೆ
13. ವೀರಭದ್ರಕುಣಿತ
14. ಸೂತ್ರದ ಗೊಂಬೆಯಾಟ
15. ಗಾರುಡಿಗೊಂಬೆ

## ಚೀನಿದುಡಿ ನೃತ್ಯ

ಎರವರು ಆದಿವಾಸಿ ಬುಡಕಟ್ಟು ಜನಾಂಗ. ಕರ್ನಾಟಕ, ಕೇರಳ, ಮತ್ತು ತಮಿಳುನಾಡು ರಾಜ್ಯಗಳ ಗಡಿ ಪ್ರದೇಶಗಳಲ್ಲಿ ಇವರು ವಾಸಿಸುವರು. ಇತ್ತೀಚೆಗೆ ಸರ್ಕಾರದ ಪುನರ್ವಸತಿ ಯೋಜನೆಯಿಂದಾಗಿ ನಗರ ಭಾಗಗಳಿಗೆ ಬಂದು ವಾಸಿಸಲು ಪ್ರಾರಂಭಿಸಿರುವ ಎರವರನ್ನು ಕಾಣಬಹುದು. ಕೊಡಗಿನ ಆದಿವಾಸಿಗಳಲ್ಲಿ ಎರವರು ಹೆಚ್ಚಾಗಿರುವರು. ಇವರಲ್ಲಿ ನಾಲ್ಕು ಪಂಗಡಗಳಿವೆ; ಪಂಜರಿ, ಪಣಿಯ, ಕಾಕೆ(ಕಾಗೆ), ಬಡಗ(ಬಡವ).

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಡಿ.ಬಿ.ಕುಪ್ಪೆ ಗ್ರಾಮದ ಸಮೀಪದ ಗೂಳೂರು ಹಾಡಿಯ ಹಣ್ಣಿನ ತೋಟ ಹಾಗೂ ಸಮೀಪದ ಹಾಡಿಗಳಲ್ಲಿ ಎರವರ ಚೀನಿದುಡಿ ನೃತ್ಯ ತಂಡಗಳಿವೆ. ಎರವ ಭಾಷೆಯಲ್ಲಿ ಹಾಡುವರು. ಎರವ ಭಾಷೆ ಮೌಖಿಕ ಪರಂಪರೆಯುಳ್ಳದ್ದು. ಇದಕ್ಕೆ ಲಿಪಿ ಇಲ್ಲ. ಎರವರ ಜನಪದ ಕುಣಿತದಲ್ಲಿ ಅವರದ್ದೇ ವಾದ್ಯಗಳ ಬಳಕೆ ಉಂಟು. ಚೀನಿ, ದುಡಿ, ಗೆಜ್ಜೆ, ಬುಂಡೆ, ಬೆತ್ತ ಮತ್ತು ಬಾಳನ್ನು ನೃತ್ಯ ಮಾಡುವಾಗ ಬಳಸುವರು. ನೃತ್ಯ ಮಾಡುವಾಗ ಕಟ್ಟಿ ಕುಣಿಯುವ ವಸ್ತುಗಳೂ ಉಂಟು. ಇಲ್ಲಿನ 33 ಹಾಡಿಗಳಲ್ಲಿ ಎರವರು ವಾಸಿಸುವರು.

ಹೆಗ್ಗಡದೇವಕೋಟೆಯ ಹಾಡಿಗಳಲ್ಲಿರುವ ಎರವರ ವಿಶಿಷ್ಟ ಆಚರಣೆ, ಸಂಪ್ರದಾಯ ಮತ್ತು ಜನಪದ ಕಲೆ, ನೃತ್ಯಗಳ ದಾಖಲೆಗಳು ಇಲ್ಲ.

ಇತ್ತೀಚೆಗೆ ಮಾತ್ರ ಎರವರು ಸಾರ್ವಜನಿಕವಾಗಿ ತಮ್ಮ ಚೀನಿದುಡಿ ನೃತ್ಯವನ್ನು ಪ್ರದರ್ಶಿಸುತ್ತಿರುವರು. ಮದುವೆ ಮತ್ತು ವಿಶೇಷ ದಿನಗಳಲ್ಲಿ ಎರವರು ತಮ್ಮ ಚೀನಿದುಡಿ ನೃತ್ಯವನ್ನು ಮಾಡುತ್ತಿರುವರು. ಈ ನೃತ್ಯವು ಹಾಡು ಕುಣಿತವನ್ನು ಒಳಗೊಂಡಿರುವುದು.

## ಕಂಸಾಳೆ

ಕಂಸಾಳೆ ಒಂದು ಜನಪದ ಧಾರ್ಮಿಕ ತಾಳ. ಮಲೆ ಮಾದೇಶ್ವರನ ಭಕ್ತರಾದ ದೇವರ ಗುಡ್ಡರು ಈ ಕಂಚಿನ ತಾಳಗಳನ್ನು ಬಳಸುವರು. ದೇವರ ಗುಡ್ಡರು ಧಾರ್ಮಿಕ ವೃತ್ತಿಗಾಯಕರು. ಕಂಸ್ಯಕಾಲ ಎಂಬುದರ ತದ್ಭವ ರೂಪವೆ ಕಂಸಾಳೆ. ಕಂಸಾಳೆಗಳು ದೇವರಗುಡ್ಡರಿಗೆ ಬಿರುದು. ದೇವರ ಗುಡ್ಡರು ಕಂಸಾಳೆಯನ್ನು ಭಿಕ್ಷಾಪಾತ್ರೆಯಾಗಿಯೂ ಬಳಸುವರು.

ದೇವರಗುಡ್ಡರು ಮೇಳವನ್ನು ನಡೆಸಲು, ಭಿಕ್ಷಾಟನೆ ಮಾಡುವಾಗ, ಯಾತ್ರೆ ಮಾಡುವಾಗ, ಮತ್ತು ಬೀಸುಕಂಸಾಳೆ ನೃತ್ಯದಲ್ಲಿ ಹಾಡಲೂ ಕುಣಿಯಲೂ ಕಂಸಾಳೆಯನ್ನು ಬಳಸುವರು. ಮೇಳ ನಡೆಸುವಾಗ ಏಕತಾರಿ ಮತ್ತು ದಮ್ಮಡಿಗಳನ್ನು ಹಿಮ್ಮೇಳವಾಗಿ ಬಳಸುವರು.

ದೇವರಗುಡ್ಡರು ಪ್ರಧಾನವಾಗಿ ಮಲೆಯ ಮಾದೇಶ್ವರ ಎಂಬ ಜನಪದ ಮಹಾಕಾವ್ಯವನ್ನು ಹಾಡುವರು. ಇದಲ್ಲದೆ ಪಿರಿಯಾಪಟ್ಟಣದ ಕಾಳಗ, ಸಾರಂಗಧರ, ಚೆನ್ನಿಗರಾಮ, ಘನಪತಿರಾಯ, ಬಿಳಿಗಿರಿರಂಗಸ್ವಾಮಿ, ಬೆಟ್ಟದ ಚಾಮುಂಡಿ, ಬಾಲನಾಗಮ್ಮ, ರಾಜಾವಿಕ್ರಮ, ಮುಡುಕ್ತೊರೆ ಮಲ್ಲಪ್ಪ, ಬಸವಪುರಾಣ, ಕೋಳೂರು ಕೊಡಗೂಸು, ಬಂಜೆ ಹೊನ್ನಮ್ಮ ಮುಂತಾದ ಕಾವ್ಯಗಳನ್ನು ಹಾಡುವರು. ಇವುಗಳನ್ನು ಲೌಕಿಕ, ಧಾರ್ಮಿಕ ಮತ್ತು ಐತಿಹಾಸಿಕ ಕಾವ್ಯಗಳೆಂದು ವಿಭಜಿಸಬಹುದು. ನೀಲಗಾರರ ಧಾರ್ಮಿಕ ಕಥೆಯಾದ ಮಂಟೇಸ್ವಾಮಿ ಕಾವ್ಯವನ್ನು ಹಾಡುವರು.

## ಮರಗಾಲು ಬೀಸುಕಂಸಾಳೆ

ಮರಗಾಲು ಬೀಸುಕಂಸಾಳೆ ಮರದ ಕಾಲುಗಳನ್ನು ಕಟ್ಟಿಕೊಂಡು ನರ್ತಿಸುವ ಜನಪದ ಕಲೆಯಾಗಿದೆ. ಬೀಸುಕಂಸಾಳೆಯ ಎಲ್ಲಾ ರೀತಿಗಳನ್ನು ಮರಗಾಲು ಬೀಸುಕಂಸಾಳೆ ಒಳಗೊಂಡಿದೆ. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಬೀಸುಕಂಸಾಳೆ ಕಲಾವಿದರು ಮತ್ತು ಮರಗಾಲು ಬೀಸುಕಂಸಾಳೆ ಕಂಸಾಳೆಯ ಕಲಾವಿದರು ಒಂದೇ ಗುಂಪಿನಲ್ಲಿ ಬರುವರು. ಇತ್ತೀಚೆಗೆ ಯುವಕರು ಮರಗಾಲು ಬೀಸುಕಂಸಾಳೆಯನ್ನು ಹೆಚ್ಚು ಆಸಕ್ತರಾಗಿ ಕಲಿಯುತ್ತಿರುವುದು.

## ಬೀಸುಕಂಸಾಳೆ ನೃತ್ಯ

ದೇವರಗುಡ್ಡರ ವಿಶಿಷ್ಟ ನೃತ್ಯವೇ ಬೀಸುಕಂಸಾಳೆ. ಇದು ಕರ್ನಾಟಕದ ಜನಪದ ನೃತ್ಯಗಳಲ್ಲಿ ಅಪೂರ್ವವಾದದ್ದು. ಇಡೀ ನೃತ್ಯ ಬಿರುಸು ಸಮರ ಕಲೆಯಂತಿರುತ್ತದೆ. ಕಂಸಾಳೆ ನೃತ್ಯದಲ್ಲಿ ಇಬ್ಬರು ಅಥವಾ ಎಂಟು ಜನರವರೆಗೂ ಪಾಲ್ಗೊಳ್ಳಬಹುದು. ಇತ್ತೀಚೆಗೆ ಏಕವ್ಯಕ್ತಿ ಪ್ರದರ್ಶನವನ್ನು ಕೂಡ ನೀಡುತ್ತಾರೆ. ಬೀಸುಕಂಸಾಳೆ ನೃತ್ಯದಲ್ಲಿ ತಾಲ್‌ಬಟ್ಲು, ತಟ್‌ಬಟ್ಲು ಎಂಬ ಬೇರೆ ಬೇರೆ ಬಗೆಯ ನೃತ್ಯಗಳಿವೆ.

"ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ ಮುದ್ದು ಲಿಂಗ ಬಾ ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುವರು. ಒಬ್ಬ ಗುಡ್ಡ

ಕಂಸಾಳೆಯನ್ನು ಆ ತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುವನು. ತಲೆಯ ಮೇಲೆ, ಬೆನ್ನಹಿಂದೆ, ಕಾಲಕೆಳಗೆ, ಕುಳಿತು, ನಿಂತು, ಬಾಗಿಬಳುಕಿ, ತೀವ್ರಗತಿಯಲ್ಲಿ ನರ್ತಿಸುವ ಬಗೆ ಆಶ್ಚರ್ಯಕರವಾದದ್ದು, ಅದ್ಭುತವಾದುದು. ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದೂ ಉಂಟು. ಒಬ್ಬರ ಕಂಸಾಳೆಗೆ ಇನ್ನೊಬ್ಬರ ಕಂಸಾಳೆಯನ್ನು ಕುಟ್ಟುತ್ತ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ". (ಕನ್ನಡ ವಿಷಯ ವಿಶ್ವಕೋಶ ಜಾನಪದ)

ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕಂಸಾಳೆ ಕಲಾವಿದರನ್ನು ಕಾಣಬಹುದು. ಈಗ ಹವ್ಯಾಸಿ ಕಂಸಾಳೆ ಕಲಾವಿದರೂ ಇರುವರು; ಮಹಿಳೆಯರೂ ಬೀಸುಕಂಸಾಳೆಯನ್ನು ಕಲಿತು ನೃತ್ಯ ಮಾಡುವುದೂ ಉಂಟು.

ಮಹದೇಶ್ವರನ ಬೆಟ್ಟದಲ್ಲಿ ಜಾತ್ರೆ ನಡೆಯುವಾಗ ಸಾಮಾನ್ಯವಾಗಿ ಎಲ್ಲಾ ದೇವರ ಗುಡ್ಡರು ನೆರೆಯುತ್ತಾರೆ. ಅಲ್ಲಿ ನಾವು ಕಂಸಾಳೆ ಪ್ರದರ್ಶನಗಳನ್ನು ಕಾಣಬಹುದು.

## ತತ್ತ್ವ ಪದಗಳು

ಕನ್ನಡದಲ್ಲಿ ತತ್ತ್ವಪದಗಳು ಸು. ಹದಿನೈದನೆಯ ಶತಮಾನದಲ್ಲಿ ಪ್ರಚಲಿತವಾದವು. ಅನೇಕ ಧರ್ಮ, ಮತ, ಜ್ಞಾನ, ಜಿಜ್ಞಾಸೆ ಹಾಗೂ ನೀತಿ ಬೋಧಕವಾದ ಸಂಗತಿಗಳು ತತ್ತ್ವದ ಪದಗಳಲ್ಲಿರುವುದು. ಸಂಸ್ಕೃತ ಸಾಹಿತ್ಯದಲ್ಲಿ ತತ್ತ್ವವಿಚಾರಗಳು ಕನ್ನಡದಲ್ಲಿ ಮೂಡಿದವು. ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳು ತತ್ತ್ವದ ಪದಗಳಲ್ಲಿ ಸರಳವಾಗಿ ಹೇಳಲ್ಪಟ್ಟಿವೆ. ಜೈನಧರ್ಮದ ತಾತ್ತ್ವಿಕ ವಿಚಾರಗಳು, ರತ್ನಾಕರ ವರ್ಣಿಯ ಅಣ್ಣನ ಪದಗಳು, ಆಧುನಿಕ ಕನ್ನಡ ಕವಿಗಳ ತತ್ತ್ವವಿಚಾರಗಳು ತತ್ತ್ವದ ಪದಗಳಲ್ಲಿ ಮೂಡಿಬಂದಿದೆ. ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ, ಚಿದಾನಂದವಧೂತ, ಮುಪ್ಪಿನಷಡಕ್ಷರಿ, ಬಾಲಲೀಲಾ ಮಹಂತ ಶಿವಯೋಗಿ ಮುಂತಾದವರ ತತ್ತ್ವವಿಚಾರಗಳು ಶ್ರೀಸಾಮಾನ್ಯರ ಮೌಖಿಕ ಪರಂಪರೆಯಲ್ಲಿ ಹಾಸುಹೊಕ್ಕಾಗಿದೆ.

19–20ನೆಯ ಶತಮಾನದಲ್ಲಿ ತತ್ತ್ವದ ಪದಗಳಿಗೆ ವಿಶೇಷ ಪ್ರಾತಿನಿಧ್ಯತೆ ದೊರೆಯಿತು. ಕಡಕೋಳ ಮಡಿವಾಳಪ್ಪನವರ ಪದಗಳು ತತ್ತ್ವದ ಹೂರಣಗಳಾಗಿದ್ದವು.

ವೃತ್ತಿಗಾಯಕರಾದ ದಂಡಿಗಿದಾಸರು, ಹೊಲಿದಾಸರು, ಗೊಂದಲಿಗರು ಮುಂತಾದವರು ತತ್ತ್ವದ ಪದಗಳ ರೂವಾರಿಗಳು. ಇತ್ತೀಚಿನ ದಿನಗಳಲ್ಲಿ

ಸದಾನಂದಯೋಗಿ, ಭಟಕಳ ಅಪ್ಪಯ್ಯ, ರಾಯಚೂರಿನ ಕಡಕೋಳ ಮಡಿವಾಳಪ್ಪ, ರಾಯಚೂರಿನ ಹಸನ ಸಾಹೇಬ, ಬಿಜಾಪುರದ ಹಲಸಂಗಿ ಖಾಜಾಸಾಹೇಬ, ಗೋಕಾವಿಯ ಸಾತು ಕ್ಯಾಮಣ್ಣ, ಹಲಸಂಗಿಯವರು, ಪರಮಾನಂದವಾಡಿಗಳು, ಬೀಳೂರಕವಿ, ಶಿಶುವಿನಹಾಳದ ಶರೀಫರು, ಗೋವಿಂದಭಟ್ಟರು, ಪುರಂದರದಾಸ, ಕನಕದಾಸ, ವಿಜಯದಾಸರು–ಮುಂತಾದವರು ತತ್ತ್ವಪದಗಳ ರೂವಾರಿಗಳು.

ವೀರಶೈವರಲ್ಲಿಯೂ ತತ್ತ್ವದ ಪದಗಳನ್ನು ಹಾಡುವವರಿರುವರು. ಕಂಬಿಯವರು, ಸಾರುವ ಅಯ್ಯಂದಿರು, ಕರತಾಲದವರು, ಬಹುರೂಪಿಗಳು ತತ್ತ್ವದ ಪದಗಳನ್ನು ಹಾಡುವರು. ಇತ್ತೀಚೆಗೆ ತತ್ತ್ವದ ಪದಗಳು ಗ್ರಂಥರೂಪದಲ್ಲಿಯೂ ದೊರಕುತ್ತವೆ.

## ನಂದಿಧ್ವಜ

ಶೈವಸಂಪ್ರದಾಯ ನೃತ್ಯಗಳಲ್ಲಿ ಮುಖ್ಯವಾದದ್ದು ನಂದಿಧ್ವಜ ಕುಣಿತ. ಇದಕ್ಕೆ ನಂದಿಕಂಬ, ನಂದಿಧ್ವಜ ಮತ್ತು ನಂದಿಕೋಲು ಎಂಬ ಹೆಸರುಗಳಿವೆ. ಸುಮಾರು 15 ರಿಂದ 20 ಅಡಿಯ ಚೆನ್ನಾಗಿ ಬಲಿತ ಬಿದಿರುಗಳನ್ನು ನಂದಿಕಂಬ ಮಾಡಲು ಬಳಸುವರು. ತಳ ಭಾಗದಿಂದ ನಾಲ್ಕು ಅಡಿ ಎತ್ತರದಲ್ಲಿ ಹಿತ್ತಾಳೆಯಿಂದ ಮಾಡಿದ ನಕಾಶೆಯಿಂದ ಕೂಡಿದ ಮಂಟಪ ಇರುತ್ತದೆ. ಈ ಮಂಟಪದೊಳಗೆ ಹಿತ್ತಾಳೆನಂದಿ ವಿಗ್ರಹ ಇರುತ್ತದೆ. ಕೆಲವು ಕಡೆ ಲಿಂಗ ಮತ್ತು ಬಸವನ ವಿಗ್ರಹವನ್ನು ಇಡುವರು. ಅನಂತರ ಹರಡೆಗಳನ್ನು ಹಾಕುವರು. ಮಧ್ಯೆಮಧ್ಯೆ ಹಿತ್ತಾಳೆಯಿಂದ ಮಾಡಿದ ತಟ್ಟೆ, ತಟ್ಟೆಯ ಸುತ್ತ ರೆರುಗಂಟೆ ಅಥವಾ ಮಾವಿನ ಎಲೆ ಆಕಾರದ ಹಿತ್ತಾಳೆ ಎಲೆಗಳು ಇರುವವು. ಇದನ್ನು ಪ್ಯಾರಿ ಎನ್ನುವರು. ಹರಡೆ ಮತ್ತು ಪ್ಯಾಂಗತ ಜೋಡಣೆಯಾದ ನಂತರ ಕೆಂಪು ಅಥವಾ ಕಾವಿಬಣ್ಣ ಇಲ್ಲವೆ ಕೇಸರಿ ಬಣ್ಣದ ದೊಡ್ಡ ಧ್ವಜವನ್ನು ಗೊಂಡೆಗಳು ಮತ್ತು ಕುಚ್ಚುಗಳಿಂದ ಅಲಂಕರಿಸುತ್ತಾರೆ. ಧ್ವಜ ಮತ್ತು ಗೊಂಡೆ ಕುಚ್ಚುಗಳನ್ನು ರೇಷ್ಮೆಯಿಂದ ಮಾಡಿರುತ್ತಾರೆ. ತುತ್ತತುದಿಯಲ್ಲಿ ಹಿತ್ತಾಳೆ ಅಥವಾ ಬೆಳ್ಳಿಯ ಛತ್ರಿಯಿಂದ ಅಲಂಕರಿಸುತ್ತಾರೆ.

ನಂದಿಕಂಬ ಹೊತ್ತು ಕುಣಿಯುವವರು ಹೆಗಲಿಗೆ ನೇತು ಹಾಕಿಕೊಳ್ಳುವ ಬಟ್ಟೆಯಿಂದ ಮಾಡಿದ ಒಂದು ಅಡ್ಡಪಟ್ಟಿಯ ಕೊನೆಯಲ್ಲಿ ಕೊಳವೆಯಾಕಾರದ ಪಟ್ಟಿಕಲ್ಲಿ ಅಥವಾ ನಂದಿಕಲ್ಲಿಯಲ್ಲಿ ನಂದಿಕಂಬದ ತಳಭಾಗವನ್ನು ಕೂರಿಸುವರು. ಅನಂತರ ಅದನ್ನು ಹೊತ್ತು ಕುಣಿಯುವರು.

ನಂದಿಕಂಬದ ತುದಿಯಿಂದ ಇಳಿಬಿಟ್ಟ ಮೂರು ಹಗ್ಗಗಳನ್ನು ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹಿಡಿದಿರುವರು; ಇದು ಕಂಬದ ಸಮತೋಲನವನ್ನು ಕಾಪಾಡುವುದು.

ನಂದಿಕಂಬದ ಕುಣಿತಕ್ಕೆ ಓಲಗ, ತಮಟೆ, ಕರಡೆ ವಾದ್ಯಗಳನ್ನು ಬಳಸುವರು. ಒಂಟಿ ಕಂಬ ಮತ್ತು ಜೋಡಿ ಕಂಬಗಳ ಕುಣಿತ ಉಂಟು. ನಂದಿಕಂಬವನ್ನು ಹೊತ್ತು ಒಂದನೆಯ ಕಾಲ ಅಂದರೆ ಕಿರುಹೆಜ್ಜೆ, ಎರಡನೆಯ ಕಾಲ ಅಂದರೆ ಸ್ವಲ್ಪ ದೊಡ್ಡ ಹೆಜ್ಜೆ, ಮೂರನೆಯ ಕಾಲ ಅಂದರೆ ದೊಡ್ಡಹೆಜ್ಜೆ, ಇದು ಕುಣಿತದ ಕೊನೆ. ನಂದಿಕಂಬ ಕೆಳಕ್ಕೆ ಬಿದ್ದರೆ ಊರಿಗೆ ಅಪಶಕುನ ಎಂಬ ನಂಬಿಕೆ ಇರುವುದರಿಂದ ಕುಣಿಯುವಾಗ ತುಂಬ ಎಚ್ಚರವಹಿಸುವರು. ನಂದಿಕಂಬ ಕುಣಿಯುವ ವ್ಯಕ್ತಿಗೆ ಯಾವ ನಿರ್ದಿಷ್ಟವಾದ ವೇಷಭೂಷಣಗಳಿಲ್ಲ ಸಾಮಾನ್ಯವಾಗಿ ಕಚ್ಚೆ ಪಂಚೆ, ಬಿಳಿ ಜುಬ್ಬಾ ಧರಿಸುವರು.

ನಂದಿಕಂಬ ಕುಣಿತವನ್ನು ದೇವರ ಉತ್ಸವ, ಸ್ವಾಮಿಗಳ ಮೆರವಣಿಗೆ, ಮದುವೆ, ಗೃಹಪ್ರವೇಶ ಮುಂತಾದ ಶುಭ ಸಂದರ್ಭಗಳಲ್ಲಿ ಮಾತ್ರ ಬಳಸುವರು.

ಪ್ರಸಿದ್ಧ ಮೈಸೂರು ದಸರೆಯಲ್ಲಿ ಜಂಬೂಸವಾರಿ ಮೆರವಣಿಗೆ ಹೊರಡುವ ಮುನ್ನ ಸಾಂಪ್ರದಾಯಿಕವಾಗಿ ನಂದಿಕಂಬಕ್ಕೆ ಮೊದಲು ಪೂಜೆಯನ್ನು ಸಲ್ಲಿಸುವರು.

ನಂದಿಕಂಬವನ್ನು ಹಿಡಿದು ಕುಣಿಯುವಾಗ ಹೆಗಲ ಮೇಲೆ ಒಬ್ಬೊಬರನ್ನು ನಿಲ್ಲಿಸಿಕೊಂಡು ಕುಣಿಯುವುದೂ ಉಂಟು. ಮೈಸೂರು ಜಿಲ್ಲೆಯ ನಂದಿಕಂಬಗಳು ಅಲಂಕಾರದಿಂದಾಗಿ ವಿಶಿಷ್ಟವೆನಿಸಿವೆ.

## ಪೂಜಾಕುಣಿತ

ಪೂಜಾಕುಣಿತ ಒಂದು ಜನಪದ ಧಾರ್ಮಿಕ ನೃತ್ಯ. ಇದು ಕರ್ನಾಟಕ ರಾಜ್ಯದ ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಪ್ರಚಲಿತವಾಗಿದೆ. ಪೂಜಾಕುಣಿತಕ್ಕೆ ಮುಂಚಿತವಾಗಿ ತಳಿ ಕಟ್ಟುವುದು, ಪೂಜೆಕಟ್ಟುವುದು ಎಂಬ ಎರಡು ವಿಧಾನಗಳಿವೆ. ಬಿದಿರು ಅಥವಾ ಅಡಕೆ ಮರಗಳಿಂದ ತಳಿಯನ್ನು ಕಟ್ಟುವರು. ತಳಭಾಗ ಮತ್ತು ಮೇಲುಭಾಗಗಳಲ್ಲಿ ಎರಡು ಬಿದಿರಿನ ಅಥವಾ ಅಡಕೆಯ ದುಂಡಾದ ಬೊಂಬುಗಳನ್ನು ಇಡುವರು. ಇವುಗಳ ಎರಡೂ ಬದಿಗಳಲ್ಲಿ ಒಂದೊಂದು ಅಡಕೆಯ ಅಥವಾ ಬಿದಿರು ಬೊಂಬನ್ನು ತಳ ಮತ್ತು ಮೇಲುಭಾಗದಲ್ಲಿರುವ ದುಂಡು ಬೊಂಬುಗಳ

ನಡುವೆ ಹಾಯಿಸಿ ಕಟ್ಟುವರು. ಅನಂತರ ಅಡ್ಡಲಾಗಿ ಮತ್ತು ನೇರವಾಗಿ ಒಟ್ಟು ಏಳು ಅಥವಾ ಒಂಬತ್ತು ಅಡಕೆ ಅಥವಾ ಬಿದಿರು ಬೊಂಬುಗಳನ್ನು ಬಿಗಿದುಕಟ್ಟುವರು. ಮಧ್ಯದ ಬೊಂಬು ತಳದಲ್ಲಿ ಮತ್ತು ಮೇಲುಭಾಗದಲ್ಲಿ ಉದ್ದವಾಗಿರುವುದು. ತಳದಿಂದ ಕೊಂಚ ಓರೆಯಾಗಿ ದುಂಡಾದ ಒಂದು ಬೊಂಬು ಬಲದಿಂದ ಎಡಕ್ಕೆ, ಮತ್ತೊಂದು ಎಡದಿಂದ ಬಲಕ್ಕೆ 'X' ಆಕಾರಕ್ಕೆ ಬಾಗಿರುವುದು. ತಳಿಯ ಮಧ್ಯದಲ್ಲಿ ಒಂದು ಸಣ್ಣ ಮಣೆ ಕಟ್ಟುವರು.

ಏಳು ಅಥವಾ ಒಂಬತ್ತು ಕಳಸಗಳ ಪೂಜೆ ಕಟ್ಟುವರು. ತಳಿಗೆ ಮೊದಲು ಕಳಸಗಳನ್ನು ಜೋಡಿಸಿ ಅನಂತರ ಮಣೆಯ ಮೇಲೆ ಬೆಳ್ಳಿಯ ಕುದುರೆಯನ್ನು ನಿಲ್ಲಿಸುವರು. ಕುದುರೆಯ ಮೇಲೆ ದೇವರ ಉತ್ಸವ ಮೂರ್ತಿಯನ್ನು ಕೂರಿಸುತ್ತಾರೆ. ವಿವಿಧ ವರ್ಣಗಳ ವಸ್ತ್ರಗಳಿಂದ ಮತ್ತು ಒಡವೆಗಳಿಂದ ತಳಿಯನ್ನು ಅಲಂಕರಿಸುವರು. ದೇವರ ಮೇಲುಭಾಗದಲ್ಲಿ ನರಸಿಂಹಾವತಾರದ ಪ್ರಭಾವಳಿಯನ್ನು ಇಡುವರು. ನಂತರದ್ದು ಹೂವಿನ ಅಲಂಕಾರ. ಹೀಗೆ ಅಲಂಕೃತವಾದ ಕಳಸಗಳನ್ನೇ 'ಪೂಜೆ' ಎಂದು ಕರೆಯುವರು.

ಪೂಜೆಯನ್ನು ದೇವರಗುಡ್ಡ ಹೊರುವನು. ದೇವರಗುಡ್ಡನು ತಲೆಗೆ ದಪ್ಪವಾದ ಪೇಟ, ನಡುವಿಗೆ ವಸ್ತ್ರದ ನಡುಪಟ್ಟಿ, ಕಚ್ಚೆ ಹಾಗೂ ಕಾಲಿಗೆ ಗೆಜ್ಜೆಯನ್ನು ಧರಿಸುವನು. ಅನಂತರ ಪೂಜೆಯನ್ನು ತಲೆಯ ಮೇಲೆ ಹೊತ್ತು ತಮಟೆ, ನಗಾರಿಗಳ ಬಡಿತಕ್ಕೆ ತಕ್ಕಂತೆ ಗತ್ತಿನೊಂದಿಗೆ ಕುಣಿಯುವರು. ಪೂಜಾ ಕುಣಿತದ ನಿಯಮಗಳು ಕುಣಿಯುವವನನ್ನು ಅವಲಂಬಿಸಿರುವುದು. ಮುಂದೆ ಹೋಗಿ ಹಿಂದೆ ಬರುವ, ಗಸ್ತು ಹೊಡೆಯುವ, ಸುತ್ತು ಹೆಜ್ಜೆ ಇಡುವುದು ಪೂಜೆ ಹೊತ್ತವರನ್ನು ಅವಲಂಬಿಸುತ್ತದೆ. ಪೂಜಾಕುಣಿತ ವೈವಿಧ್ಯತೆಯಿಂದ ಕೂಡಿದೆ. ಹೆಗಲ ಮೇಲೆ ಹೊತ್ತು ಉತ್ಸಾಹದಿಂದ ಕುಣಿಯುವರು, ಪೂಜೆ ಹಿಡಿದ ಕೈಗಳನ್ನು ಬಿಟ್ಟು ಕುಣಿಯುವುದು, ಕುಣಿಯುತ್ತಿರುವ ಹಾಗೆಯೇ ತಲೆಯ ಮೇಲಿಂದ ಹೆಗಲ ಮೇಲಕ್ಕೆ ತರುವುದು, ಕುಳಿತು ಕುಣಿಯುತ್ತ ಮತ್ತೆ ತಲೆಯ ಮೇಲಕ್ಕೆ ತರುವುದು, ಮುಂದೆ ನೆಲದ ಮೇಲೆ ಮಲಗುವಾಗ ಭುಜದ ಮೇಲೆ ತಂದು ಹಣೆಯ ಮೇಲೆ ಹಾಗೂ ಎದೆಯ ಮೇಲಿಟ್ಟು ಕುಣಿಸುವರು.

ಅನುಭವ, ದೈವಭಕ್ತಿ ಮತ್ತು ಶ್ರದ್ಧೆಗಳಿಗನುಗುಣವಾಗಿ ಕುಣಿತವನ್ನು ಆಕರ್ಷಕವಾಗಿಸಬಹುದು.

## ಕೋತಿ ಕುಣಿತ

ಕೋತಿಗಳನ್ನು ಪಳಗಿಸಿ ಕುಣಿಸುವುದೇ ಕೋತಿಕುಣಿತ. ಅಲೆಮಾರಿ ಜನಾಂಗದವರು ಕೋತಿಗಳನ್ನು ಪಳಗಿಸಿ ಕುಣಿಸುವರು. ಇವರು ಸಾಮಾನ್ಯವಾಗಿ ತೆಲುಗು ಭಾಷೆಯನ್ನು ಮಾತನಾಡುವರು. ಕೋತಿಯು ನೆಗೆಯುವುದು, ಹಗ್ಗದ ಮೇಲೆ ನಡೆಯುವುದು, ಪಟ್ಟಿ ಹೊರೆಯುವುದು, ಕುಣಿಯುವುದು, ಹಲ್ಲು ಕಿರಿಯುವುದು ಮುಂತಾದವುಗಳ ಮೂಲಕ ರಂಜಿಸುವುದು. ಕೋತಿಯ ಅಂಗಚೇಷ್ಟೆಗಳೇ ಕೋತಿ ಕುಣಿತದ ವೈಶಿಷ್ಟ್ಯ ಇಂದಿಗೂ ಕೋತಿ ಕುಣಿತದವರನ್ನು ಕಾಣಬಹುದು.

ಇತ್ತೀಚೆಗೆ ಪ್ರಾಣಿಗಳನ್ನು ಒತ್ತಾಯಪೂರ್ವಕವಾಗಿ ಮನೋರಂಜನೆಗೆ ಬಳಸಿಕೊಳ್ಳುವುದು ಕಾನೂನಿನ ಪ್ರಕಾರ ಅಪರಾಧ. ಆದ್ದರಿಂದ ಕೋತಿ ಕುಣಿತದವರು ತಾವೇ ಕೋತಿಯ ಹಾಗೆ ವೇಷಧರಿಸಿ ವಿವಿಧ ಅಂಗಚೇಷ್ಟೆಗಳ ಮೂಲಕ ರಂಜಿಸುತ್ತಾರೆ. ಈಗ ಈ ರೂಪಾಂತರ ಕೋತಿ ಕುಣಿತವನ್ನು ಕಾಣಬಹುದು.

ಕೋತಿಗಳನ್ನು ಪಳಗಿಸಿ ಕುಣಿಸುವವರ ಜೀವನಸ್ಥಿತಿ ಶೋಚನೀಯವಾಗಿದೆ. ಕೋತಿ ಕುಣಿತವನ್ನು ಅಪ್ಪಟ ಸಾಮಾಜಿಕ ಕುಣಿತವೆಂದು ಹೇಳುವರು. ಕೋತಿ ಕುಣಿತ ಕುರಿತು ಕೋಡಗನ ಮಾರಯ್ಯ ಚರಿತ್ರೆ ಎಂಬ ಕಾವ್ಯವಿದೆ.

## ಕೋಲಾಟ

ಜನಪದ ಮನರಂಜನೆಯ ಕಲೆ. ಕೋಲುಗಳ ಮೂಲಕ ಆಟ ಸಾಗುವುದೇ ಕೋಲಾಟ; ಇದು ಸಂಗೀತ ಮತ್ತು ನೃತ್ಯಗಳ ಸಮ್ಮಿಲನ. ಸುಗ್ಗಿಯ ಕಾಲ ಮತ್ತು ಹಬ್ಬಹರಿದಿನಗಳಲ್ಲಿ ಕೋಲಾಟವಾಡುವರು. ಗ್ರಾಮೀಣರು ಕೋಲಾಟ ಪ್ರಿಯರು.

ಕೋಲಾಟದಲ್ಲಿ ಎಂಟರಿಂದ ಇಪ್ಪತ್ನಾಲ್ಕು ಜನರವರೆಗೆ ಕೋಲು ಹುಯ್ಯುವ ಕಲಾವಿದರಿರುತ್ತಾರೆ. ವಿಶೇಷ ಸಂದರ್ಭದಲ್ಲಿ ಮೆರವಣಿಗೆ ನಡೆಯುವಾಗ ಇಡೀ ಊರು ಕೋಲಾಟದಲ್ಲಿ ಪಾಲ್ಗೊಳ್ಳುವುದು. ಕೋಲುಗಳನ್ನು ನೀರುಂಜಿ, ಬೈನ್, ಸೀಬೆ, ಕಾಲೆ ಮರಗಿಡಗಳಿಂದ ಮಾಡಿರುತ್ತಾರೆ. ಆಟವಾಡುವಾಗ ಗೆಜ್ಜೆ, ತಾಳ ಮತ್ತು ದಮ್ಮಡಿಗಳ ಬಳಕೆ ಉಂಟು. ಕೋಲಾಟದಲ್ಲಿ ಹಲವಾರು ಪ್ರಭೇದಗಳಿವೆ.

ಸುತ್ತಕೋಲು: ಆಟಗಾರರು ವೃತ್ತಾಕಾರದಲ್ಲಿ ಸುತ್ತುತ್ತ ತಮ್ಮೆರಡು ಕೈಗಳಲ್ಲಿನ ಕೋಲುಗಳಿಂದ ಒಂದಕ್ಕೊಂದಕ್ಕೆ ಹೊಡೆಯುತ್ತಿದ್ದರೆ ಇದಕ್ಕೆ ಸುತ್ತಕೋಲು ಎನ್ನುವರು. ಇದಕ್ಕೆ ವಿಶ್ರಾಂತಿಯ ಆಟವೆಂದೂ ಹೆಸರಿದೆ.

ಹಾರ್‌ಗಟಕು: ಕೋಲುಗಳು ಇತರರ ಕೋಲುಗಳಿಗೆ ಹೊಡೆದರೂ ಹೊಡೆಯದ ಹಾಗೆ ಹಾಡುತ್ತಿದ್ದರೆ. ಅದು ಹಾರ್‌ಗಟಕು ಎನಿಸಿಕೊಳ್ಳುತ್ತದೆ; ಆಟಗಾರರು ಸಾಮಾನ್ಯವಾಗಿ ಕೋಲುಗಳನ್ನು ತಲೆಯ ಮೇಲೆ ಎತ್ತಿ ಮತ್ತೊಬ್ಬರ ಕೋಲುಗಳಿಗೆ ಹೊಡೆಯುವರು.

ತೇರುಕೋಲು: ತೇರುಕೋಲಿನಲ್ಲಿ ಅರ್ಧ ಜನ ಹಿಂದಕ್ಕೂ ಉಳಿದರ್ಧ ಜನ ಅವರ ಮೇಲೆ ಬಾಗಿದಂತಿದ್ದು ತೇರಿನಂತೆ ಸಾಗುವುದರಿಂದ ಈ ಹೆಸರಿದೆ.

ಮನೆಕೋಲು: ಆಟಗಾರರು ಮನೆಯನ್ನು ದಾಟುತ್ತ ಕೋಲು ಕೊಡುವ ವಿಧಾನ ಮನೆಕೋಲಿನದು; ಪ್ರತಿಯೊಬ್ಬ ಆಟಗಾರನೂ ಒಬ್ಬೊಬ್ಬರನ್ನೇ ದಾಟಿ ಕೋಲುಕೊಡುವ ವಿಧಾನಕ್ಕೆ ಎರಡು ಮನೆಕೋಲೆಂದೂ ಕರೆಯುತ್ತಾರೆ.

ಜಡೆಕೋಲು: ಕೋಲಾದಲ್ಲಿ ವಿಶಿಷ್ಟ ಬಗೆ. ಆಟದ ಪ್ರಾರಂಭಕ್ಕೆ ಮೊದಲು ಹಗ್ಗಗಳಿಂದ ಜಡೆಯದಿಂಡನ್ನು ಹೆಣೆದು ಒಟ್ಟುಗೂಡಿಸಿ ಅವುಗಳಿಂದ ತುದಿಯ ಜಡೆ ಅಥವಾ ಹಗ್ಗಗಳನ್ನು ಬಿಡಿಯಾಗಿಯೇ ಬಿಡಬೇಕು. ಈ ಬಿಡಿ ಹಗ್ಗಗಳನ್ನೆಲ್ಲ ಸೇರಿಸಿದ ದಿಂಡುಜಡೆಯನ್ನು ಯಾವುದಾದರೊಂದು ಉಪಕರಣಕ್ಕೆ ಕಟ್ಟಿರುವರು. ಉಳಿದ ಬಿಡಿ ಹಗ್ಗಗಳನ್ನು ಕಲಾವಿದರು ಸೊಂಟಕ್ಕೆ ಕಟ್ಟಿರುವರು. ಕೋಲು ಹುಯ್ಯುವಾಗ ಬಿಡಿಹಗ್ಗಗಳೆಲ್ಲ ಸೇರಿಕೊಂಡು ಜಡೆಯ ಆಕಾರಕ್ಕೆ ತಿರುಗುವುದರಿಂದ ಇದಕ್ಕೆ ಜಡೆಕೋಲು ಎನ್ನುವರು.

ಗೀಜುಗನ ಕೋಲು: ಎರಡು ಕೈಗಳಲ್ಲೂ ಜೋಡಿಸಿಕೊಂಡಿರುವ ಕೋಲುಗಳನ್ನು ಎಡಕ್ಕೊಂದು ಬಾರಿ ಬಲಕ್ಕೊಂದು ಬಾರಿ ಕೊಟ್ಟು, ಮೂರನೆಯ ಏಟಿಗೆ ಎರಡು ಕೈಗಳನ್ನು ಮೇಲೆತ್ತಿಹೊಡೆದು ಬಲದಲ್ಲಿದ್ದವನು ಎಡಕ್ಕೆ ಎಡದಲ್ಲಿದ್ದವನು ಬಲಕ್ಕೆ ವೃತ್ತಾಕಾರದಲ್ಲಿ ಸುತ್ತುತ್ತಿರುವುದೇ ಗೀಜಗನಕೋಲು.

ಕಾಲುಸಂದಿನ ಕೋಲು: ಆಟಗಾರರಲ್ಲಿ ಇಬ್ಬಿಬ್ಬರು ಎದುರು ಬದುರು ನಿಂತುಕೊಳ್ಳಬೇಕು. ಪ್ರತಿಯೊಬ್ಬನೂ ಮೊದಲು ತನ್ನ ಎಡಗಾಲನ್ನು ಎತ್ತಿ ಎರಡು ಕೈಗಳ ಕೋಲುಗಳನ್ನು ಅಲ್ಲಿ ಬಡಿಯುವನು. ಅನಂತರ ಇದೇ ರೀತಿ ಬಲಗಾಲನ್ನು ಎತ್ತಿ ಬಡಿಯುವನು. ಎರಡು ಕಾಲುಗಳಲ್ಲೂ ಈ ರೀತಿ ಕೋಲು ಹುಯ್ದ ಮೇಲೆ ಮುಂದಕ್ಕೆ ನೆಗೆದು ಮತ್ತೊಬ್ಬನಿಗೆ ಕೋಲು ಕೊಡುವನು. ಇದೇ ರೀತಿ ಪುನರಾವರ್ತನೆ ಸಾಗಿ ಆಟ ನಡೆಯುತ್ತದೆ.

ಉಯ್ಯಾಲೆಯಾಟ (ಅ) ನಿಲ್‌ಕೋಲು: ಆಟದ ಜನರು ವೃತ್ತಾಕಾರವಾಗಿ ನಿಂತು ಎಡಕ್ಕೊಮ್ಮೆ ಬಲಕ್ಕೊಮ್ಮೆ ಕೋಲು ಕೊಡುವರು. ಅನಂತರ ಮಧ್ಯದಲ್ಲಿ ನಾಲ್ವರು ಎದುರೆದುರಾಗಿ, ಉಳಿದ ನಾಲ್ವರು ಅಕ್ಕಪಕ್ಕದಲ್ಲಿ ನಿಂತು ಕೋಲು ಕೊಡುವರು ಆಮೇಲೆ ಅಕ್ಕಪಕ್ಕದಲ್ಲಿ ಮಧ್ಯಕ್ಕೆ ಬರುವರು, ಮಧ್ಯದವರು ಅತ್ತಸರಿಯುವರು. ಇದೊಂದು ವೇಗದ ಆಟ. ಉಯ್ಯಾಲೆಯಂಥ ಚಲನೆ ಆಕರ್ಷಕವಾಗಿ ಕಂಡುಬರುವುದು. ಈ ಆಟಕ್ಕೆ ನಿಲ್‌ಕೋಲ್ ಎಂಬ ಹೆಸರೂ ಇರುವುದು.

ಸಮಭಾಗವಾಗಿ ನಿಂತ ಕೋಲಾಟಗಾರರು ಪ್ರಶ್ನಾರ್ಥಕವಾಗಿ ಸವಾಲ್-ಜವಾಬ್ ರೀತಿಯ ಹಾಡುಗಳನ್ನು ಹಾಡುತ್ತ ಪರಸ್ಪರ ಆಕರ್ಷಕವಾದ ಭಂಗಿಯಲ್ಲಿ ಅಟ್ಟಿಸಿಕೊಂಡು ಹೋಗುತ್ತಾರೆ. ಇದರಲ್ಲಿ ಕೋಲುಗಳು ಮೌನವಾಗಿದ್ದು ಹಾಡು ಮತ್ತು ನಡಿಗೆಯೇ ಪ್ರಧಾನ.

**ಕೊರವಂಜಿ ಕೋಲು:** ಇದನ್ನು ಕೋಲಾಟದ ಮುಕ್ತಾಯದ ಹಂತದಲ್ಲಿ ಹಾಡುವರು. ಇದರಲ್ಲಿ ಕೊರವಂಜಿ ವೇಷದ ಆಟಗಾರನನ್ನು ಮತ್ತೊಬ್ಬ ಹಿಡಿಯಲು ಹೋಗುವನು. ಕೋಲು ಹುಯ್ಯುತ್ತಿರುವ ಉಳಿದವರ ಮಧ್ಯದಲ್ಲಿ ಕೊರವಂಜಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವಳು. ಅವಳನ್ನು ಅಟ್ಟಿಸಿಕೊಂಡು ಹೋಗುತ್ತ ಕಡೆಗೊಮ್ಮೆ ಹಿಡಿಯುವನು. ಈ ಆಟದ ಅನಂತರ ಮಂಗಳ ಹಾಡುವರು.

ಕೋಲಾಟದ ಪದಗಳೂ ವಿಶಿಷ್ಟವಾದವು. ಬೇರೆ ಬೇರೆ ಸಂದರ್ಭಗಳಲ್ಲಿ ರಚಿತವಾದ ಪದಗಳೂ ಕೂಡ ಕೋಲಾಟಕ್ಕೆ ಸೇರ್ಪಡೆಗೊಂಡಿದೆ. ಇವು ಭಾವಗೀತಾತ್ಮಕ ಮತ್ತು ಕಥಾತ್ಮಕವಾಗಿರುವವು. ಈ ಕನ್ನಡದಲ್ಲಿ ಹಲವಾರು ಗ್ರಂಥಗಳು ಪ್ರಕಟವಾಗಿವೆ.

## ಹುಲಿಕುಣಿತ

ಹಲವು ಜನಾಂಗಗಳಿಗೆ ಹುಲಿ ಕುಲಸಂಕೇತವಾರುವುದು. ಹುಲಿಯನ್ನು ದೈವವೆಂದು ಆರಾಧಿಸುವ ಬುಡಕಟ್ಟುಗಳಿವೆ. ಬಳ್ಳಾರಿಜಿಲ್ಲೆಂಯ ಮುನಿರಾಬಾದ್(ಹುಲಿಗಿ)ನಲ್ಲಿ ಹುಲಿಗೆಮ್ಮ ಆರಾಧ್ಯ ದೈವವಾಗಿದೆ. ಕರಾವಳಿಯ ಮತ್ತು ಮಲೆನಾಡಿನ ಕೆಲವು ಬುಡಕಟ್ಟುಗಳಲ್ಲಿ ಹುಲಿಯ ಆರಾಧನೆ ಇದೆ. ಹುಲಿದೇವರ ಗುಡಿಗಳೂ ಉಂಟು. ನೇಪಾಳದ ಬಾಘುಜಾತ್ರೆಯಲ್ಲಿ ಹುಲಿವೇಷ ಹಾಕಿ ಕುಣಿಯುವರು.

## ತಂಬೂರಿಯವರು

ಕರ್ನಾಟಕದ ಜನಪದ ವೃತ್ತಿಗಾಯಕರಲ್ಲಿ ಒಬ್ಬರು. ಇವರು ಲೌಕಿಕ ಧಾರ್ಮಿಕವೆನ್ನದೆ ಎಲ್ಲವನ್ನು ಹಾಡುತ್ತಾರೆ. ಹಾಸನ, ಚಿಕ್ಕಮಗಳೂರು ಮತ್ತು ಉತ್ತರ ಕೊಡಗಾನ ಸುತ್ತಮುತ್ತ ಕಾಣಸಿಗುವರು.

ಇವರು ತಂಬೂರಿಯ ಜೊತೆಗೆ ಗಗ್ಗರ ಬಳಸುವರು; ಬಟ್ಟು ತಾಳ ಹಾಗೂ ಗುಮ್ಮಿಗಳನ್ನು ಬಳಸುವರು. ತಂಬೂರಿಯವರು ಇಪ್ಪತ್ತಕ್ಕೂ ಮೀರಿ ಪೌರಾಣಿಕ, ಐತಿಹಾಸಿಕ ಹಾಗೂ ಇತರ ಕಾವ್ಯಗಳನ್ನು ಹಾಡುವರು. ಜನಪದ ಕಥೆಗಳನ್ನು ಕಾವ್ಯವನ್ನಾಗಿಸಿಕೊಂಡು ಹಾಡುವರು. ಸತ್ಯಭೋಜರಾಜ, ರೌಡುಸಿದ್ಧಮ್ಮ, ಸರ್ಜಪ್ಪ ನಾಯಕ, ಲೋಹಿತ ಕುಮಾರ, ಬಸವಕುಮಾರ, ತಿರುಪತಿ ತಿಮ್ಮಪ್ಪ, ಅಂಜನಾದೇವಿಕಥೆ ಮೊದಲಾದವು.

ತಂಬೂರಿಯವರು ಹರಿಜನರ ಚಲವಾದಿ ಹಾಗೂ ಹಣತರು ಎಂಬ ಉಪಜಾತಿಗೆ ಸೇರಿದವರು. ಇವರ ಮನೆ ದೇವರು ಕರಿಯಮ್ಮ.

## ವೀರಗಾಸೆ

ಕರ್ನಾಟಕದ ಒಂದು ಜನಪದ ಕಲೆ. ಶೈವ ಸಂಪ್ರದಾಯದ ಧಾರ್ಮಿಕ ನೃತ್ಯವೂ ಆಗಿದೆ. ಇದರಲ್ಲಿ ಒಬ್ಬರಿಂದ ಮೂವತ್ತು ಮಂದಿಯವರೆಗೂ ಭಾಗವಹಿಸುವರು. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ಈ ನೃತ್ಯ ಪ್ರಚಲಿತವಾಗಿದ್ದು ಪಂಚವಾದ್ಯಗಳ ಬಳಕೆ ಇದೆ; ತಾಳ, ಶ್ರುತಿ, ಚಮಾಳ, ಓಲಗ ಅಥವಾ ಮೋರಿ ಕರಡೆವಾದ್ಯಗಳನ್ನು ಉಪಯೋಗಿಸುವರು.

ಪೌರಾಣಿಕ ಕಥೆಯ ಪ್ರಕಾರ ವೀರಭದ್ರನು ದಕ್ಷಬ್ರಹ್ಮನ ಯಾಗಶಾಲೆಯಲ್ಲಿ ತೋರಿದ ಪ್ರತಾಪದ ಪ್ರತೀಕವೇ ವೀರಗಾಸೆಕುಣಿತ.

ವೀರಗಾಸೆ ಕುಣಿತದವರು ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿನ ಅಥವಾ ನೀಲಿಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕಿವಿಯಲ್ಲಿ ಕುಂಡಲ, ಸೊಂಟಕ್ಕೆ ಸೊಂಟಪಟ್ಟಿ, ಕೈಯಲ್ಲಿ ಬಿಚ್ಚುಗತ್ತಿ, ಕಾಲಲ್ಲಿ ಗೆಜ್ಜೆ ಧರಿಸುವರು.

ಒಡಪಿನೊಂದಿಗೆ ಕುಣಿತ ಪ್ರಾರಂಭವಾಗುವುದು. ವೀರಗಾಸೆಯ ಕುಣಿತದಲ್ಲಿ ನಾಲ್ಕೈದು ಗತಿಗಳಿವೆ. ಒಂದೊಂದು ಗತಿಯು ಮುಗಿದ ಅನಂತರ ಯಾರಾದರೊಬ್ಬ ನರ್ತಕ ಒಡಪು ಹೇಳುವನು. ಒಡಪು ಮುಗಿದ ಅನಂತರ ವಾದ್ಯಗಳ ಭೋರ್ಗರೆತ ಮರಳಿ ಮುಂದಿನ ಗತಿಯ ಕುಣಿತ ಪ್ರಾರಂಭವಾಗುತ್ತದೆ. ಗತಿಯಿಂದ ಗತಿಗೆ ಕುಣಿತ, ಬಡಿತಗಳ ವೇಗ ಹೆಚ್ಚುತ್ತಾ ಹೋಗುವುದು.

ಒಡಪಿನ ಪ್ರಾರಂಭ ಹೀಗಿದೆ 'ಉಲ್ಲಾಸಭರಿತರಾಗಿ ಕುಳಿತಿರುವ ಎಲ್ಲಾ ಜನಗಳು ಸುಲಲಿತವಾಗಿ ಗುಲ್ಲುಮಾಡದೆ ನೀವು ಕೇಳಿರಿ, ಆಹಹ ರುದ್ರಾ ಆಹಹಾ ದೇವಾ....'

ಜಾತ್ರೆ, ಮದುವೆ, ಹಬ್ಬಗಳು, ಗೃಹಪ್ರವೇಶ, ಜಾನಪದ ಜಾತ್ರೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವೀರಗಾಸೆ ಕುಣಿತವನ್ನು ಏರ್ಪಡಿಸುವ ಪದ್ಧತಿ ಇದೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ವೀರಗಾಸೆ ಕುಣಿತ ರೂಢಿಯಲ್ಲಿದೆ.

## ವೀರಭದ್ರ ಕುಣಿತ

ಕರ್ನಾಟಕದ ದೈವಸಂಪ್ರದಾಯ ಜನಪದ ಧಾರ್ಮಿಕ ವೀರ ನೃತ್ಯ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಲಿಂಗಬೀರ, ಲಿಂಗಧೀರ, ಲಿಂಗವೀರ ಕುಣಿತವೆಂದೂ ಕರೆಯುವರು. ಇದೇ ಉತ್ತರ ಕರ್ನಾಟಕದಲ್ಲಿ ಪುರವಂತರ ಕುಣಿತವೆಂದು ಹೆಸರಾಗಿದೆ. ವೀರಭದ್ರನ ಕುಣಿತ ಮತ್ತು ಪುರವಂತರ ಕುಣಿತ ಒಂದೇ ಮೂಲದವು; ಆದರೆ ವೇಷಭೂಷಣ, ಲಾಂಛನಗಳು ಮತ್ತು ಕುಣಿತದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದೆ.

ವೀರಭದ್ರನ ವೇಷಭೂಷಣಗಳು: ತಲೆಗೆ ಚಮರೀಮೃಗದ ಚಾರಿ, ಎರಕದ ನೂರೊಂದು ಲಿಂಗಗಳು, ಹಣೆಗೆ ಭಸ್ಮ, ಗಂಧ-ಕುಂಕುಮಗಳ ಅಲಂಕಾರ, ಕಿವಿಗಳಿಗೆ ರುದ್ರಾಕ್ಷಿ ಸೇರಿಸಿದ ಕುಂಡಲಗಳು, ಕೊರಳಿಗೆ ರುದ್ರಾಕ್ಷಿ ಮಾಲೆ, ಎರಡು ಭುಜಗಳಿಗೆ ನಾಗಾಭರಣ, ಬಲಗೈಯಲ್ಲಿ ಹಿಡಿಯ ಭಾಗದಲ್ಲಿ ಸಣ್ಣ ಸಣ್ಣ ನಾಲಗೆಗಳನ್ನು ಜೋಡಿಸಿದ್ದು ಝುಳದಿಂದಲೇ ಶಬ್ದ ಬರುವ ತೋಪಡ ಎಂದು ಕರೆಯುವ ಖಡ್ಗ, ಎಡಗೈಯಲ್ಲಿ ಮುಳ್ಳಂಬು ಎಂಬ ವಿಶೇಷವಾದ ಚಾಕು, ಸೊಂಟದ ಮಧ್ಯದಲ್ಲಿ ಕೀರ್ತಿಮುಖ, ಎರಡು ಪಕ್ಕಗಳಿಗೆ ರುಂಡಮಾಲೆ, ದಕ್ಷ ಬ್ರಹ್ಮನ ಶಿರಸ್ಸು, ಸರಪಳಿ, ಹೊಕ್ಕಳಗಂಟೆ, ಮಂಡಿಗಳಿಗೆ ಐದ್ಯೆದು ಜಂಗುಗಳು, ಕಾಲಗಳಿಗೆ ಕಿರುಗೆಜ್ಜೆ, ಗಗ್ಗರ ಮತ್ತು ಕಾಲ್ಬಂಧಿಗಳು, ಮೈಮೇಲೆ ಕಾವಿಯನಿಲುವಂಗಿ, ಕಾವಿಯ ಚಲ್ಲಣ ಅಥವಾ ಕೆಂಪು ನಿಲುವಂಗಿ ಮತ್ತು ಕೆಂಪು ಚಲ್ಲಣ.

ವೀರಭದ್ರನ ಕುಣಿತದಲ್ಲಿ ಓಲಗ, ತಮಟೆ, ಕರಟೆ ವಾದ್ಯಗಳನ್ನು ಬಳಸುತ್ತಾರೆ.

ವೀರಭದ್ರ ವೇಷಧಾರಿಯು ದಕ್ಷಯಾನ, ವೀರಭದ್ರನ ಜನನ, ಮತ್ತು ವೀರಭದ್ರ ವಿಜಯಗಳನ್ನು ಹೇಳುತ್ತಾನೆ. ಇದಕ್ಕೆ ಖಡ್ಗ ಎಂದು ಹೆಸರು. ಉತ್ತರ ಕರ್ನಾಟಕದವರು ಇದನ್ನು ಒಡಪು ಎನ್ನುವರು.

ವೀರಭದ್ರನ ವೇಷಧಾರಿಯು ಖಡ್ಗಗಳನ್ನು ಹೇಳುತ್ತಾ, ಕೈಯಲ್ಲಿನ ತೋಪಡ ಮತ್ತು ಚಾಕುಗಳನ್ನು ಝಳಪಿಸುತ್ತಾ, ವೀರಾವೇಷದಿಂದ ವಾದ್ಯಗಳ ಗತ್ತಿಗೆ ತಕ್ಕಂತೆ ಲಯಬದ್ಧವಾಗಿ ವೃತ್ತಾಕಾರದಲ್ಲಿ ನರ್ತಿಸುವನು. ಸಾಮಾನ್ಯ ವ್ಯಕ್ತಿಯೊಬ್ಬ ಭಲರೇ ವೀರ, ಹರೋಹರಾ ಎಂದು ಕಾಕು ಹೇಳುವನು; ಈತ ಜಾಗಟೆ ಬಡಿಯುತ್ತಿರುತ್ತಾನೆ.

**ಪವಾಡಗಳು–ಚಮತ್ಕಾರಗಳು**

ವೀರಭದ್ರನ ವೇಷ ಧರಿಸಿದವರು ಕೆಲವು ಪವಾಡಗಳನ್ನು ಮತ್ತು ಚಮತ್ಕಾರಗಳನ್ನು ಮಾಡುವರು. ಉರಿಯುವ ಕರ್ಪೂರವನ್ನು ಅಂಗೈ ಮೇಲೆ ಮತ್ತು ನಾಲಿಗೆಯ ಮೇಲೆ ಇಟ್ಟುಕೊಳ್ಳುವುದು. ನೀರು ತುಂಬಿದ ಚೊಂಬನ್ನು ಹೊತ್ತು ನೀರು ಚಲ್ಲದಂತೆ ಸುತ್ತುವುದು. ಅಕ್ಕಿ ತುಂಬಿದ ಚೊಂಬನ್ನು ಅಕ್ಕಿ ಚಲ್ಲದಂತೆ ತಿರುಗಿಸುವುದು ಮೊದಲಾದವು. ಪುರವಂತರು ಶಸ್ತ್ರ ಪವಾಡಗಳನ್ನು ಮೆರೆಯುವರು. ಕೊಂಡಹಾಯುವ ಪವಾಡ ಮೆರೆಯುವರು. ಮದುವೆ ಮತ್ತು ಗೃಹಪ್ರವೇಶದ ಕಾರ್ಯಕ್ರಮಗಳಲ್ಲಿ ವೀರಭದ್ರ ಕುಣಿತ ಇರುವುದು.

ವೀರಶೈವರು, ಒಕ್ಕಲಿಗರು, ಹಾಲುಮತದವರು ಮತ್ತು ಮಡಿವಾಳರು ವೀರಭದ್ರನನ್ನು ಬರಮಾಡಿಕೊಳ್ಳುವರು. ವೀರಭದ್ರನ ವೇಷ ಧರಿಸುವವರು ಮಡಿಮೈಲಿಗೆ ವಿಚಾರಗಳಲ್ಲಿ ಕಟ್ಟುನಿಟ್ಟು.

## ಸೂತ್ರದ ಗೊಂಬೆಯಾಟ

ಸೂತ್ರದ ಗೊಂಬೆಯಾಟ ಪ್ರಮುಖ ಜನಪದ ಕಲೆ. ಭಾರತವಲ್ಲದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಸೂತ್ರದಗೊಂಬೆಯಾಟ ಪ್ರಸಿದ್ಧವಾದದ್ದು. ಯಕ್ಷಗಾನ ಬಯಲಾಟ, ಸೂತ್ರದ ಗೊಂಬೆ ಆಟ ಹಾಗೂ ತೊಗಲು ಗೊಂಬೆಯಾಟಗಳಲ್ಲಿ ಸಮಾನ ಅಂಶಗಳಿವೆ; ರಂಗಸಂಪ್ರದಾಯ, ಸೂತ್ರದ ಗೊಂಬೆಗಳ ವೇಷಭೂಷಣ, ಸಾಹಿತ್ಯ ಮತ್ತು ವಾದ್ಯವಿಶೇಷಗಳಲ್ಲಿ ಸಂಬಂಧವಿದೆ.

ಮೈಸೂರು ಪ್ರಾಂತದ ಸೂತ್ರದ ಗೊಂಬೆಯಾಟದಲ್ಲಿ ಮೂಡಲಪಾಯ ಯಕ್ಷಗಾನದ ಸಂಪ್ರದಾಯವೂ ಸೇರಿದೆ. ಸೂತ್ರದ ಗೊಂಬೆಯಾಟದಲ್ಲಿ ಪ್ರಾಂತೀಯ ಬದಲಾವಣೆಗಳಿವೆ. ಸೂತ್ರಗಳಿಂದ ಹಾಗೂ ಸಲಾಕಿಗಳಿಂದ ಗೊಂಬೆಯಾಟ ನಡೆಯುವುದು. ಸೂತ್ರದ ಗೊಂಬೆಯಾಟದಲ್ಲಿ ಮುಖವೀಣೆ, ತಾಳ, ಹಾರ್ಮೋನಿಯಂ, ಮತ್ತು ಮೃದಂಗಗಳನ್ನು ಬಳಸುವರು. ಸೂತ್ರದ ಗೊಂಬೆಯಾಟವು ಇಡೀ ರಾತ್ರಿ ನಡೆಯುವುದು ಹಬ್ಬ, ಜಾತ್ರೆ, ಜಾನಪದ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದೆಡೆಗಳಲ್ಲಿ ಸೂತ್ರದ ಗೊಂಬೆಯಾಟ ಇದ್ದೇ ಇರುವರು.

ಸೂತ್ರದ ಗೊಂಬೆಯಾಟದಲ್ಲಿ ಪಾತ್ರಗಳಿಗೆ ಬದಲಾಗಿ ಗೊಂಬೆಗಳು ಭಾಗವಹಿಸುವರು. ಗೊಂಬೆಯಾಟದಲ್ಲಿಯೂ 3–4 ಪಾತ್ರಗಳನ್ನು ಒಂದೇ ಗೊಂಬೆ ವಹಿಸಬಹುದು. ಗೊಂಬೆಗಳ ರುಂಡ–ಮುಂಡಗಳನ್ನು ಬದಲಿಸುತ್ತಾ ಬೇರೆ ಬೇರೆ ಪಾತ್ರಗಳೆಂಬಂತೆ ಪ್ರದರ್ಶಿಸಬಹುದು. ಗೊಂಬೆಗಳ ಮುಖ, ಮುಂಗೈಗೆ ಮಾತ್ರ ಬಣ್ಣ ಹಚ್ಚಿ ಉಳಿದ ಭಾಗಗಳನ್ನು ಬಟ್ಟೆಯಿಂದ ಮುಚ್ಚುವರು. ಗೊಂಬೆಯಾಟಕ್ಕೆ ಸೂಕ್ತವಾದ ರಂಗಸ್ಥಳ ಬೇಕು.

ಸೂತ್ರದ ಗೊಂಬೆಯಾಟಕ್ಕೆ ಮುಂಚಿತವಾಗಿ ಭಾಗವತರು ಮತ್ತು ಸಿಬ್ಬಂದಿಗಳು ಪ್ರಾರ್ಥನೆ ಪೂಜೆಯನ್ನು ನಡೆಸುವರು. ಅನಂತರ ಗಣಪತಿ, ಮಂಗಳಾರತಿ ಹಿಡಿದ ಪೂಜಾರಿ ಗೊಂಬೆಯ ಪ್ರವೇಶವಾಗುವುದು. ಚಮತ್ಕಾರಯುತ ಸಂಭಾಷಣೆಯೂ ಇರುವುದು.

ಭಾಗವತರು, ಹಿಮ್ಮೇಳದವರು, ವಾದ್ಯವೃಂದದವರು ಒಳಭಾಗದಲ್ಲಿರುವರು. ಆಯಾ ಪಾತ್ರಗಳ ಗೊಂಬೆಗಳನ್ನಾಡಿಸುವವರೇ ಅದರ ಮಾತುಗಳನ್ನು ಆಡುವರು; ಹಾಡಿನ ಭಾಗಗಳನ್ನು ಭಾಗವತರು ಹಾಡುತ್ತಾರೆ. ಸೂತ್ರದ ಗೊಂಬೆಯಾಟವು ಒಂದು ಉಪ ಕಸುಬಾಗಿದೆ.

ಸೂತ್ರದ ಗೊಂಬೆಗಳ ರಚನೆಗೆ ಸಾಗವಾನಿ, ಹತ್ತಿಮರ, ಕಡವಲುಮರ, ಆಲವಾಣದವುಗಳನ್ನು ಬಳಸುವರು.

ಸೂತ್ರಗೊಂಬೆಗಳ ಭುಜ, ಮೊಣಕ್ಕೈ, ಹಸ್ತದ ಭಾಗಗಳು, ಮೊಣಕಾಲುಗಳನ್ನು ಮರದ ಕೀಲಿನ ಸಹಾಯದಿಂದ ಚಲಿಸಲು ಅನುಕೂಲವಾಗುವಂತೆ ತಯಾರಿಸುತ್ತಾರೆ. ಒಟ್ಟು ಆರು ಸೂತ್ರಗಳ ಆಧಾರ ಸೂತ್ರದ ಗೊಂಬೆಗಳಿಗೆ ಇರುವುವು. ಸೂತ್ರದ ಗೊಂಬೆಗಳ ವೇಷಭೂಷಣಗಳು ಆಯಾ ಪ್ರಾಂತದ ವೈಶಿಷ್ಟ್ಯತೆಯನ್ನು ಹೊಂದಿರುತ್ತವೆ.

ಸೂತ್ರದ ಗೊಂಬೆಯಾಟದಲ್ಲಿ ಬಳಸುವ ಸಾಹಿತ್ಯ ಯಕ್ಷಗಾನ ಬಯಲಾಟದಲ್ಲಿ ಬಳಸುವ ಸಾಹಿತ್ಯವೇ ಆಗಿರುವುದು.

ಇಂದು ಸೂತ್ರದ ಗೊಂಬೆಯಾಟವು ಪ್ರಪಂಚದಾದ್ಯಂತ ಪ್ರಚಲಿತವಾಗಿದೆ. ಸಮಕಾಲೀನ ಉದ್ದೇಶಗಳಾದ ಸಾಕ್ಷರತೆ, ಸಮಾಜಘಾತುಕ ಶಕ್ತಿಗಳು ಮತ್ತು ದುರಭ್ಯಾಸಗಳ ಪ್ರಾತ್ಯಕ್ಷಿಕೆಗಳಿಗೂ ಸೂತ್ರದ ಗೊಂಬೆಯಾಟದ ಬಳಕೆ ಇರುವುದು.

## ಗಾರುಡಿಗೊಂಬೆ

ಬಿದಿರು ತಡಿಕೆಯಿಂದ ಮಾಡಿದ ಎರಡು ಮೂರು ಆಳೆತ್ತರದ ಗೊಂಬೆಯೇ ಗಾರುಡಿಗೊಂಬೆ. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಧರ್ಮಾಚರಣೆಯಲ್ಲಿ ಗಾರುಡಿ ಗೊಂಬೆಗಳನ್ನು ಮಾಡಿ ಕುಣಿಯುವ ಸಂಪ್ರದಾಯವಿರುವುದು. ಪುಂಗಿಯನ್ನು ಹಿಡಿದ ಗೊಂಬೆಯೇ ಗಾರುಡಿಗೊಂಬೆ. ಉತ್ಸವ, ಜನಪದಜಾತ್ರೆ, ಜಾತ್ರೆ, ಹಬ್ಬಹರಿದಿನ ಮತ್ತು ಸಾಂಸ್ಕೃತಿಕೋತ್ಸವಗಳಲ್ಲಿ ಆಕರ್ಷಕವಾದ ಗಾರುಡಿಗೊಂಬೆ ಕುಣಿತವಿರುವುದು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಾರುಡಿಗೊಂಬೆಯನ್ನೇ ತಟ್ಟಿರಾಯ ಎನ್ನುವರು. ಇದನ್ನು ಏಕವ್ಯಕ್ತಿ ಹಾಗೂ ಗುಂಪು ಪ್ರದರ್ಶನದಲ್ಲೂ ಬಳಸುವರು.

# ಅನುಬಂಧ–2

## ಜನಪದ ಕಲಾವಿದರ ವಿಳಾಸಗಳು

01. ತೊಲಯ್ಯ(ಕ್ಷೇತ್ರಾಧ್ಯಕ್ಷರು)
ಎರವ ಜನಪದ ಚೀನಿದುಡಿ ನೃತ್ಯ ಕಲಾವಿದರು
ಡಿ.ಬಿ. ಕುಪ್ಪೆ ಗ್ರಾಮ(ಅಂಚೆ) 08228255304
ಅಂತರ ಸಂತೆ ಹೋಬಳಿ
ಗೂಳೂಡಿ ಹಾಡಿ, ಹಣ್ಣಿನ ತೋಟ
ಹೆಚ್.ಡಿ.ಕೋಟೆ ತಾಲ್ಲೂಕು
ಮೈಸೂರು ಜಿಲ್ಲೆ.

02. ಕ್ಯಾತಮಾರನಳ್ಳಿ ಕಂಸಾಳೆ ಮಹಾದೇವಯ್ಯ
ನಂ. 4372, 12ನೇ ಕ್ರಾಸ್
ಅಶ್ವಥಕಟ್ಟೆ, ಕ್ಯಾತಮಾರನ ಹಳ್ಳಿ–
ನಜರಬಾದ್ ಮೊಹಲ್ಲಾ
ಮೈಸೂರು–19.

03. ಶಿವಮ್ಮ
ಶ್ಯಾನುಭೋಗನಹಳ್ಳಿ
ಹುಣಸೂರು ತಾಲ್ಲೂಕು– 9972170529
ಮೈಸೂರು ಜಿಲ್ಲೆ.

04. ದಿ. ಬೆಟ್ಟದ ಬೀಡು ಸಿದ್ಧಶೆಟ್ಟಿ
ಹೊರಳ್ಳಿ ಗ್ರಾಮ
ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ.

05. ಉಡಿಗಾಲದ ಮಹಾದೇವಪ್ಪ .ಎಲ್
ನಂ. 19, ಪಾರ್ವತಿ ನಿಲಯ,
ಶ್ರೀ ಶಿವರಾತ್ರೀಶ್ವರ ಕೃಪ– 9341856325
ಗೌರಿಶಂಕರನಗರ, 9449901127
ಊಟಿರಸ್ತೆ, ಮೈಸೂರು.

06. ಪಾರ್ವತಮ್ಮ w/o ಮಾದೇವಯ್ಯ
ಮಾದಿಗಹಳ್ಳಿ
ಬನ್ನೂರು ಹೋಬಳಿ 0821-320090
ತಿರುಮಕೂಡಲು ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ.

07. ಗಾಡಿಜೋಗಿ ಹುಂಡಿ ಹುಚ್ಚಮ್ಮ
w/o ಸಿದ್ಧಯ್ಯ
ಗಾಡಿ ಜೋಗಿ ಹುಂಡಿ, ಬನ್ನೂರು ಹೋಬಳಿ
ತಿರುಮಕೂಡಲು ನರಸೀಪುರ ತಾಲ್ಲೂಕು.
ಮೈಸೂರು ಜಿಲ್ಲೆ.

08. ಕುಕ್ಕರಹಳ್ಳಿ ಮರಿಸಿದ್ಧಮ್ಮ
ಮನೆ ನಂ. 2983, ಸಿಹೆಚ್6, ಕುಕ್ಕರಹಳ್ಳಿ,
ಸರಸ್ವತಿ ಪುರಂ, ಮೈಸೂರು-03.

09. ಗವಿಸಿದ್ಧಮ್ಮ
ನಂ. ಸಿ.ಎಚ್. 14, 3ನೇ ಮೈನ್, 2545824
ಕುಕ್ಕರಹಳ್ಳಿ, ಮೈಸೂರು-01.

10. ದಿ. ಕಂಸಾಳೆ ಮಹಾದೇವಯ್ಯ
ಜನಪದ ಕಲಾಕೇಂದ್ರ
ಮನೆ, ನಂ. 169,
ಇಡಬ್ಲ್ಯೂಎಸ್ ಸೂಯೇಜ್ ಫಾರಂರಸ್ತೆ 9243581870
ವಿದ್ಯಾರಣ್ಯಪುರಂ, ಮೈಸೂರು-08.

11. ಸಿದ್ಧರಾಮಯ್ಯ
ಈಶ್ವರ ದೇವಸ್ಥಾನದ ರಸ್ತೆ
ಸೂಯೆಜ್ ಫಾರಂ, ವಿದ್ಯಾರಣ್ಯಪುರಂ 9880859474
ಮೈಸೂರು.

12. ಮರಿಗೌಡ
ರಾಯನಹುಂಡಿ, ಆಯರಹಳ್ಳಿ ಅಂಚೆ
ವರುಣ ಹೋಬಳಿ,
ಮೈಸೂರು ತಾಲ್ಲೂಕು 9945101873
ಮೈಸೂರು ಜಿಲ್ಲೆ.

13. ಸಿದ್ಧಮ್ಮ w/o ಚಿಕ್ಕಮಾದಯ್ಯ
ಮಾದಿಗಹಳ್ಳಿ, ಬನ್ನೂರು ಹೋಬಳಿ- 0821-320090
ತಿರುಮಕೂಡಲು ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ.

14. ಮಾದಶೆಟ್ಟಿ
ಹಳೇಪುರ ಹಳ್ಳಿ (ಅಂಚೆ)
ನಂಜನಗೂಡು ತಾಲ್ಲೂಕು 9900746389
ಮೈಸೂರು ಜಿಲ್ಲೆ

15. ರಾಜು ಜೆ.ಡಿ. c/o
ತಾಲ್ಲೂಕು ಜೇನುಕುರುಬ ಜಾನಪದ ಯುವಕ ಕಲಾವಿದರ ಸಂಘ
ಕೆ.ಎಡತೊರೆ ಅಂಚೆ, ಪ್ರಭಾನಗರ
ಹೆಚ್.ಡಿ. ಕೋಟೆ ತಾಲ್ಲೂಕು ಮೈಸೂರು ಜಿಲ್ಲೆ-571125.

16. ಲಿಂಗರಾಜು ಜೆ.ಆರ್. c/o
ತಾಲ್ಲೂಕು ಜೇನುಕುರುಬ ಜಾನಪದ ಯುವಕ ಕಲಾವಿದರ ಸಂಘ
ಕೆ.ಎಡತೊರೆ ಅಂಚೆ, ಪ್ರಭಾನಗರ
ಹೆಚ್.ಡಿ. ಕೋಟೆ ತಾಲ್ಲೂಕು ಮೈಸೂರು ಜಿಲ್ಲೆ-571125.

17. ಸೋಮಯ್ಯ c/o
ತಾಲ್ಲೂಕು ಜೇನುಕುರುಬ ಜಾನಪದ ಯುವಕ ಕಲಾವಿದರ ಸಂಘ
ಕೆ.ಎಡತೊರೆ ಅಂಚೆ, ಪ್ರಭಾನಗರ
ಹೆಚ್.ಡಿ. ಕೋಟೆ ತಾಲ್ಲೂಕು ಮೈಸೂರು ಜಿಲ್ಲೆ-571125.

18. ಮಾದಪ್ಪ ಪಿ.
ಬಡಗಲ ಹುಂಡಿ, ವರುಣಾ ಹೋಬಳಿ,
ಹರಕೋಡು ತಾಲ್ಲೂಕು
ಮೈಸೂರು ಜಿಲ್ಲೆ.

19. ಕಂಸಾಳೆ ಕುಮಾರ ಸ್ವಾಮಿ
ಜಾನಪದ ಕಲಾಕೇಂದ್ರ ಮನೆ ನಂ. 169, 9243581870
ಇಡಬ್ಲ್ಯೂಎಸ್ ಸೂಯೇಜ್ ಫಾರಂರಸ್ತೆ,
ವಿದ್ಯಾರಣ್ಯಪುರಂ, ಮೈಸೂರು–08.

20. ತಂಬೂರಿ ನಂಜೇಗೌಡ c/o
ಕೆಂಪರಾಜಣ್ಣ
ನಂ. 4/2, 1ನೇ ಕ್ರಾಸ್,
ಮಂಚೇಗೌಡನ ಕೊಪ್ಪಲು ರಸ್ತೆ, ಕಿಡಗಡಣ್ಣಮ್ಮನ ಬಡಾವಣೆ,
ಕುಂಬಾರ ಕೊಪ್ಪಲು, ಮೈಸೂರು.

21. ಚಿಕ್ಕ ತಾಯಮ್ಮ
ಮಾದಿಗಹಳ್ಳಿ
ಬನ್ನೂರು ಹೋಬಳಿ
ತಿರುಮಕೂಡಲು ನರಸೀಪುರ ತಾಲ್ಲೂಕು 230090
ಮೈಸೂರು ಜಿಲ್ಲೆ.

22. ಚಂದ್ರಪ್ಪ ವೈ.ಎಸ್.
ಯಡಹಳ್ಳಿ, ಹನುಮನಾಳು(ಅಂಚೆ) 9342972422
ಬನ್ನೂರು ಹೋಬಳಿ, ತಿರುಮಕೂಡಲು
ನರಸೀಪುರ ತಾಲ್ಲೂಕು–ಮೈಸೂರು ಜಿಲ್ಲೆ. 9343484130

23. ಬಸವಣ್ಣ ಹಲ್ಲರೆ s/o
ನಾಗಲಿಂಗಪ್ಪ, ಹಲ್ಲರೆ ಗ್ರಾಮ,
ನಂಜನಗೂಡು ತಾಲ್ಲೂಕು 9972797259
ಹುಲ್ಲಹಳ್ಳಿ ಹೋಬಳಿ
ಮೈಸೂರು ಜಿಲ್ಲೆ.

24. ನಿಂಗಮ್ಮ w/o ಮಲ್ಲಯ್ಯ
ಮಾರಗೌಡನಹಳ್ಳಿ, ಬನ್ನೂರು ಹೋಬಳಿ–
ತಿರುಮಕೂಡಲು ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ.

25. ಮಹದೇವಶೆಟ್ಟಿ s/o
ದೊಡ್ಡಮಾದಶೆಟ್ಟಿ
ತರಗಲೆಗ್ರಾಮ, ಕೊಪ್ಪಪುರ ಅಂಚೆ 9972726405
ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ.

26. ಮಹದೇವಯ್ಯ ಪಿ.ಆರ್.
ಮಾದಿಗಹಳ್ಳಿ
ಬನ್ನೂರು ಹೋಬಳಿ
ತಿರುಮಕೂಡಲು ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ.

27. ರಾಮಣ್ಣ ಯು.ಎಸ್.
ನಂ. 1123, ಕೇಶವದೀಪ, ಲಲಿತಾದ್ರಿ
1ನೇ ಕ್ರಾಸ್, ಕುವೆಂಪುನಗರ, 2560931
ಮೈಸೂರು–570023.

28. ಮಾದನಾಯಕ ಟಿ.ಎಸ್
ತಿಪ್ಪೂರು, ಕೆ.ಆರ್. ನಗರ ತಾಲ್ಲೂಕು
ಮೈಸೂರು ಜಿಲ್ಲೆ.

29. ಕಾಳಮ್ಮ
ತುರುಗನೂರು
ಬನ್ನೂರು ಹೋಬಳಿ
ತಿರುಮಕೂಡಲು ನರಸೀಪುರ ತಾಲ್ಲೂಕು 9241980284
ಮೈಸೂರು ಜಿಲ್ಲೆ.

30. ಕೃಷ್ಣನಾಯಕ
ತಿಪ್ಪೂರು
ಕೆ.ಆರ್.ನಗರ ತಾಲ್ಲೂಕು–
ಮೈಸೂರು ಜಿಲ್ಲೆ

31. ನರಸಿಂಹ ನಾಯಕ ಟಿ.ಎಸ್.
ತಿಪ್ಪೂರು (ಅಂಚೆ)
ಕೆ.ಆರ್. ನಗರ ತಾಲ್ಲೂಕು 9945276629
ಮೈಸೂರು ಜಿಲ್ಲೆ.

32. ಸಂಪತನಾಯಕ ಟಿ.ಎಸ್.
ತಿಪ್ಪೂರು(ಅಂಚೆ)–
ಕೆ.ಆರ್.ನಗರ ತಾಲ್ಲೂಕು
ಮೈಸೂರು ಜಿಲ್ಲೆ.

33. ನಂಜನಗೂಡು ನಾಗರಾಜು
ಗಾರುಡಿಗೊಂಬೆ ಕಲಾವಿದರು
ಹಳ್ಳದಕೇರಿ–9972657579
ಮೈಸೂರು ಜಿಲ್ಲೆ.

34. ಚಿಕ್ಕಮರಿಯಪ್ಪ
ಮನೆ ನಂ, 131, 6ನೇ ಮುಖ್ಯರಸ್ತೆ, 2343632
9ನೇ ಕ್ರಾಸ್, ಟಿ.ಕೆ. ಲೇಔಟ್,
ಮೈಸೂರು.

35. ಗೂಳಿ ಮಾದಶೆಟ್ಟಿ
ಹೆಮ್ಮರಗಾಲ
ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ.

36. ಮಾರಶೆಟ್ಟಿ
ನೇರಳೆ ಗ್ರಾಮ
ನಂಜನಗೂಡು ತಾಲ್ಲೂಕು 9845056889
ಮೈಸೂರು ಜಿಲ್ಲೆ.

37. ಕುಮಾರ ಜೆ.
ನೇರಳೆಗ್ರಾಮ
ನಂಜನಗೂಡು ತಾಲ್ಲೂಕು-
ಮೈಸೂರು ಜಿಲ್ಲೆ.

38. ಸ್ವಾಮಿ
ನೇರಳೆಗ್ರಾಮ
ನಂಜನಗೂಡು ತಾಲ್ಲೂಕು-
ಮೈಸೂರು ಜಿಲ್ಲೆ.

39. ಪುಟ್ಟಶಿವರಾಜು
ಮನೆ. ನಂ. 131, 6ನೇ ಮೇನ್ 2343632
9ನೇ ಕ್ರಾಸ್, ತೊಣಚಿಕೊಪ್ಪಲು
ಮೈಸೂರು.

40. ನಾರಾಯಣಶೆಟ್ಟಿ
ನೇರಳೆ ಗ್ರಾಮ(ಅಂಚೆ)
ನಂಜನಗೂಡು ತಾಲ್ಲೂಕು 326695
ಮೈಸೂರು ಜಿಲ್ಲೆ.

41. ಮಾದೇವಶೆಟ್ಟಿ
ನೇರಳೆಗ್ರಾಮ
ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ.

42. ಕಿರಾಳು ನಾಗಪ್ಪ ಮಹೇಶ
ನಂ. 161, ಶ್ರೀಗೌರಿಶಂಕರನಗರ 9448900034
ನಂಜನಗೂಡು ರಸ್ತೆ, ಕೆ.ಆರ್. ಮೊಹಲ್ಲಾ
ಮೈಸೂರು-4.

43. ವೆಂಕಟ ಸ್ವಾಮಯ್ಯ
ಶ್ಯಾನುಭೋಗನಹಳ್ಳಿ ಗ್ರಾಮ–ಅಂಚೆ 08223–320183
ಹುಣಸೂರು ತಾಲ್ಲೂಕು ಮೈಸೂರು ಜಿಲ್ಲೆ.

44. ದೊಡ್ಡ ಮಾದಶೆಟ್ಟಿ s/o ಕಟರಶೆಟ್ಟಿ
ತರದಲೆ
ಕೂಡ್ಲಾಪುರ(ಅಂಚೆ) 9972726405
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

45. ಗೋವಿಂದರಾಜು ಹೆಚ್.ಜೆ.
ಜವರಯ್ಯ
ಹಂಪಾಪುರ–571 601.

46. ಪ್ರಭುಸ್ವಾಮಿ s/o ಸಿದ್ಧಪ್ಪ ಉಪಾಪಣ್ಣ
ಯಡಹಳ್ಳಿ, ಬನ್ನೂರು ಹೋಬಳಿ– 9945285868
ತಿರುಮಕೂಡಲು ನರಸೀಪುರ ತಾಲ್ಲೂಕು.
ಮೈಸೂರು ಜಿಲ್ಲೆ.

47. ಬಸವರಾಜನಾಯ್ಕ s/o ಚಿಕ್ಕನಾಯ್ಕ
ಮಾದಹಳ್ಳಿ ಕೊಪ್ಪಲು–
ಹುಣಸೂರು
ಮೈಸೂರು ಜಿಲ್ಲೆ.

48. ಚಲುವಾಚಾರ್ ಡಿ.ಎನ್.
ಬೆಟ್ಟದಪುರ–9886714546
ಪಿರಿಯಾಪಟ್ಟಣ ತಾಲ್ಲೂಕು
ಮೈಸೂರು ಜಿಲ್ಲೆ.

49. ಸಣ್ಣಶೆಟ್ಟಿ ಕೆ.ಪಿ.
ಕಟ್ಟೆಮಳಲವಾಡಿ (ಅಂಚೆ)–
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

50. ಶಿವಣ್ಣ
ಸಬ್ಬನಹಳ್ಳಿ, ಹಳೇಬೀಡು ಅಂಚೆ, 9901235844
ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

51. ಅಪ್ಪಣ್ಣಾಚಾರ್
ಗಂಧನಹಳ್ಳಿ (ಅಂಚೆ) ಹೊಸ ಅಗ್ರಹಾರ ಹೋಬಳಿ
ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ.

52. ಬಸವಯ್ಯ ಸಿ.
ಗಂಗೇನಹಳ್ಳಿ (ಅಂಚೆ)
ಬಿಳಿಕೆರೆ ಹೋಬಳಿ 240664
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

53. ವೀರಭದ್ರಚಾರ್ಯ
ವಡೇರ ಹೊಸಹಳ್ಳಿ ಗ್ರಾಮ 9343021708
ಬಿಳಿಕೆರೆ ಹೋಬಳಿ 9972336237
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

54. ಕೃಷ್ಣಶೆಟ್ಟಿ ಹೆಚ್.ಆರ್.
ಹಳೇಬೀಡು
ಬಿಳಿಕೆರೆ ಹೋಬಳಿ 08222-210008
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

55. ಗೋವಿಂದದಾಸ ಎಚ್.ಎನ್.
ಹಂಸಾಪುರ
ಕೆ.ಆರ್. ನಗರ ತಾಲ್ಲೂಕು 9342217735
ಮೈಸೂರು ಜಿಲ್ಲೆ.

56. ಚಿಕ್ಕೇಗೌಡ
ಕಚುವಿನ ಹಳ್ಳಿ
ನೇರಳೆಕುಪ್ಪೆ ಅಂಚೆ–
ಹುಣಸೂರು ತಾಲ್ಲೂಕು ಮೈಸೂರು ಜಿಲ್ಲೆ.

57. ಮಹದೇವು s/o ನಿಂಗಯ್ಯ
ಸಿದ್ಧನ ಕೊಪ್ಪಲು
ಹುಣಸೂರು ತಾಲ್ಲೂಕು
ಮೈಸೂರುಜಿಲ್ಲೆ.

58. ಮಲ್ಲಯ್ಯ ಬೆಟ್ಟದೂರುs/oಹುಚ್ಚಯ್ಯ
ಬೆಟ್ಟದೂರು ಗ್ರಾಮ
ಹಳೇಬೀಡು ಅಂಚೆ 9964600257
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

59. ರಾಜು ಹೊನ್ನಿಕುಪ್ಪೆ ಸಿ.
ಹೊನ್ನಿಕುಪ್ಪೆ
ಸಿ.ಬಿ.ಟಿ. ಕಾಲೋನಿ (ಅಂಚೆ) 9945844437
ಹುಣಸೂರು ಅಂಚೆ, ಮೈಸೂರು ಜಿಲ್ಲೆ.

60. ಬಸವಯ್ಯ ಕೊಳಗಟ್ಟಹಳ್ಳಿ
ಕೊಳಗಟ್ಟಹಳ್ಳಿ–9342980671
ಶ್ಯಾನುಭೋಗನಹಳ್ಳಿ ಅಂಚೆ, ಬಿಳಿಕೆರೆ ಹೋಬಳಿ, 9342950671
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

61. ಜವರಾಯಿ s/o ನಿಂಗಯ್ಯ
ಸೋಲಿಗರ ಬೀದಿ 9845911653
ಕಲ್ಕುಣಿಕೆ.

62. ಗುರುಸ್ವಾಮಪ್ಪ
ಚನ್ನಸೋಗೆಹಳ್ಳಿ, ತಕ್ಕೆ ಕೆರೆ ಅಂಚೆ
ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

63. ಲಕ್ಷ್ಮಣಮೂರ್ತಿ
ಕುಪ್ಪೆಗ್ರಾಮ(ಬಾಪೂಜಿಕಾಲೋನಿ)
ಬೋಳನಹಳ್ಳಿ ಅಂಚೆ–9341982268
ಬಿಳಿಕೆರೆ ಹೋಬಳಿ, ಹುಣೂಸೂರು ತಾಲ್ಲೂಕು 9900318954
ಮೈಸೂರು ಜಿಲ್ಲೆ.

64. ನಾರಾಯಣಚಾರ್ ಬಿ.ಎಸ್.
ಕೊಮ್ಮೆಗೌಡನ ಕೊಪ್ಪಲು
ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ
ಹಳೇಬೀಡು ಅಂಚೆ–9342029245
ಮೈಸೂರು ಜಿಲ್ಲೆ.

65. ಶಿವಣ್ಣನಾಯಕ ವೈ.ಡಿ.
ಯಲಚವಾಡಿ, ಚಿಕ್ಕಬೀಚನಹಳ್ಳಿ ಅಂಚೆ, 9902308776
ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

66. ರಾಮಯ್ಯ s/o ಕರಿಯಯ್ಯ
ಅಗ್ರಹಾರ, ಕಟ್ಟೆಮಳಲವಾಡಿ ಅಂಚೆ–
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

67. ಸೋಮಣ್ಣ ಎಂ.ಡಿ.
ಮಾದಳ್ಳಿ ಕೊಪ್ಪಲು, ಬನ್ನಿಕುಪ್ಪೆ ಅಂಚೆ
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

68. ಮೂರ್ತಿ ಕೆ.ಆರ್. s/o
ರಾಮಯ್ಯ
ಕಿರಂಗೂರು ಗ್ರಾಮ, ಹನಗೋಡು ಅಂಚೆ,- 9480438378
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

69. ಜವರಯ್ಯ
ಹೆಬ್ಬಾಳು ಗ್ರಾಮ, ಮುಳ್ಳೂರು ಅಂಚೆ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

70. ಬಸವನಾಯ್ಕ s/o ಚಿಕ್ಕಪುಟ್ಟನಾಯ್ಕ
ಮಲ್ಲೈನಕೊಪ್ಪಲು
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.

71. ನಾಗಣ್ಣಾಚಾರ್ಯ ವಿಷಕಂಠಚಾರಿ
ಮಧುಗಿರಿಕೊಪ್ಪಲು
ಬನ್ನಿಕುಪ್ಪೆ ಅಂಚೆ- 9972657037
ಹುಣಸೂರು ತಾಲ್ಲೂಕು
ಮೈಸೂರು ಜಿಲ್ಲೆ.



ಜಾನಪದದ ಸರ್ವಾಂಗೀಣವೂ, ತಲಸ್ಪರ್ಶಿಯೂ ಆದ ಅಧ್ಯಯನ ಇಂದಿನ ತುರ್ತು. ಬದಲಾದ ಕಾಲಮಾನ, ವಸಾಹತೋತ್ತರ ಜಿಜ್ಞಾಸೆ, ಆಧುನಿಕತೆಗಳ ಆಯಾಮಗಳನ್ನು ಮೀರಿದ ದೇಶಿ ಹುಡುಕಾಟ ಹಿಂದೆಂದಿಗಿಂತಲೂ ಇಂದು ಪ್ರಸ್ತುತ.

ಆ ನೆಲೆಯಲ್ಲಿ ಅಕಾಡೆಮಿ ಭಿನ್ನ ಆಲೋಚನೆಗಳಿಂದ ತನ್ನನ್ನು ಪುನಃ ರೂಪಿಸಿಕೊಳ್ಳುತ್ತಿದೆ. ಗ್ರಾಮೀಣ ಜಾನಪದದ ಬೆನ್ನೆಲುಬಾದ ಕಲಾವಿದರಿಗೆ ವೇದಿಕೆಗಳನ್ನು ಕಲ್ಪಿಸಿಕೊಡುವುದರ ಜೊತೆ ಜಾನಪದದ ಬೌದ್ಧಿಕ ಅಸ್ತಿತ್ವಕ್ಕೂ ಯತ್ನಿಸಲಾಗಿದೆ. ಆ ದಿಕ್ಕಿನಲ್ಲಿ ಅಕಾಡೆಮಿ ಹಮ್ಮಿಕೊಳ್ಳುವ ವಿಚಾರಸಂಕಿರಣಗಳು ಗಮನಾರ್ಹ. ಆಗಾಗಿ ಅಕಾಡೆಮಿ ಅವ್ಯಾಹತವಾಗಿ ಕ್ರಿಯಾಶೀಲವಾಗಿದೆ.

30 ಜಿಲ್ಲೆಗಳ ಕಲಾವಿದರ ಪರಿಚಯದ ಮಾಲಿಕೆಗಳು ಅಕಾಡೆಮಿಯ ಸ್ತುತ್ಯ ಪ್ರಕಟಣೆಗಳಾಗಿವೆ. ದೇಶೀಯತೆಯ ವಕ್ತಾರರಾದ, ಸಾಂಸ್ಕೃತಿಕ ರಾಯಭಾರಿಗಳಾದ ಈ ಕಲಾವಿದರನ್ನು ಅಕ್ಷರ ಲೋಕಕ್ಕೆ ಪರಿಚಯಿಸುವ ಉದ್ದೇಶದ ಈ ಮಾಲಿಕೆ ಜನಪದರಿಗೆ ಹಾಗೂ ಜನಪದಕ್ಕೆ ನಿಜವಾಗಿಯೂ ಸಲ್ಲಿಸಿದ ಗೌರವವಾಗಿದೆ.

**ಡಾ. ಎಸ್. ಪ್ರಸಾದಸ್ವಾಮಿ**
**ರಿಜಿಸ್ಟ್ರಾರ್**
**ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು**



ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು